
# ಡಾ. ಸಿ. ಆರ್. ರೆಡ್ಡಿ

ಡಿ. ಆಂಜನೇಯಲು



K
891.482 092
R 246 R

K
891.482 092
R 246 R



INDIAN INSTITUTE
OF
ADVANCED STUDY
LIBRARY, SHIMLA



*Dr. C. R. Reddy* – Kannada translation by R. V. S. Sundaram of D. Anjaneyulu's Monograph in English, Sahitya Akademi, New Delhi (1986) I
SAHITYA AKADEMI
R REVISED PRICE Rs. 15-00

© *Sahitya Akademi*
*First published 1986*

K
891.482.09...

Library IIAS, Shimla
K 891.482 092 R 246 R
00117200

**ಸಾಹಿತ್ಯ ಅಕಾದೆಮಿ**

**ಪ್ರಧಾನ ಕಾರ್ಯಾಲಯ**

ರವೀಂದ್ರಭವನ, ೩೫ ಫಿರೋಜಶಾಹ ರಸ್ತೆ, ನವದೆಹಲಿ ೧೧೦ ೦೦೧

**ಪ್ರಾದೇಶಿಕ ಕಾರ್ಯಾಲಯಗಳು**

೨೯ ಎಲ್ಡಾಮ್ಸ್ ರಸ್ತೆ, ತೇನಾಂಪೇಟೆ, ಮದ್ರಾಸ್ ೬೦೦ ೦೧೮

ಬ್ಲಾಕ್ V ಬಿ. ರವೀಂದ್ರ ಸರೋಬರ್ ಸ್ಟೇಡಿಯಮ್, ಕಲ್ಕತ್ತಾ ೭೦೦ ೦೨೯

೧೭೨ ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ
ದಾದರ್, ಮುಂಬಯಿ ೪೦೦ ೦೧೪

SAHITYA AKADEMI
R REVISED PRICE Rs. 15-00

Indian Institute of Advanced Study
117200
10.12.04
SHIMLA

ಮುದ್ರಕರು : ಹರ್ಷ ಪ್ರಿಂಟರ್ಸ್, ಮೈಸೂರು ೫೭೦ ೦೦೪

# ಅನುಕ್ರಮಣಿಕೆ


| | | |
|---|---|---|
| 1. ಪ್ರವೇಶಿಕೆ | ... | 5 |
| 2. ಬಾಲ್ಯ ಜೀವನ | ... | 7 |
| 3. ಮದ್ರಾಸ್ ಮತ್ತು ಕೇಂಬ್ರಿಡ್ಜ್ | ... | 9 |
| 4. ಬರೋಡ ಮತ್ತು ಮೈಸೂರು | ... | 13 |
| 5. ರಾಜಕೀಯಕ್ಕೆ ಪ್ರವೇಶ | ... | 17 |
| 6. ಕುಲಪತಿ | ... | 20 |
| 7. ಕವಿ | ... | 24 |
| 8. ವಿಮರ್ಶಕರು | ... | 33 |
| 9. ಪ್ರಬಂಧಕಾರರು | ... | 46 |
| 10. ಸಾಮಾಜಿಕ ವಿಜ್ಞಾನಿ | ... | 51 |
| 11. ಯುಗಪ್ರವರ್ತಕ | ... | 55 |
| ರೆಡ್ಡಿಯವರ ಜೀವನದ ಮೈಲಿಗಲ್ಲುಗಳು | ... | 60 |
| ಅನುಬಂಧ | ... | 62 |
| ಗ್ರಂಥಸೂಚಿ | ... | 67 |

# ಕೃತಜ್ಞತೆಗಳು

ಅನೇಕ ವರ್ಷಗಳಿಂದ ನನಗೆ ಆಸಕ್ತಿ ಇರುವ ವಿಷಯುವನ್ನು ಕುರಿತು ಕೆಲಸ ಮಾಡಲು ಪ್ರೋತ್ಸಾಹಿಸಿದ ಸಾಹಿತ್ಯ ಅಕಾದೆಮಿಗೆ;

ಸಿ.ಆರ್.ರೆಡ್ಡಿಯವರಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಅವರ ಆತ್ಮಕೃತ್ರಮ ಗ್ರಂಥಭಂಡಾರದಲ್ಲಿ ನೋಡಲು ಅನುಮತಿ ನೀಡಿದ ಶ್ರೀ ಬಿ.ಆರ್. ನಂದಾ ಮತ್ತು ಶ್ರೀ ವಿ.ಸಿ. ಜೋಷಿ (ನವದೆಹಲಿಯ ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಭಂಡಾರಗಳ ನಿರ್ದೇಶಕರು ಹಾಗೂ ಪುರಾತತ್ತ್ವ ವಸ್ತು ಇಲಾಖೆಯ ನಿರ್ದೇಶಕರು) ಅವರುಗಳಿಗೆ;

ನನಗಾಗಿ ಡಾ. ಸಿ.ಆರ್. ರೆಡ್ಡಿಯವರ ಕಾವ್ಯವನ್ನು ಓದಿ ಆಕರ್ಷಕ ವ್ಯಾಖ್ಯಾನ ಮಾಡಿದ ಡಾ. ಡಿ.ವಿ. ಅವಧಾನಿ (ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ತೆಲುಗು ವಿಭಾಗದ ಮುಖ್ಯಸ್ಥರು) ಮತ್ತು ಶ್ರೀ ಕೆ. ಸಿ. ದಾಶರಥಿ (ಮದ್ರಾಸು) ಅವರುಗಳಿಗೆ;

ಅನೇಕ ವಿಷಯುಗಳಲ್ಲಿ ನಿಶ್ಚಿತ ಸಹಾಯ, ಸಲಹೆಗಳನ್ನಿತ್ತ ಶ್ರೀ ಎನ್. ಇನ್ನಯ್ಯ (ಹೈದರಾಬಾದಿನ ಲೇಖಕರು, ಪತ್ರಿಕೋದ್ಯಮಿ) ಅವರಿಗೆ;

ನನ್ನ ಜೊತೆ ವಿಚಾರ ವಿನಿಮಯ ನಡೆಸಿದ ಡಾ. ಎ. ರಮಾಪತಿ ರಾವ್ (ಸಂಶೋಧಕಾಧಿಕಾರಿ, ತೆಲುಗು ಅಕಾಡೆಮಿ, ಹೈದರಾಬಾದು) ಅವರಿಗೆ;

ಈ ವಿಷಯುವನ್ನು ಕುರಿತ ಉತ್ಸಾಹವನ್ನು ನನ್ನ ಜೊತೆ ಹಂಚಿಕೊಂಡುದಕ್ಕೆ ಶ್ರೀ ಸಿ.ಇ. ರಾವ್ ('ಸೋವಿಯತ್ ಭೂಮಿ') ಅವರಿಗೆ;

ಡಾ. ಸಿ. ಆರ್. ರೆಡ್ಡಿಯವರ ಭಾವಚಿತ್ರವನ್ನು ಒದಗಿಸಿದ ಶ್ರೀ ಬಿ. ಸುಬ್ಬರಾಯನ್ (ತೆಲುಗು ಭಾಷಾ ಸಮಿತಿ) ಅವರಿಗೆ;

ಕೃತಿಯನ್ನು ಪೂರ್ತಿ ಮಾಡುವಂತೆ ಆಗಾಗ್ಗೆ ಒತ್ತಾಯಿಸಿದ ನನ್ನ ಶ್ರೀಮತಿ ಹೇಮಲತಾಗೆ;

ಮುಖಪುಟವನ್ನಲಂಕರಿಸಿದ ಡಾ. ಸಿ.ಆರ್. ರೆಡ್ಡಿಯವರ ಸುಂದರ ರೇಖಾಚಿತ್ರವನ್ನು ಬರೆದ ಶ್ರೀ ಬಿ.ಡಿ. ಶರ್ಮ ಅವರಿಗೆ;

ಹಸ್ತಪ್ರತಿಯನ್ನು ಚೆನ್ನಾಗಿ ಬೆರಳಚ್ಚು ಮಾಡಿಕೊಟ್ಟ ಶ್ರೀ ಕೆ.ಎಸ್. ಬಾಲಸುಬ್ರಹ್ಮಣ್ಯಂ (ಮದ್ರಾಸು) ಮತ್ತು ಆರ್.ಆರ್. ಸಲೋತ್ರಾ (ದೆಹಲಿ) ಅವರುಗಳಿಗೆ.

ನವದೆಹಲಿ,
ಮೇ, 1973

**ಡಿ. ಆಂಜನೇಯುಲು**

# 1 ಪ್ರವೇಶಿಕೆ

ಮೇಲ್ನೋಟಕ್ಕೆ ಸಂಸ್ಕೃತಮಯವಾಗಿ ಕಂಡರೂ, ಮೂಲಭೂತವಾಗಿ ತೆಲುಗು ದ್ರಾವಿಡ ಭಾಷಾಕುಟುಂಬಕ್ಕೆ ಸೇರಿದ್ದು. ಹೊರನಾಡಿನ ಮತ್ತು ಭಾರತದ ತೌಲನಿಕ ಭಾಷಾಶಾಸ್ತ್ರಜ್ಞರ ತೀರ್ಮಾನವನ್ನು ಗೌರವಿಸುವುದಾದರೆ ಮೇಲಿನ ಅಭಿಪ್ರಾಯ ವನ್ನು ತಿರಸ್ಕರಿಸುವಂತಿಲ್ಲ. ಅವರು ತಮ್ಮ ಧೋರಣೆಯಲ್ಲಿ ವಸ್ತುನಿಷ್ಠವಾಗಿ, ಕಾರ್ಯ ವಿಧಾನದಲ್ಲಿ ವೈಜ್ಞಾನಿಕವಾಗಿರುವುದರಿಂದ ಈ ವಿಷಯದಲ್ಲಿ ನಮಗೆ ಯಾವ ಸಂಶಯವೂ ಮೂಡುವುದಿಲ್ಲ. ಐತಿಹಾಸಿಕತೆಯಿಂದ ನಮ್ಮನ್ನು ತಪ್ಪುದಾರಿಗೆಳೆಯುವ ಪ್ರಾಂತೀಯ ದುರಭಿಮಾನದಿಂದ ಅವರು ಮುಕ್ತರಾಗಿರುವರೆಂದು ನಿರೀಕ್ಷಿಸಬಹುದು.

ಲಿಖಿತ ತೆಲುಗು ಸಾಹಿತ್ಯದ ಇತಿಹಾಸ ಸುಮಾರು ಸಾವಿರ ವರ್ಷಗಳಷ್ಟು ಹಳೆ ಯದು. ಆಧುನಿಕ ಯುಗ ಮಾತ್ರ ನೂರು ವರ್ಷಗಳದು. ಅದು 19ನೆಯ ಶತಮಾನದ ಉತ್ತರಾರ್ಧದಿಂದ ಪ್ರಾರಂಭವಾಯಿತೆನ್ನಬಹುದು. ತಮ್ಮ ತಲೆಮಾರಿನ ಹಾಗೂ ಅನಂತರದ ತಲೆಮಾರಿನ ಜನಮನದ ಮೇಲೆ ಪ್ರಭಾವವನ್ನು ಬೀರಿದ ಹೆಸರುಗಳು ಮೂರು ನಾಲ್ಕು ಮಾತ್ರ ಪ್ರಮುಖವಾಗಿ ಕಂಡುಬರುತ್ತವೆ.

ಬ್ರಿಟಿಷ್ ಅಧಿಕಾರಿ ಸಿ. ಪಿ. ಬ್ರೌನ್ ಹಾಗೂ ಈತನ ಕಾಲದ ಐರೋಪ್ಯ ವಿದ್ವಾಂಸರು ನಿಘಂಟುಗಳಿಂದ ವ್ಯಾಕರಣಗಳಿಂದ ತೆಲುಗು ಪದಕೋಶವನ್ನು ನವೀನ ಗೊಳಿಸುವ ವಿಧಾನದಲ್ಲಿ ನೆರವಾದರು. ತೆಲುಗು ಆಡುನುಡಿ ಸಾಹಿತ್ಯಾಭಿವ್ಯಕ್ತಿಯ ಮಾಧ್ಯಮವಾಗಿ ಅಂಗೀಕೃತವಾಗಬೇಕೆಂದು ತಮ್ಮ ಜೀವನದುದ್ದಕ್ಕೂ ಹೋರಾಡಿದ ಗಿಡುಗು ರಾಮಮೂರ್ತಿಪಂತುಲು ಇದನ್ನು ಬೇರೆ ರೀತಿಯಲ್ಲಿ ಮುಂದುವರೆಸಿದರು.

ಇಂದಿನ ಲೇಖಕರಾರೂ ಪರವಸ್ತುಚಿನ್ನಯಸೂರಿ (1806-62)ಯನ್ನು ಆಧು ನಿಕ ಯುಗದ ಪೂರ್ವಗಾಮಿಯೆಂದು ಒಪ್ಪದಿರಬಹುದು. ಪ್ರಾಚೀನ ಭಾಷೆಯನ್ನು ಬಳಸುವುದರ ಮೂಲಕ ತೆಲುಗು ಭಾಷೆಯನ್ನು ಅವರು ಹಿಂದೂಡಿದರೆಂದು ಕೆಲವರ ವಾದ. ಆದರೆ ವ್ಯಾಕರಣಕಾರರು ಮತ್ತು ಗದ್ಯ ಲೇಖಕರಾಗಿ ಅವರ ಪಾತ್ರವನ್ನು ಯಾರೂ ಅಷ್ಟು ಸುಲಭವಾಗಿ ಅಲ್ಲಗಳೆಯುವಂತಿಲ್ಲ. ಅವರನ್ನು ಸಂಕ್ರಮಣ ಕಾಲದ ಒಂದು ಕೇಂದ್ರಬಿಂದುವೆಂದಾದರೂ ಪರಿಗಣಿಸಬೇಕಾಗುತ್ತದೆ. ಕಂದುಕೂರಿ ವೀರೇಶ ಲಿಂಗಂ ಪಂತುಲು ಸೂರಿಯವರನ್ನು ಮೊದಲು ಒಂದು ಮಾದರಿಯಾಗಿ ಸ್ವೀಕರಿಸಿದ ರಾದರೂ ಅನಂತರ ಎಚ್ಚರಗೊಂಡರು. ಇಲ್ಲದಿದ್ದರೆ ಪಂತುಲು ಆಧುನಿಕ ಸಾಹಿತ್ಯ ಪ್ರಕಾರ ಗಳ ಆದ್ಯ ಪ್ರವರ್ತಕರಾಗುತ್ತಿರಲಿಲ್ಲ ; ಸರಳ ಹಾಗೂ ಪಠನಯೋಗ್ಯ ತೆಲುಗು ಗದ್ಯ ಲೇಖಕರಾಗುತ್ತಿರಲಿಲ್ಲ. ಅವರು ಆಂಗ್ಲ ಶಿಷ್ಟಸಾಹಿತ್ಯದಿಂದಲೂ ಪ್ರಭಾವಿತರಾಗಿದ್ದಾರೆ.

ಇದೇ ಮೂಲದಿಂದ ಮತ್ತಷ್ಟು ಪ್ರಭಾವಿತರಾದವರೆಂದರೆ ಡಾ. ಸಿ. ಆರ್. ರೆಡ್ಡಿ. ವೀರೇಶಲಿಂಗಂ ಹಾಗೂ ಚಿನ್ನಯಸೂರಿ—ಈ ಇಬ್ಬರ ಗುಣಗಳನ್ನು ರೆಡ್ಡಿಯವರಲ್ಲಿ

ಕಾಣಬಹುದು. ಪಂತುಲು ಅವರ ಸಾಮಾಜಿಕ ದೃಷ್ಟಿ ಹಾಗೂ ಅನ್ವೇಷಕ ಗುಣ, ಸೂರಿಯವರ ಶಿಷ್ಟ ಸಾಹಿತ್ಯದ ಮೇಲಿನ ಒಲವು, ಸಂಪ್ರದಾಯದ ಮೇಲಿನ ಗೌರವ ರೆಡ್ಡಿಯವರಲ್ಲಿ ಬೆರೆತು ಸಫಲವಾದವು. ಚಿನ್ನಯಸೂರಿ ಗದ್ಯ ಲೇಖಕರಾಗಿಯೂ, ವೀರೇಶಲಿಂಗಂ ಮಹಾವಿದ್ವಾಂಸರಾಗಿಯೂ ಇವರಿಗೆ ಪ್ರೀತಿಪಾತ್ರರಾದರು. ಇದನ್ನು ರೆಡ್ಡಿಯವರ ಗದ್ಯ ರಚನೆಯಲ್ಲಿ ನೋಡಬಹುದು.

ದೇಶೀಯ ನೆಲೆಯಿಂದ ದೂರವಾಗದೆ ಸಮಕಾಲೀನ ಪಾಶ್ಚಾತ್ಯ ಚಿಂತನೆಯ ಪ್ರವೃತ್ತಿಗಳನ್ನು ಗಮನದಲ್ಲಿಟ್ಟುಕೊಂಡ ಇಂತಹ ಭಾರತೀಯ ವಿದ್ವಾಂಸರು ಇತ್ತೀಚಿನ ಕಾಲದಲ್ಲಿ ಮಾತ್ರವಲ್ಲದೆ ಇಂದೂ ಅಪರೂಪವೆನ್ನಬಹುದು. ತಕ್ಕಮಟ್ಟಿನ ಪಾಶ್ಚಾತ್ಯ ವಿದ್ವತ್ತು, ಪ್ರಾಂತೀಯ ದುರಭಿಮಾನ—ಈ ಎರಡೂ ಪ್ರಜ್ಞಾವಂತರಲ್ಲಿ ಒಟ್ಟುಗೂಡಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ.

ರೆಡ್ಡಿ ಕ್ರಿಯಾಶೀಲ ವ್ಯಕ್ತಿಯಾಗಿ ನಮ್ಮ ಗಮನವನ್ನು ಸೆಳೆಯುತ್ತಾರೆ. ಕನ್ನಡದಲ್ಲಿ ಬಿ. ಎಂ. ಶ್ರೀಕಂಠಯ್ಯ, ತಮಿಳಿನಲ್ಲಿ ರಾಜಮ್‌ಐಯ್ಯರ್, ಹಿಂದಿಯಲ್ಲಿ ರಾಮಚಂದ್ರ ಶುಕ್ಲ, ಬಂಗಾಳಿಯಲ್ಲಿ ಮೈಖೆಲ್ ಮಧುಸೂದನದತ್ತ—ಇಂತಹ ಆಧುನಿಕ ಕಾಲದ ಆದ್ಯ ಪ್ರವರ್ತಕರೊಂದಿಗೆ ಇವರನ್ನು ಹೋಲಿಸಬಹುದು. ರೆಡ್ಡಿಯವರನ್ನು ಚೆನ್ನಾಗಿ ಅರ್ಥಮಾಡಿಕೊಂಡರೆ ವಿಭಿನ್ನವಾದ ಐರೋಪ್ಯ ಮತ್ತು ಭಾರತೀಯ ಸಂಪ್ರದಾಯಗಳನ್ನೂ, ಆರ್ಯ ದ್ರಾವಿಡ ಸಂಪ್ರದಾಯಗಳನ್ನೂ ಅರ್ಥಮಾಡಿಕೊಂಡಂತಾಗುತ್ತದೆ. ಈ ರೀತಿಯ ಭಿನ್ನತೆಯಲ್ಲಿ ಐಕ್ಯತೆ ಅವರಲ್ಲಿತ್ತು.

# 2 ಬಾಲ್ಯಜೀವನ

ಕಟ್ಟಮಂಚಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಒಂದು ಸಣ್ಣ ಹಳ್ಳಿ. ಚಿತ್ತೂರಿನಿಂದ ಪೂರ್ವಕ್ಕೆ ಒಂದು ಮೈಲಿ ದೂರದಲ್ಲಿರುವ ಈ ಹಳ್ಳಿ ಈಗ ಚಿತ್ತೂರಿನ ಪೌರಾಡಳಿತಕ್ಕೊಳಪಟ್ಟಿದೆ. "ಆ ಕಣಿವೆಯ ಸುಂದರ ಹಳ್ಳಿ" ಅದರ ನಿವಾಸಿಗಳಿಗೆ ಚಿನಿವಾರನಿಗೆ ಚಿನ್ನದ ಬಣ್ಣ ಇದ್ದಂತೆ. ವರ್ಷಕ್ಕೊಮ್ಮೆ ಮೂರು ದಿನ ಮಾತ್ರ ಉಕ್ಕಿ ಹರಿಯುವ ರಘುರಿಯ ಬಗೆಗೂ, ಮೂರು ವರ್ಷಕ್ಕೊಮ್ಮೆ ಮಾತ್ರ ತುಂಬುವ ಊರ ಕೆರೆಯ ಬಗೆಗೂ ಆ ಹಳ್ಳಿಯವರು ಹೆಮ್ಮೆ ಪಡುತ್ತಾರೆ. ಆ ಊರು ಹಸಿರು ಮಾವಿನ ತೋಪುಗಳಿಂದ, ತೆಂಗಿನ ತೋಟಗಳಿಂದ ಉಲ್ಲಾಸ ನೀಡುವ ತಾಣ.

ದಕ್ಷಿಣ ಭಾರತದ ಇಬ್ಬರು ಗಣ್ಯ ವ್ಯಕ್ತಿಗಳು ಆ ಊರಿನವರಾಗಿದ್ದಾರೆ. ಅವರಲ್ಲೊಬ್ಬರು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮಾಂಧ್ರ ಅಧ್ಯಕ್ಷರಾದ ಪಿ. ಆನಂದಾಚಾರ್ಲು. ಇನ್ನೊಬ್ಬರು ಶಿಕ್ಷಣತಜ್ಞರು, ರಾಜಕೀಯ ವಿಚಾರಜ್ಞರು, ಪ್ರಬಂಧಕಾರರು, ಅರ್ಥಿಕತಜ್ಞರು, ಕವಿ ಮತ್ತು ವಿಮರ್ಶಕರು—ಇವೆಲ್ಲಾ ಒಟ್ಟುಗೂಡಿದ ಕಟ್ಟಮಂಚಿ ರಾಮಲಿಂಗಾರೆಡ್ಡಿ.

ರಾಮಲಿಂಗಾರೆಡ್ಡಿ 1880ರ ಡಿಸೆಂಬರ್ 10ರಂದು ಜನಿಸಿದರು.

ಆಂಧ್ರದ ರೆಡ್ಡಿಗಳು ದುಡಿಮೆಗೂ, ಆತಿಥ್ಯಕ್ಕೂ, ಧೈರ್ಯ ಸೌಶೀಲ್ಯಗಳಿಗೂ ಹೆಸರಾಗಿರುವ ಗಟ್ಟಿಮುಟ್ಟಾದ ಒಕ್ಕಲಿಗರು. ಅವರ ಪೂರ್ವಜರು ಮಧ್ಯ ಯುಗಗಳಲ್ಲಿ ಪ್ರಮುಖ ರಾಜವಂಶದವರಾಗಿದ್ದರು. ಅದಕ್ಕೇ ಅವರಲ್ಲಿ ಆತ್ಮಗೌರವ, ಔನ್ನತ್ಯ ಕಂಡು ಬರುತ್ತವೆ.

ರಾಮಲಿಂಗಾರೆಡ್ಡಿಯವರ ವಂಶದ ಮುಖ್ಯ ವೃತ್ತಿ ಬೇಸಾಯವಾದರೂ ಶ್ರೇಷ್ಠ ವಿದ್ವತ್ತಿನ ಸಂಪ್ರದಾಯ ಅವರಿಗಿತ್ತು. ಮುಖ್ಯವಾಗಿ ಚಿತ್ತೂರು ಜಿಲ್ಲೆಯ ಮಧ್ಯಮವರ್ಗದ ಶ್ರೀಮಂತ ಕುಟುಂಬಗಳ ವಿಷಯದಲ್ಲಿ ಇದು ನಿಜವಾಗಿತ್ತು. 'ಭಾಸ್ಕರ ಶತಕ'ದ ಕರ್ತೃವಾದ ರೆಡ್ಡಿಯವರ ಅಜ್ಜ ಕವಿ. ಅವರ ಹೆಸರನ್ನೇ ರೆಡ್ಡಿಯವರಿಗೆ ಇಡಲಾಯಿತು. ವೃತ್ತಿಯಿಂದ ವಕೀಲರಾದ ಅವರ ತಂದೆ ಸುಬ್ರಹ್ಮಣ್ಯರೆಡ್ಡಿ ಕವಿ ಎನ್ನುವುದಕ್ಕಿಂತ ಪಂಡಿತರೆನ್ನಬಹುದು. ಅವರು ಧಾರ್ಮಿಕ ದೃಷ್ಟಿಯಿಂದ 'ಭಾರತಸಾರ ತತ್ತ್ವಾವಳಿ' ಹಾಗೂ 'ಭಾಗವತಸಾರ ಮುಕ್ತಾವಳಿ' ಎಂಬ ಎರಡು ಸಂಕಲನಗಳನ್ನು ಪ್ರಕಟಿಸಿದರು. ಅವರು ಸಜ್ಜನರಾದ ಪ್ರಥಮ ಶ್ರೇಣಿಯ ಪ್ಲೀಡರಾಗಿದ್ದರು. ಹೆಂಗಸರು ಕೇವಲ ಅಡಿಗೆ ಮನೆಗೇ ಸೀಮಿತವಾಗಿದ್ದ ಕಾಲದಲ್ಲಿ ಇವರ ಸೋದರಿಯೊಬ್ಬರು 'ವರದರಾಜ ಶತಕ'ವೆಂಬ ಭಕ್ತಿ ಗ್ರಂಥವನ್ನು ಬರೆದಿದ್ದರು.

ತೆಲುಗು ಕೃತಿಗಳಾದ ಮಹಾಭಾರತ, ಭಾಗವತ ಹಾಗೂ ರಾಮಾಯಣಗಳನ್ನು ರೆಡ್ಡಿ ಅವರ ಮನೆಯಲ್ಲಿ ಓದುತ್ತಿದ್ದರು. ಬಾಲ್ಯದಿಂದಲೂ ಅವುಗಳ ನಿರಂತರ ಪರಿಚಯ

ವಿದ್ದ ರೆಡ್ಡಿಯವರಿಗೆ ಮಹಾಭಾರತವೆಂದರೆ ತುಂಬ ಅಭಿಮಾನ. ಚಿಕ್ಕ ವಯಸ್ಸಿನಲ್ಲೇ ರಾಮಲಿಂಗಾರೆಡ್ಡಿಯವರು ಮಹಾಭಾರತವನ್ನು ಸರಾಗವಾಗಿ ಓದಬಲ್ಲವರಾಗಿದ್ದರು. ಅಷ್ಟೇ ಅಲ್ಲದೆ ಅದನ್ನು ಅರ್ಥಮಾಡಿಕೊಂಡು ವಿವರಿಸಲೂ ಶಕ್ತರಾಗಿದ್ದರು. ಮನೆಯಲ್ಲಿದ್ದ ಅತ್ತೆ, ಅಜ್ಜಿಯವರಿಂದ ಜನಪದ ಕಥೆಗಳನ್ನು ಅದರಲ್ಲೂ ಕಿನ್ನರ ಕಥೆಗಳನ್ನು ಕೇಳುವ ಅವಕಾಶವೂ ಅವರಿಗಿತ್ತು. 12 ವರ್ಷಕ್ಕೇ ಇಂತಹ ನೂರಾರು ಕತೆಗಳನ್ನು ಅವರು ಕಲಿತಿದ್ದರು. ವಿದ್ಯೆ ಮತ್ತು ಸಂಸ್ಕೃತಿ ಅಕ್ಷರಸ್ಥರಿಗೇ ಮೀಸಲಲ್ಲವೆಂಬುದು ಅವರ ದೃಢವಾದ ಅಭಿಪ್ರಾಯವಾಗಿತ್ತು.

ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ರೆಡ್ಡಿಯವರು ಚಿತ್ತೂರಿನ ಪ್ರೌಢಶಾಲೆಗೆ ಸೇರಿದರು. ಇವರ ಕುಟುಂಬದ ಮಿತ್ರರಾದ ಕುಪ್ಪನ ಅಯ್ಯಂಗಾರ್ ಅಲ್ಲಿ ತೆಲುಗು ಪಂಡಿತರಾಗಿದ್ದರು. ರೆಡ್ಡಿಯವರಿಗೆ ತೆಲುಗು ವ್ಯಾಕರಣ, ಶಬ್ದಶಾಸ್ತ್ರ ಮತ್ತು ಛಂದಸ್ಸುಗಳಲ್ಲಿ ಆಸಕ್ತಿ ಹುಟ್ಟಿಸಿದವರು ಆ ಪಂಡಿತರೇ. ಅವರ ಬಳಿ ರೆಡ್ಡಿಯವರು ಓದಿದ ಪುಸ್ತಕಗಳೆಂದರೆ 'ನಲೋಪಾಖ್ಯಾನಂ' (ನಿಷಧರಾಜ ನಳನನ್ನು ಕುರಿತದ್ದು) ಮತ್ತು 'ಸರ್ವಲಕ್ಷಣಸಾರಂ' (ತೆಲುಗು ಭಾಷಾತತ್ತ್ವಗಳನ್ನು ಹೇಳುವ ಕೃತಿ). ರೆಡ್ಡಿ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಅದರಲ್ಲೂ ಮುಖ್ಯವಾಗಿ ತೆಲುಗು, ಇಂಗ್ಲಿಷ್, ಇತಿಹಾಸ ಮತ್ತು ಭೂಗೋಳಶಾಸ್ತ್ರಗಳಲ್ಲಿ ಗಟ್ಟಿಗರಾಗಿದ್ದರು. ಗಣಿತ ಅಂದಿಗೂ ಎಂದಿಗೂ ಅವರಿಗೆ ಹಿಡಿಸದ ವಿಷಯ.

1890ರಲ್ಲಿ ಪ್ರೌಢಶಾಲೆಗೆ ಸೇರಿ 1896ರಲ್ಲಿ 'ಸ್ಕೂಲ್‌ಫೈನಲ್' ಪರೀಕ್ಷೆಯಲ್ಲಿ ತೇರ್ಗಡೆಯಾದರು. ಪರೀಕ್ಷೆಗೆ ಉರುಹೊಡೆಯುವ ಅಭ್ಯಾಸ ಅವರಿಗಿರಲಿಲ್ಲ. ಶ್ರೀಮತಿ ಬೆಸೆಂಟರ ಭಾಷಣಗಳಿಂದ ಪ್ರಚಾರಕ್ಕೆ ಬಂದ ಥಿಯೊಸಾಫಿಕಲ್ ಚಳುವಳಿಯಲ್ಲಿ ಆಸಕ್ತಿ ಉಂಟಾಗಿ ರೆಡ್ಡಿಯವರ ಪಠ್ಯಗಳ ಮೇಲಿನ ಶ್ರದ್ಧೆ ಬೇರೆ ಕಡೆಗೆ ಹರಿಯಿತು. ಕೊನೆಯ ಹಂತದಲ್ಲಿ ಅತಿ ಕನಿಷ್ಠ ಅಭ್ಯಾಸದಿಂದಲೇ ಅವರು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದರು. ಶಾಲೆಯಿಂದ ಹೊರಬಂದ ಕಾಲಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಸಾಕಷ್ಟು ಜ್ಞಾನ, ತೆಲುಗು ಪದ್ಯರಚನೆಯಲ್ಲಿ ಸಾಮರ್ಥ್ಯ ಅವರಿಗೆ ಬಂದವು. ಚಿತ್ತೂರಿನ ಸಂಕುಚಿತ ವಾತಾವರಣಕ್ಕೆ ಸೀಮಿತವಾಗದೆ ಅವರು ಹೊರ ಪ್ರಪಂಚದ ಕಡೆಗೆ ತಮ್ಮ ಗಮನ ಹರಿಸಿದರು.

# 3 ಮದ್ರಾಸ್ ಮತ್ತು ಕೇಂಬ್ರಿಡ್ಜ್

ಆ ಕಾಲದ ಅನೇಕ ದಾಕ್ಷಿಣಾತ್ಯ ಯುವಕರಂತೆಯೇ ರಾಮಲಿಂಗಾರೆಡ್ಡಿ ಕಾಲೇಜು ಶಿಕ್ಷಣಕ್ಕಾಗಿ ಮದ್ರಾಸಿಗೆ ತೆರಳಿದರು. ಸ್ನೇಹ ಜೀವನಕ್ಕೂ, ಶೈಕ್ಷಣಿಕ ಮಟ್ಟಕ್ಕೂ ಹೆಸರುವಾಸಿಯಾಗಿದ್ದ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜು ಅವರನ್ನು ಆಕರ್ಷಿಸಿತು. ಸ್ಕಾಟಿಷ್‌ಮಿಶನ್ ನಡೆಸುತ್ತಿದ್ದ ಆ ಕಾಲೇಜು ನಮ್ಮ ದೇಶದ ತೀರಹಳೆಯ ವಿದ್ಯಾಸಂಸ್ಥೆಗಳಲ್ಲೊಂದಾಗಿದೆ. ನಿಷ್ಠಾವಂತ ಉಪಾಧ್ಯಾಯರೂ, ಅಪರೂಪದ ಮೋಹಕ ವ್ಯಕ್ತಿತ್ವವುಳ್ಳವರಾದ ವಿಲಿಯಂ ಮಿಲ್ಲರ್ ಆಗ ಪ್ರಿನ್ಸಿಪಾಲರಾಗಿದ್ದರು.

ಯುವವಿದ್ಯಾರ್ಥಿ ಜನರಲ್ಲಿ ಶಿಸ್ತು ಮತ್ತು ದುಡಿಮೆಗಳ ಜೊತೆಗೆ ಆತ್ಮವಿಶ್ವಾಸ ಮತ್ತು ಆತ್ಮಾಭಿವ್ಯಕ್ತಿಯ ಅಭ್ಯಾಸವನ್ನು ಬೆಳೆಸಿದವರು ಡಾ. ಮಿಲ್ಲರ್. ಅವರ ವ್ಯಕ್ತಿತ್ವದಿಂದ ರಾಮಲಿಂಗಾರೆಡ್ಡಿ ತುಂಬ ಪ್ರಭಾವಿತರಾದರು. ಇತಿಹಾಸ ಪ್ರಾಧ್ಯಾಪಕರಾಗಿದ್ದ ಕೆಲ್ಲೆಟ್ ಆ ವಿಷಯದಲ್ಲಿ ರೆಡ್ಡಿಯವರಿಗೆ ಆಸಕ್ತಿ ಹುಟ್ಟಿಸಿದರು. ಅವರ ಮೇಲೆ ಇನ್ನೂ ಗಾಢವಾದ ಪ್ರಭಾವವನ್ನು ಬೀರಿದವರೆಂದರೆ ಡಾ. ಸ್ಕಿನ್ನರ್. ಅವರು ತತ್ವಶಾಸ್ತ್ರವನ್ನು ಬೋಧಿಸಿ ಅದರ ಮೂಲತತ್ತ್ವಗಳಲ್ಲಿ ರೆಡ್ಡಿ ಚಿಂತನಾಪರರಾಗುವಂತೆ ಮಾಡಿದರು.

ಭಾರತೀಯ ಅಧ್ಯಾಪಕರಲ್ಲಿ ಕೆಲವರು ವಿದ್ವತ್ತಿಗೂ, ವಿದ್ಯಾರ್ಥಿ ಕಲ್ಯಾಣಾಕಾಂಕ್ಷೆಗೂ ಹೆಸರಾದವರಿದ್ದರು. ಆಂಧ್ರಭಾಷಾಭಿರಂಜನಿ ಸಂಘಂ ಎಂಬ ಹೆಸರಿನ ತೆಲುಗು ಸಂಘದ ಅಧ್ಯಕ್ಷರಾದ ಸಮರ್ಥಿರಂಗಯ್ಯ ಚೆಟ್ಟಿ ರೆಡ್ಡಿಯವರ ಸಾಹಿತ್ಯಕ ಚಟುವಟಿಕೆಗಳಿಗೆ ಗಣನೀಯ ಪ್ರೋತ್ಸಾಹವನ್ನಿತ್ತರು. ತೆಲುಗಿನ ಮಹಾವಿದ್ವಾಂಸರೂ, ನಾಟಕಕಾರರೂ ಆದ ವೇದಂ ವೆಂಕಟರಾಯ ಶಾಸ್ತ್ರಿ ಕಾಲೇಜಿನ ಸಂಸ್ಕೃತ ಪಂಡಿತರಾಗಿದ್ದರು. ಎರಡನೆ ಭಾಷೆಯಾಗಿ ತೆಲುಗನ್ನು ಸ್ವೀಕರಿಸಿದ ರೆಡ್ಡಿಯವರಿಗೆ ಶಾಸ್ತ್ರಿಯವರ ಮಾರ್ಗದರ್ಶನ ಯಾವಾಗಲೂ ಲಭಿಸುತ್ತಿತ್ತು.

ಆಂಧ್ರ ಭಾಷಾಭಿರಂಜನಿ ಸಂಘದ ಚಟುವಟಿಕೆಗಳಲ್ಲಿ ರೆಡ್ಡಿಯವರು ಹೆಚ್ಚಿನ ಆಸಕ್ತಿ ವಹಿಸಿದ್ದರು. ಆ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ಆಶುಭಾಷಣ ಸ್ಪರ್ಧೆಗಳಲ್ಲಿಯೂ ಇತರ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುತ್ತಿದ್ದರು. ಆ ಸಂಘ ಏರ್ಪಡಿಸಿದ್ದ ಸ್ಪರ್ಧೆಗಾಗಿಯೇ 'ಮುಸಲಮ್ಮ ಮರಣಮು' ಎಂಬ ಕಾವ್ಯವನ್ನು ಕಳುಹಿಸಿ ಅವರು ಬಹುಮಾನ ಪಡೆದರು.

ಇಂಗ್ಲಿಷ್ ಮತ್ತು ತೆಲುಗಿನಲ್ಲಿ ಜಾಣ್ಮೆಯ, ವಾಕ್ಪಟುತ್ವದ ಭಾಷಣಕಾರರೆಂದು ಅವರು ಕಾಲೇಜಿನಲ್ಲಿ ಹೆಸರುಪಡೆದರು. ಸರ್ಕಾರದ ಬಂಧನಕ್ಕೊಳಗಾದ ದೇಶಭಕ್ತ ಲೋಕಮಾನ್ಯ ಬಾಲಗಂಗಾಧರ ತಿಲಕರಿಗೆ ವಿದ್ಯಾರ್ಥಿಗಳ ಸಹಾನುಭೂತಿಯನ್ನು ವ್ಯಕ್ತೀಕರಿಸುವಲ್ಲಿ ರೆಡ್ಡಿಯವರು ಮುಂದಾದರು.

ಕಾಲೇಜಿನಲ್ಲಿದ್ದ ಐದುವರ್ಷಗಳಲ್ಲಿ ವಿಮರ್ಶಕರಾಗಿ ಹಾಗೂ ಸೃಜನಶೀಲ ಸಾಹಿತಿಯಾಗಿ ರಾಮಲಿಂಗಾರೆಡ್ಡಿಯವರ ಪ್ರತಿಭೆ ಸಾಕಷ್ಟು ವ್ಯಕ್ತವಾಯಿತು. ಮಹಾಭಾರತ ಅವರ ಮೆಚ್ಚಿನ ಕೃತಿಯಾಗಿ ಮುಂದುವರಿಯಿತು. ಅದರ ಜೊತೆಗೆ ಪ್ರಬಂಧ ಕವಿಯಾದ ಪಿಂಗಳಿಸೂರನನ ಕೃತಿಯ ಕಡೆಗೆ ಅವರ ಗಮನ ಹರಿಯಿತು. ಮುಖ್ಯವಾಗಿ 'ಕಳಾಪೂರ್ಣೋದಯಮು' ಅವರಿಗೆ ಪ್ರೀತಿ ಪಾತ್ರವಾಯಿತು. 1899 ರಲ್ಲಿ ಆಂಧ್ರಭಾಷಾಭಿರಂಜನಿ ಸಂಘದ ಮುಂದೆ ಸಮರ್ಪಿಸಿದ ಪ್ರಬಂಧದಲ್ಲಿ ಆ ಕೃತಿಯ ಗುಣಾವಗುಣಗಳ ಬಗೆಗೆ ಸಾಕಷ್ಟು ದೀರ್ಘವಾಗಿ ಪರಿಶೀಲನೆ ನಡೆಸಿದರು. ಸಾಹಿತ್ಯವಿಮರ್ಶೆಯಲ್ಲಿ ಇದು ಅವರ ಮೊದಲ ಬೃಹತ್ಸಾಧನೆ ಎನ್ನಬಹುದು. ಇದೇ ಅನಂತರ ಕಾಲದಲ್ಲಿ 'ಕವಿತ್ವತತ್ತ್ವವಿಚಾರಮು' ಎಂಬ ಪುಸ್ತಕದ ರೂಪದಲ್ಲಿ ಹೊರ ಬಂದಿತು.

ಇತಿಹಾಸ ಮತ್ತು ತತ್ತ್ವಶಾಸ್ತ್ರಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಬಿ. ಎ. ಪದವಿ ಪಡೆದ ನಂತರ (1902ರಲ್ಲಿ) ಇಂಗ್ಲೆಂಡಿನಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅವರಿಗೆ ಭಾರತೀಯ ಸರ್ಕಾರದ ವಿದ್ಯಾರ್ಥಿವೇತನ ಸಿಕ್ಕಿತು. ಕೇಂಬ್ರಿಡ್ಜಿನ ಸೇಂಟ್ ಜಾನ್ಸ್ ಕಾಲೇಜಿಗೆ ಸೇರಿದ ರೆಡ್ಡಿ, ಎಲ್ಲರ ಪ್ರಶಂಸೆಗೆ ಪಾತ್ರರಾದರಲ್ಲದೆ ರೈಟರ ಬಹುಮಾನವನ್ನೂ ಪಡೆದರು. ಅಷ್ಟೇ ಅಲ್ಲದೆ 'ದತ್ತಿವಿದ್ವಾಂಸ'ರೂ ಆದರು. ಇತಿಹಾಸದ ಪರೀಕ್ಷೆಗೆ ಓದುವಾಗ, ಅದರ ಜೊತೆಗೆ ಅರ್ಥಶಾಸ್ತ್ರ ಮತ್ತು ತತ್ತ್ವಶಾಸ್ತ್ರ ಅವರ ವಿಶೇಷಗಮನವನ್ನು ಸೆಳೆದ ವಿಷಯಂಗಳಾಗಿದ್ದವು.

ಸ್ವತಂತ್ರಯೋಚನೆ, ರಾಜಕೀಯದಲ್ಲಿ ಉದಾರಭಾವನೆ ಬೆಳೆಯಲವಕಾಶವಿದ್ದ ಕೇಂಬ್ರಿಡ್ಜ್‌ನ ವಾತಾವರಣ ವಿಚಾರಪರತೆ, ಖಚಿತತೆಗಳ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನೆರವಾಯಿತು. ಕೇಂಬ್ರಿಡ್ಜಿನ ಲಿಬರಲ್ ಕ್ಲಬ್ಬಿನ ಕಾರ್ಯದರ್ಶಿಯಾಗಿ 1905ರಲ್ಲಿ ರೆಡ್ಡಿಯವರು ಆಯ್ಕೆಗೊಂಡರು. ಇದರ ನಂತರ ಕೇಂಬ್ರಿಡ್ಜ್ ಯೂನಿಯನ್ನಿನ ಉಪಾಧ್ಯಕ್ಷರಾಗಿ ಆಯ್ಕೆಗೊಳ್ಳುವ ಉನ್ನತ ಗೌರವ ಅವರಿಗೆ ಲಭಿಸಿತು. ಈ ಹುದ್ದೆಗೆ ಆಯ್ಕೆಗೊಂಡ ಭಾರತೀಯರಲ್ಲಿ ರೆಡ್ಡಿಯವರು ಮೊದಲಿಗರೆಂಬುದು ಗಮನಾರ್ಹ. (ಅನೇಕ ದಶಾಬ್ದಿಗಳ ಅನಂತರ ಶ್ರೀ ಮೋಹನ ಕುಮಾರಮಂಗಳಂ ಅಧ್ಯಕ್ಷರಾಗುವ ಮೂಲಕ ಈ ವಿಕ್ರಮವನ್ನು ಮುರಿದರು).

ಅಂದಿನ ಕೇಂಬ್ರಿಡ್ಜಿನ ವಿದ್ಯಾರ್ಥಿಗಳಲ್ಲಿ ಹಾಗೂ ಅಧ್ಯಾಪಕರಲ್ಲಿ ಪ್ರತಿಭಾನ್ವಿತ ವ್ಯಕ್ತಿಗಳು ತುಂಬಿದ್ದರು. ಸ್ವತಂತ್ರ ಯೋಚನಾಪರವಾದ ಗೋಲ್ಸ್‌ವರ್ಥಿ ಲೋವ್ಸ್ ಡಿಕಿನ್ಸನ್ ಹಾಗೂ ಮಕ್‌ಟಗ್ಗರ್ಟ್‌ರಂಥ ಅಧ್ಯಾಪಕರು ಹೊಸ ಆಲೋಚನೆಗಳಿಗೆ ನಾಂದಿ ಹಾಡಿದರು. ರೆಡ್ಡಿಯವರಿಗೆ ಸ್ವಲ್ಪ ಅನಂತರದ ಸಮಕಾಲೀನರಲ್ಲಿ ಲಿಟ್ಟನ್‌ಸ್ಟ್ರಾಚೆ, ಲಿಯೊನಾರ್ಡ್‌ವೂಲ್ಫ್, ಇ. ಎಂ. ಫಾರ್‌ಸ್ಟರ್, ಕ್ಲೈವ್‌ಬೆಲ್ ಮುಂತಾದವರು ಬ್ಲೂಮ್ಸ್‌ಬರಿ ಗುಂಪಿನ ಕೇಂದ್ರ ಬಿಂದುಗಳು. ಜಾನ್‌ಮೇನಾರ್ಡ್‌ಕೆಯ್‌ನ್ಸ್, ಮೋರ್ಗನ್ ಫಿಲಿಪ್ಸ್‌ಪ್ರೈಸ್, ಜೆ. ಸಿ. ಸ್ಕೈರ್ ಮುಂತಾದವರು ಅವರ ನಿಕಟ ಸ್ನೇಹಿತರಾಗಿದ್ದರು. ಪ್ರಜ್ಞಾವಂತರಾಗಿಯೂ, ಲೇಖಕರಾಗಿಯೂ ರೂಪುಗೊಳ್ಳುತ್ತಿದ್ದ ಪೋಯಿಸ್

ಸೋದರರು, ಲೆವೆಲಿನ್, ಜಾನ್‌ಕೌಪರ್ ಮುಂತಾದವರನ್ನೂ ರೆಡ್ಡಿಯವರು ಆಗಾಗ್ಗೆ ಭೇಟಿ ಮಾಡುತ್ತಿದ್ದರು.

ಈ ಪ್ರಜ್ಞಾವಂತರ ನಡುವೆ ನಡೆಯುತ್ತಿದ್ದ ಸಂಭಾಷಣೆಗಳು ಕಿಡಿಗಳಂತಿರುತ್ತಿದ್ದವೆಂದು ಹೇಳಬಹುದು. ಇವು ರೆಡ್ಡಿಯವರ ಚುರುಕು ಬುದ್ಧಿಯನ್ನು ಹೊರಗೆಳೆಯುತ್ತಿದ್ದವು. ಭೂಮಿಯ ಮೇಲಿನ ಯಾವ ವಿಷಯವೂ ಅವರಿಗೆ ನಿಷಿದ್ಧವಾಗಿರಲಿಲ್ಲ. ಧೀಮಂತರು ಮಾಡಿದರೆ ದೈವ ದೂಷಣೆಯೂ ಸರಿಯಾಗಿರುತ್ತದೆ! ರೆಡ್ಡಿಯವರ ವ್ಯಂಗ್ಯೋಕ್ತಿಗಳಿಗೆ ಕೆಳಗಿನದೊಂದು ಒಳ್ಳೆಯ ಉದಾಹರಣೆ :

"ದೇವರು ಸರ್ವಶಕ್ತ ಮತ್ತು ನಿತ್ಯ, ನಿಜ! ದೇವರು ಸರ್ವ ಶಕ್ತನಾದರೆ ಅವನು ಆತ್ಮಹತ್ಯೆಮಾಡಿಕೊಳ್ಳುವುದಕ್ಕೂ ಸ್ವಾತಂತ್ರ್ಯ ಹಾಗೂ ಯೋಚನಾಶಕ್ತಿ ಉಳ್ಳವನಾಗಿರುತ್ತಾನಲ್ಲವೆ? ಆಗ ಆತ ನಿತ್ಯವೆನ್ನುವುದು ಹೇಗೆ?"

ಇಲ್ಲಿ ಅವರು ಕಿಡಿಗಳಂತಹ ಮಾತುಗಳನ್ನಾಡಿದರೂ ಅವರದು ದೋಷೈಕ ದೃಷ್ಟಿಯೆಂದೂ, ಕಠಿಣ ಹೃದಯವೆಂದೂ ಕೆಲವರು ಭಾವಿಸಬಹುದಾದರೂ ಅದು ನಿಜವಲ್ಲ. ಅವರು ಉಲ್ಲಾಸಪ್ರಿಯರು, ಸರಸಹೃದಯರು ಮಾತ್ರವಲ್ಲದೆ ಸ್ನೇಹಶೀಲರೂ, ಉದಾರಚಿತ್ತರೂ, ಆಗಿದ್ದರೆಂದು ಉನ್ನತ ಮೂಲಗಳು ತಿಳಿಸುತ್ತವೆ. ತಮ್ಮ ಕಾಲೇಜಿನ ದಿನಗಳನ್ನು ನೆನೆಯುತ್ತಾ ಪ್ರಸಿದ್ಧ ವಿದ್ವಾಂಸರಾದ ಸರ್ ಜಾನ್‌ಸ್ಕೈರ್ ಹೀಗೆನ್ನುತ್ತಾರೆ.[1]

ಕೇಂಬ್ರಿಡ್ಜಿನಲ್ಲಿ ರೆಡ್ಡಿಯವರು ತಮ್ಮ ವಾಕ್ಪಟುತ್ವಗಳನ್ನೂ, ಬುದ್ಧಿವಂತಿಕೆಯನ್ನೂ ತೋರಿಸಿದ್ದರು. ಆದರೆ ವಾಕ್ಪಟುತ್ವ ಮತ್ತು ಬುದ್ಧಿವಂತಿಕೆಗಳಿಂದಲೇ ಒಬ್ಬ ಮನುಷ್ಯ ಪ್ರೀತಿ ಗೌರವಗಳನ್ನು ಗಳಿಸುವುದಿಲ್ಲ. ಒಬ್ಬರ ಹೃದಯವಂತಿಕೆ ಮಾತ್ರ ಇನ್ನೊಬ್ಬರ ಹೃದಯವನ್ನು ಸೂರೆಗೊಳ್ಳಬಲ್ಲದು. ಕೇಂಬ್ರಿಡ್ಜಿನಲ್ಲಿ ರೆಡ್ಡಿಯವರು ನಮ್ಮೆಲ್ಲರ ಅಭಿಮಾನವನ್ನು ಗಳಿಸಿಕೊಳ್ಳಲು ಕಾರಣ ಅವರ ಬುದ್ಧಿಶಕ್ತಿಯಲ್ಲ–ಅವರ ವ್ಯಕ್ತಿತ್ವ ಎಂದು ಹೇಳಬೇಕು. ಅವರ ಉದಾರಗುಣ, ಅವರ ಆದರ್ಶಗಳು (ಸಂಪ್ರದಾಯಗಳಿಂದ ಪೂರ್ಣ ಮುಕ್ತವಾದಂಥವು), ಸಾಮಾನ್ಯ ಬುದ್ಧಿಶಕ್ತಿಯ ಪರಿಚಯಸ್ಥರ ಜೊತೆಗೂ ಅವರು ತೋರುತ್ತಿದ್ದ ನಿಸ್ವಾರ್ಥ ದಯಾಗುಣ, ಉಲ್ಲಾಸಕರ ವ್ಯಕ್ತಿತ್ವ ಸಹನೆ ಮುಂತಾದವು......

ಆಧುನಿಕ ಪಾಶ್ಚಾತ್ಯ ಚಿಂತನೆಯೊಂದಿಗೆ ಆಳವಾದ ಸಂಬಂಧವೂ, ಇಂಗ್ಲಿಷ್ ಪ್ರಜ್ಞಾವಂತರ ಜೊತೆಗೆ ನಿಕಟ ಸಂಪರ್ಕವೂ ವಿಶ್ವವಿದ್ಯಾನಿಲಯದಲ್ಲಿ ಹಾಗೂ ಹೊರ ವಲಯಗಳಲ್ಲಿದ್ದರೂ ರೆಡ್ಡಿಯವರು ತಮ್ಮ ಹಿಂದಿನ ಒಲವುಗಳನ್ನು ಮರೆತಿರಲಿಲ್ಲ.

---

[1] ಡಾ. ಸಿ. ಆರ್. ರೆಡ್ಡಿಯವರ ಪ್ರಬಂಧಗಳು ಮತ್ತು ಭಾಷಣಗಳು ಎಂಬ ಸಂಪುಟಕ್ಕೆ ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಬರೆದ ಮುನ್ನುಡಿಯಿಂದ ಉಲ್ಲಿಖಿತ.

'ತೆಲುಗು ಮಹಾಭಾರತ'ದ ಬಗೆಗಿನ ತಮ್ಮ ಜ್ಞಾನವನ್ನು ಮತ್ತೆ ಮತ್ತೆ ವಿನೂತನ ಗೊಳಿಸಿಕೊಳ್ಳುವುದು, 'ಕಳಾಪೂರ್ಣೋದಯ'ದ ಗುಪ್ತಸೌಂದರ್ಯಗಳ ಅನ್ವೇಷಣೆಯಲ್ಲಿ ತೊಡಗುವುದು ಅವರ ಕೆಲಸವಾಗಿತ್ತು.

ಇಂಗ್ಲೆಂಡಿನಲ್ಲಿದ್ದ ಐದು ವರ್ಷಗಳಲ್ಲಿ ರೆಡ್ಡಿಯವರು ತಮ್ಮ ರಾಜಕೀಯ ಒಲವು ಗಳನ್ನು ದೇಶಭಕ್ತಿಯನ್ನು ಒಳ್ಳೆಯದಕ್ಕೆ ಬಳಸಿಕೊಂಡರು. ಯೂನಿವರ್ಸಿಟಿ ಲಿಬರಲ್ ಕ್ಲಬ್ಬಿನ ಕಾರ್ಯದರ್ಶಿಯಾಗಿ ಚುನಾವಣೆಯ ಸಭೆಗಳಲ್ಲಿ ಅವರಿಗೆ ತುಂಬ ಬೇಡಿಕೆಯಿತ್ತು. ಕೇಂಬ್ರಿಡ್ಜ್ ಯೂನಿಯನ್ ಸಭೆಗಳಿಗೆ ಅತಿಥಿ ಭಾಷಣಕಾರರಾಗಿ ಲಜಪತರಾಯ್, ಗೋಖಲೆ ಮುಂತಾದ ಭಾರತೀಯ ನಾಯಕರನ್ನು ಅವರು ಆಹ್ವಾನಿಸುತ್ತಿದ್ದರು. ಮುಖ್ಯವಾಗಿ ಗೋಖಲೆಯವರ ವ್ಯಕ್ತಿತ್ವದ ಕಡೆಗೆ ಅವರು ಆಕರ್ಷಿತರಾದರು. ಗೋಖಲೆಯವರ ರಾಜಕೀಯ ಪರಿಣತಿ, ಮಧುರವಾದ ವಿವೇಕ ಗುಣ, ಮಾತಿನಲ್ಲಿ ಮಿತಿ ರೆಡ್ಡಿಯವರ ಮೇಲೆ ತುಂಬ ಪ್ರಭಾವ ಬೀರಿದವು.

ಗೋಖಲೆಯವರ ಸಲಹೆಯಂತೆಯೇ ರೆಡ್ಡಿಯವರು ಕಾನೂನುಶಾಸ್ತ್ರ ಓದುವು ದನ್ನು ಬಿಟ್ಟು ಅಧ್ಯಾಪಕ ವೃತ್ತಿಯನ್ನು ಹಿಡಿದರು. 1906 ರಲ್ಲಿ ಅವರು ಇತಿಹಾಸ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಪಡೆದರು. ಭಾರತಕ್ಕೆ ಬರುವ ಮುನ್ನ ಅಮೇರಿಕ ಸಂಯುಕ್ತ ಸಂಸ್ಥಾನಗಳಿಗೆ ಭೇಟಿಕೊಟ್ಟು ಅಲ್ಲಿಯ ಶೈಕ್ಷಣಿಕ ಸಂಸ್ಥೆಗಳನ್ನು ನೋಡಿದರು. ಇಂಗ್ಲಿಷ್ ಸಂಪ್ರದಾಯ ರೀತಿಯ ಶಿಕ್ಷಣ ಪಡೆದ ರೆಡ್ಡಿಯವರಿಗೆ ಇದೊಂದು ಹೊಸ ಅನುಭವವಾಯಿತು. ಹಳೆಯ ಕಣ್ಣುಗಳಿಂದ ಹೊಸ ಜಗತ್ತನ್ನು ನೋಡುವುದು ಸಾಧ್ಯ ವಾಯಿತು.

ಬರೋಡದ ಗಾಯಕ್ವಾಡ್ ಶ್ರೀ ಸಯಾಜಿರಾವ್ ದೂರದೃಷ್ಟಿಯುಳ್ಳವರು. ಅವರು ತಮ್ಮ ರಾಜ್ಯವನ್ನು ಆಧುನಿಕ ರೀತಿಯಲ್ಲಿ ನಡೆಸಲು ನಿಶ್ಚಯಿಸಿ ಆ ರೀತಿಯಲ್ಲಿ ಶಿಕ್ಷಣ ಪಡೆದವರಿಗಾಗಿ ಹುಡುಕುತ್ತಿದ್ದರು. ಕೆಲವು ವರ್ಷಗಳ ಹಿಂದೆ ಅರವಿಂದ ಘೋಷರನ್ನು ಇದಕ್ಕಾಗಿ ಆರಿಸಲಾಗಿತ್ತು. ಘೋಷರನ್ನು ರಾಷ್ಟ್ರೀಯತೆ ತನ್ನ ಕಡೆಗೆ ಸೆಳೆಯುವ ಮುನ್ನ ಅವರು ಕಾಲೇಜಿನ ವೈಸ್–ಪ್ರಿನ್ಸಿಪಾಲರಾಗಿದ್ದರು, ಅನಂತರ ರಾಮಲಿಂಗಾರೆಡ್ಡಿಯವರ ಸರದಿ ಬಂದಿತು.

# 4 ಬರೋಡ ಮತ್ತು ಮೈಸೂರು

1908 ರಲ್ಲಿ ಭಾರತಕ್ಕೆ ಹಿಂದಿರುಗಿದ ಮೇಲೆ ರೆಡ್ಡಿಯವರು ಗಾಯಕ್ವಾಡರ ಆಹ್ವಾನದ ಮೇರೆಗೆ ಬರೋಡ ಕಾಲೇಜಿಗೆ ಸೇರಿದರು. ಆ ಸ್ಥಾನ ಅವರ ಆಗಮನ ಕಾಯುತ್ತಿತ್ತೆಂದರೆ ತಪ್ಪಾಗದು. ಅಮೆರಿಕ ಪ್ರವಾಸದ ವೆಚ್ಚವನ್ನು ಮಹಾರಾಜರೇ ಕೊಟ್ಟಿದ್ದರೆಂದು ಕಾಣುತ್ತದೆ. ಅರವಿಂದ ಘೋಷರು ತಮ್ಮ ಪ್ರಾಧ್ಯಾಪಕ ಹಾಗೂ ವೈಸ್‌ಪ್ರಿನ್ಸಿಪಾಲರ ಹುದ್ದೆಗೆ ರಾಜೀನಾಮೆ ನೀಡಿದ ಮೇಲೆ ಆ ಸ್ಥಾನಕ್ಕೆ ರೆಡ್ಡಿಯವರು ಬಂದರು. ಘೋಷರು ಹೊಸದಾಗಿ ಪ್ರಾರಂಭವಾದ ಕಲ್ಕತ್ತಾದ ರಾಷ್ಟ್ರೀಯ ಕಾಲೇಜಿಗೆ ಪ್ರಿನ್ಸಿಪಾಲರಾದರು. ಒಬ್ಬ ಮಹಾವ್ಯಕ್ತಿಯ ಸ್ಥಾನಕ್ಕೆ ರೆಡ್ಡಿಯವರು ಬಂದುದು ಸೂಕ್ತವೆನಿಸುತ್ತದೆ. ಸೂಕ್ಷ್ಮಬುದ್ಧಿಯುಳ್ಳ ಅರಸರಿಗೆ ಇವರಿಗಿಂತ ಒಳ್ಳೆಯ ವ್ಯಕ್ತಿ ಸಿಕ್ಕಿರಲಾರರು.

ಬರೋಡದಲ್ಲಿ ರೆಡ್ಡಿಯವರು ಸ್ವಲ್ಪಕಾಲ ಮಾತ್ರ ಇದ್ದರೂ ಅಷ್ಟರಲ್ಲೇ ಒಳ್ಳೆಯ ಉಪಾಧ್ಯಾಯರೆಂಬ ಹೆಸರು ಗಳಿಸಿದರು. ಇಂಗ್ಲಿಷ್ ಸಾಹಿತ್ಯ, ಐರೋಪ್ಯ ಇತಿಹಾಸ, ಭಾರತೀಯ ಅರ್ಥಶಾಸ್ತ್ರ – ಯಾವುದನ್ನೇ ತೆಗೆದುಕೊಳ್ಳಲಿ ರೆಡ್ಡಿಯವರು ಅದಕ್ಕೆ ಒಂದು ಹೊಸ ಆಯಾಮವನ್ನೇ ತೆರೆಯುತ್ತಿದ್ದರು. ಅವರ ಹೊಸ ರೀತಿಯ ಯೋಚನಾಸರಣಿ, ಸರಳಾಭಿವ್ಯಕ್ತಿ ವಿದ್ಯಾರ್ಥಿಗಳಿಗೆ ಪ್ರಚೋದನೆ ನೀಡುತ್ತಿದ್ದವು. ತಮ್ಮ ಪೂರ್ವಾಧಿಕಾರಿಯಷ್ಟು ಸಮಗ್ರತೆಯಿಲ್ಲದಿದ್ದರೂ, ಹೆಚ್ಚು ಶ್ರದ್ಧಾವಂತರಾಗಿದ್ದರು. ದಿ॥ ಕೆ. ಎಂ. ಮುನ್ಷಿಯವರು ಬರೋಡದಲ್ಲಿ ತಮ್ಮ ವಿದ್ಯಾರ್ಥಿ ಜೀವನವನ್ನು ನೆನೆಸಿಕೊಳ್ಳುತ್ತಾ ರೆಡ್ಡಿಯವರ ತರಗತಿಗೆ ಸೇರದಿದ್ದರೂ ತಾವು ಕೇವಲ ಸಂತೋಷಕ್ಕಾಗಿ ಅವರ ಭಾಷಣಗಳನ್ನು ಕೇಳುತ್ತಿದ್ದರೆಂಬುದನ್ನು ಉಲ್ಲೇಖಿಸಿದರು. ರೆಡ್ಡಿಯವರ ಮಾತಿನ ಮೋಡಿಗೆ ಮರುಳಾಗುತ್ತಿದ್ದವರಲ್ಲಿ ಇವರೂ ಒಬ್ಬರು.

ಗಾಯಕ್ವಾಡರ ಒತ್ತಾಯದಿಂದಲೇ ರೆಡ್ಡಿಯವರು ಕೆನಡ, ಜಪಾನ್, ಮತ್ತು ಫಿಲಿಪ್ಪೈನ್ಸ್ ದ್ವೀಪಗಳಿಗೆ ಮತ್ತೊಮ್ಮೆ ಶೈಕ್ಷಣಿಕ ಪ್ರವಾಸ ಕೈಗೊಂಡರು. ಆದರೆ ಅವರ ಅನುಭವದ ಫಲವನ್ನು ಬರೋಡಕ್ಕೇ ದೀರ್ಘಕಾಲ ಮೀಸಲಿಡಲು ಸಾಧ್ಯವಾಗಲಿಲ್ಲ. 1909 ರಲ್ಲಿ 'ವಿಶ್ವವಿದ್ಯಾನಿಲಯ ಸುಧಾರಣೆ' ಕುರಿತ ಉಪನ್ಯಾಸಗಳನ್ನು ನೀಡಲು ಅವರನ್ನು ಮೈಸೂರಿಗೆ ಆಹ್ವಾನಿಸಲಾಯಿತು. ಈ ಉಪನ್ಯಾಸಗಳನ್ನು ಕೇಳಿ ಮುಗ್ಧರಾದ ದಿವಾನ್ ಸರ್ ವಿ. ಪಿ. ಮಾಧವರಾಯರು ರೆಡ್ಡಿಯವರನ್ನು ಮೈಸೂರು ರಾಜ್ಯ ಸೇವೆಗೆ ಸೇರಲು ಒತ್ತಾಯ ಮಾಡಿದರು.

ಮೈಸೂರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾಗಿ ರೆಡ್ಡಿಯವರು ಆ ಕಾಲದ ಎಲ್ಲ ಪ್ರಾಧ್ಯಾಪಕರಿಗಿಂತ ಹೆಚ್ಚಾಗಿ ವಿದ್ಯಾರ್ಥಿಗಳನ್ನು ಆಕರ್ಷಿಸಿದರೆಂದರೆ ಆಶ್ಚರ್ಯವೇನಿಲ್ಲ. ಇಂಗ್ಲಿಷ್, ಇತಿಹಾಸ ಮತ್ತು ತರ್ಕಶಾಸ್ತ್ರಗಳನ್ನು ಅವರು ಬೋಧಿಸಿದರು.

ಅವರ ಭಾಷಣಗಳು 'ಹೇಳಿದ್ದೇಹೇಳು' ಎನ್ನುವ ರೀತಿ ಇರುತ್ತಿರಲಿಲ್ಲ. ಅವು ವಿದ್ಯಾರ್ಥಿಗಳನ್ನು ಚಿಂತನಾಶೀಲರಾಗುವಂತೆ ಮಾಡುತ್ತಿದ್ದವು. ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಪ್ರಜ್ಞಾಶೀಲರಾದವರಿಗೆ ಆವರ ಭಾಷಣಗಳು ಅನುಭವದ ಬಾಗಿಲುಗಳನ್ನೇ ತೆರೆಯುತ್ತಿದ್ದವು.

ಮಾಮೂಲಿ ಉಪನ್ಯಾಸಗಳಿಂದ ಹಾಗೂ ಮೊದಲೇ ಬರೆದ ಟಿಪ್ಪಣಿಗಳಿಂದ ಬೇಸರಗೊಂಡವರಿಗೆ ರೆಡ್ಡಿಯವರ ಬೋಧನಾ ರೀತಿ ಗಾಳಿಯಿಲ್ಲದ ದಿನದ ಕೊನೆಯಲ್ಲಿ ತಂಗಾಳಿಯ ಅಲೆಯಂತೆ ಬರುತ್ತಿತ್ತೆಂದು ಹಳೆಯ ವಿದ್ಯಾರ್ಥಿಗಳು ಕೆಲವರು ಬರೆದಿದ್ದಾರೆ. ಇತರರಂತೆ ಅವರು ತರಗತಿಯಲ್ಲಿ ನೋಟ್ಸ್ ಕೊಡುತ್ತಿರಲಿಲ್ಲ. ರಸಹೀನತೆಯನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ಮಗುವಿಗೆ ಹಾಲೂಡಿದಂತೆ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ಅವರಿಗೆ ಹಿಡಿಸುತ್ತಿರಲಿಲ್ಲ. ವಿದ್ಯಾರ್ಥಿಗಳೇ ಪರಿಶೀಲಿಸಿ ಅರ್ಥಮಾಡಿಕೊಂಡು ಇತಿಹಾಸವನ್ನು ಅಭ್ಯಾಸ ಮಾಡುವಂತೆ ಪ್ರಚೋದಿಸಿದ್ದರು. 'ಸ್ಪೆಕ್ಟೇಟರ್' ಪ್ರಬಂಧಗಳನ್ನು ಅವರು ಓದುವ ರೀತಿಯಿಂದ ಆಡಿಸನ್‌ರ ಸುಸಂಸ್ಕೃತ ಹಾಸ್ಯವನ್ನು ಅರಿತ ವಿದ್ಯಾರ್ಥಿಗಳಿಗೆ ಸಂತೋಷ ಸಂಭ್ರಮಗಳುಂಟಾಗುತ್ತಿದ್ದವು. ಸೂಕ್ತವಾದ ಕಿರುನಗೆಯಿಂದ ಸಂದರ್ಭಕ್ಕೆ ಅನುಸಾರವಾಗಿ ಅವರು ಧ್ವನಿಯನ್ನು ಮಾರ್ಪಡಿಸುತ್ತಿದ್ದರು. ತರ್ಕಶಾಸ್ತ್ರದ ನಿರ್ಜೀವ ಮೂಳೆಗಳೂ ಅವರ ಕೈಯಲ್ಲಿ ಜೀವ ಪಡೆದು ತರುಣ ವಿದ್ಯಾರ್ಥಿಗಳಿಗೆ ಆಸಕ್ತಿಕರವಾಗುತ್ತಿದ್ದವು. ಮಾನವನ ಕಾರಣಶಕ್ತಿಯ ಇತಿಮಿತಿಗಳನ್ನು ವೈಜ್ಞಾನಿಕ ತರ್ಕ ತೋರಿಸಿಕೊಡಬಲ್ಲದೆಂದು ಆಗಾಗ್ಗೆ ಅವರು ಪ್ರತ್ಯೇಕವಾಗಿ ಹೇಳುತ್ತಿದ್ದರು. 'ಹತ್ತು ಕಟ್ಟಳೆಗಳು' ಹೇಗೆ ಒಬ್ಬ ಮನುಷ್ಯನನ್ನು ಸಂತನನ್ನಾಗಿಸಲು ಅಸಾಧ್ಯವೋ, ಹಾಗೆಯೇ ತರ್ಕವೂ ಒಬ್ಬ ಮನುಷ್ಯನನ್ನು ಸಮಗ್ರ ವ್ಯಕ್ತಿಯಾಗಿ ಮಾಡುವುದಿಲ್ಲ ಎಂದು ಅವರು ಹೇಳುತ್ತಿದ್ದರು.

ರೆಡ್ಡಿಯವರು ಮೈಸೂರಿನಲ್ಲಿದ್ದ ಪ್ರಾರಂಭದ ದಿನಗಳಲ್ಲಿ, ಯುವರಾಜರು ತಮ್ಮ ಜೊತೆಯಲ್ಲಿ ಐರೋಪ್ಯ ಪ್ರವಾಸಕ್ಕೆ ಬರುವಂತೆ ಕೇಳಿದರು. ಬೇರೆ ಬೇರೆ ದೇಶಗಳ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಲು ರೆಡ್ಡಿಯವರು ಈ ಅವಕಾಶವನ್ನು ಉಪಯೋಗಿಸಿಕೊಂಡರು. ಇದೇ ಭಾವನೆಯಿಂದ ಅವರು ಪ್ರಾಚ್ಯ ದೇಶಗಳಿಗೂ ಭೇಟಿಕೊಟ್ಟರು. ಈ ಎಲ್ಲ ಪ್ರವಾಸಗಳನ್ನು ಕುರಿತಂತೆ ಸರ್ಕಾರಕ್ಕೆ ಅವರು ಕೊಟ್ಟ 'ಪ್ರತಿನಿಧಿ ವರದಿ' ಪ್ರಾಚ್ಯ ಮತ್ತು ಪಾಶ್ಚಾತ್ಯ ಶಿಕ್ಷಣ ವಿಧಾನಗಳ ಬಗೆಗೆ ಬಹಳ ಚೆನ್ನಾಗಿ ಹೇಳುತ್ತದೆ. ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು 1915 ರಲ್ಲಿ ಒಂದು ಯೋಜನೆಯನ್ನು ರೂಪಿಸುವಂತೆ ಕೋರಿದಾಗ ರೆಡ್ಡಿಯವರು ಈ ವರದಿಯನ್ನು ತಯಾರಿಸಿದರು.

ಬೋಧನೆ, ಸಂಶೋಧನೆ ಮತ್ತು ಕೆಲವು ಕಾಲೇಜುಗಳ ಸೇರ್ಪಡೆಯೊಂದಿಗೆ ಹೊಸ ವಿಶ್ವವಿದ್ಯಾನಿಲಯ ಮುಂದಿನ ವರ್ಷ ಅಸ್ತಿತ್ವಕ್ಕೆ ಬಂದಿತು. ರೆಡ್ಡಿಯವರು

ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿ ಬಡ್ತಿ ಪಡೆದರು. ಅವರು ಈ ಹುದ್ದೆಯಲ್ಲಿ ಎರಡು ವರ್ಷ (1916–17) ಇದ್ದರು. ಕೆಲವು ಹಳೆಯ ವಿಭಾಗಗಳನ್ನು ನವೀನಗೊಳಿಸುವುದು ಮಾತ್ರವಲ್ಲದೆ, ಭಾರತೀಯ ಭಾಷೆಗಳ ಹೊಸ ವಿಭಾಗಗಳನ್ನು ಪ್ರಾರಂಭಿಸುವುದರಲ್ಲಿಯೂ ಇವರು ಮುಂದಾದರು. ತೆಲುಗು ವಿಭಾಗ ಪ್ರಾರಂಭವಾಗಲು ಅವರೇ ಕಾರಣ ತೆಲುಗು ಪಂಡಿತರ ಹುದ್ದೆಗೆ ಮೊದಲು ಬಂದವರು ಶ್ರೀ ರಾಳ್ಳಪಲ್ಲಿ ಅನಂತಕೃಷ್ಣಶರ್ಮ. ಇವರು ಅನಂತರ ಕಾಲದಲ್ಲಿ ನಿಷ್ಕಲಂಕ ಸಜ್ಜನತೆಯಿರುವ ವಿದ್ವಾಂಸರಾಗಿಯೂ, ವಿಮರ್ಶಕರಾಗಿಯೂ ಪ್ರಸಿದ್ಧರಾದರು. ಸಮಯ ಸಿಕ್ಕಿದಾಗೆಲ್ಲ ರೆಡ್ಡಿಯವರು ಶರ್ಮರ ಜೊತೆಗೆ ತೆಲುಗು ಮಹಾಭಾರತವನ್ನು ಓದುತ್ತಿದ್ದರು.

1918ರಲ್ಲಿ, ಇನ್ನೂ ನಲವತ್ತರ ಗಡಿಯಲ್ಲಿರುವಾಗಲೇ ರಾಮಲಿಂಗಾರೆಡ್ಡಿ ಇಡೀ ರಾಜ್ಯಕ್ಕೆ ಉನ್ನತ ಶಿಕ್ಷಣಾಧಿಕಾರಿಯಾಗಿ ನೇಮಕಗೊಂಡರು, ಇದು ಭಾರತೀಯನಿಗೆ ಅದರಲ್ಲೂ ಬೇರೆ ರಾಜ್ಯದವನಿಗೆ ಸಂದ ಅಸಾಮಾನ್ಯ ಗೌರವ. ಜಾಗರೂಕತೆಯಿಂದ ವರ್ತಿಸಬೇಕಾದಂತಹ ವಿಭಾಗದ ಮುಖ್ಯಸ್ಥರಾಗಿ ಆ ವಯಸ್ಸಿನಲ್ಲಿ ಅಧಿಕಾರವಹಿಸಿಕೊಂಡ ರೆಡ್ಡಿಯವರಿಗೆ ಅದು ತುಂಬ ಜವಾಬ್ದಾರಿಯುಳ್ಳದ್ದೆಂದು ಬೇರೆ ಹೇಳಬೇಕಾಗಿಲ್ಲ.

ಹೊಸ ಹುದ್ದೆಯಲ್ಲಿ ಕ್ಷೇಮವಾಗಿದ್ದುಬಿಡಬೇಕೆಂದು ಅವರು ಬಯಸಿರಲಿಲ್ಲ. ತುಕ್ಕುಹಿಡಿದ ಆ ವ್ಯವಸ್ಥೆಯನ್ನು ಸುಧಾರಿಸಲು ದೃಢನಿಶ್ಚಯ ಮಾಡಿದರು. ಶಾಲೆಯಿಲ್ಲದ ಪ್ರತಿಯೊಂದು ಹಳ್ಳಿಯಲ್ಲೂ ಒಂದು ಶಾಲೆಯನ್ನು ತೆರೆಯುವ ಕ್ರಮವನ್ನು ಕೂಡಲೇ ಕೈಗೊಂಡರು. 'ಶಿಕ್ಷಣ'ದ ಹೆಸರಿನಲ್ಲಿ ಸರ್ಕಾರದ ಧನ ಸಹಾಯ ಹೆಚ್ಚಾಗುವಂತೆ ಸೂಕ್ತರೀತಿಯಲ್ಲಿ ಎಲ್ಲ ಪ್ರಯತ್ನಗಳನ್ನೂ ಮಾಡಿದರು. ಅವರು ತೆಗೆದುಕೊಂಡ ಸಾಹಸಾತ್ಮಕ ಕ್ರಮಗಳಲ್ಲಿ ಹರಿಜನರಿಗೆ ಎಲ್ಲ ಶಾಲೆಗಳಲ್ಲೂ ಪ್ರವೇಶವನ್ನು ಕಲ್ಪಿಸಿದ್ದೊಂದು. ಜೀವನದ ಒಂದು ಕ್ಷೇತ್ರದಲ್ಲಾದರೂ ಅಸ್ಪೃಶ್ಯತಾ ನಿವಾರಣೆಗೆ ಕೈಗೊಂಡ ಕ್ರಮಗಳಲ್ಲಿ ಇದೊಂದು. ಇದರಿಂದಾಗಿ ಉನ್ನತ ವರ್ಗಗಳಿಂದ ರೆಡ್ಡಿಯವರು ತುಂಬ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಕೊನೆಗೆ, ವಿಧಾನ ಸದಸ್ಯರ ಬೆಂಬಲದಿಂದ, ಅರಸರ ಸಹಾನುಭೂತಿಯಿಂದ ರೆಡ್ಡಿಯವರು ಯಶಸ್ವಿಯಾದರು.

ಮೈಸೂರಿನಲ್ಲಿ ರಾಮಲಿಂಗಾರೆಡ್ಡಿಯವರಿಗೆ ಎಲ್ಲವೂ ಸರಿಯಾಗಿತ್ತು. ತಮ್ಮ ವಿಭಾಗದಲ್ಲಿ ಅತ್ಯುನ್ನತ ಹುದ್ದೆಯನ್ನು ಪಡೆದದ್ದು ಮಾತ್ರವಲ್ಲದೆ, ಕಾರ್ಯನಿರ್ವಹಣೆಯಲ್ಲಿ ಉತ್ತಮ ವಿಕ್ರಮವನ್ನೂ ವಿದ್ಯಾರ್ಥಿಗಳಲ್ಲಿ ರೆಡ್ಡಿಯವರು ಜನಪ್ರಿಯತೆಯನ್ನೂ ಗಳಿಸಿಕೊಂಡರು. ಇದರಲ್ಲಿ ಅಸಮಾಧಾನಕ್ಕೆ ಆಸ್ಪದವೇ ಇರಲಿಲ್ಲ. 1921ರ ಒಂದು ಸುಂದರ ಪ್ರಾತಃಕಾಲ ತಮ್ಮ ಹುದ್ದೆಗೆ ರೆಡ್ಡಿಯವರು ರಾಜಿನಾಮೆ ನೀಡಿದರು. ಇದನ್ನು ನೋಡಿ ಜನ ಅಚ್ಚರಿಗೊಂಡರು. ತಮ್ಮ ರಾಜ್ಯವಾದ ಮದರಾಸಿನಲ್ಲಿ

ರಾಜಕೀಯದಲ್ಲಿ ಅದೃಷ್ಟವನ್ನು ಪರೀಕ್ಷಿಸಿಕೊಳ್ಳಲು ಹೀಗೆ ಮಾಡಿದರೆಂದು ಕೆಲವರು ಅಭಿಪ್ರಾಯಪಟ್ಟರು. ಇತರರು ಬೇರೆ ಬೇರೆ ಕಥೆಗಳನ್ನು ಹೇಳಿದರು. ಆದರೆ ಮೈಸೂರಿನಿಂದ ನಾಟಕೀಯವಾಗಿ ಅವರು ನಿರ್ಗಮಿಸಿದ್ದು ಇಂದಿಗೂ ಅಭೇದ್ಯ ರಹಸ್ಯವಾಗಿಯೇ ಉಳಿದಿದೆ.

ಅವರು ಮೈಸೂರಿನಲ್ಲಿದ್ದುದು ಎರಡು ವಿಷಯಗಳಿಗಾಗಿ ಗಮನಾರ್ಹವಾದುದು. ಮೊದಲನೆಯದಾಗಿ – ಅಸ್ಪೃಶ್ಯತಾ ನಿವಾರಣೆಯಲ್ಲಿ ಮಹಾತ್ಮರ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿಯೇ ಹರಿಜನರಿಗೆ ಶಾಲೆಗಳಲ್ಲಿ ಪ್ರವೇಶಾರ್ಹತೆಯನ್ನು ಕಲ್ಪಿಸಿದ್ದು. ಎರಡನೆಯದಾಗಿ – 'ಭಾರತ ಅರ್ಥಶಾಸ್ತ್ರಮು' ಎಂಬ ಗ್ರಂಥವನ್ನು ಅವರು ಬರೆದದ್ದು. 1911–12 ರಲ್ಲಿ ಹೊರಬಂದ ಈ ಪುಸ್ತಕ ತೆಲುಗಿನ ಅಂತಹ ಗ್ರಂಥಗಳಲ್ಲಿ ಮೊಟ್ಟ ಮೊದಲನೆಯದು. ಇದನ್ನು ಮದರಾಸಿನ ವಿಜ್ಞಾನ ಚಂದ್ರಿಕಾ ಗ್ರಂಥಮಂಡಲಿಯವರು 1914ರಲ್ಲಿ ಪ್ರಕಟಿಸಿದರು.

# 5 ರಾಜಕೀಯಕ್ಕೆ ಪ್ರವೇಶ

1921ರಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳುವಳಿಯ ಕೂಗು ಎಲ್ಲೆಡೆಯೂ ಕೇಳಿ ಬರುತ್ತಿತ್ತು. ಮಾಂಟೇಗ್–ಚೆಮ್ಸ್‌ಫೋರ್ಡ್ ಯೋಜನೆಯಂತೆ ಅಧಿಕಾರಿಕವಾಗಿ ಆಡಳಿತದ ಪುನರ್ ವ್ಯವಸ್ಥೀಕರಣ ಆಗಬೇಕಾಗಿತ್ತು. ವರ್ಗಾವಣೆಯಾದ ಮದ್ರಾಸಿನ ಒಂದು ಭಾಗದಲ್ಲಿ ಜಸ್ಟಿಸ್‌ಪಕ್ಷ ಅಧಿಕಾರದಲ್ಲಿತ್ತು. ರೆಡ್ಡಿಯವರು ಮೈಸೂರನ್ನು ಬಿಟ್ಟು ಬಂದು ಮದರಾಸಿನ ಗಲಭೆ – ಗದ್ದಲಗಳಲ್ಲಿ ಸಿಕ್ಕಿಬಿದ್ದರು. ಈ ವಿಷಯದಲ್ಲಿ ಚಿತ್ತೂರಿನ ಅವರ ಸ್ನೇಹಿತರ ಪ್ರೇರಣೆ ರೆಡ್ಡಿಯವರ ಒಲವನ್ನು ಮತ್ತಷ್ಟು ದೃಢಪಡಿಸಿತು. ದ್ವಂದ್ವಾಡಳಿತದ ಇತಿಮಿತಿಗಳನ್ನು ಅರಿತಿದ್ದರೂ, ಹೊಸ ಸಂವಿಧಾನದಲ್ಲಿ ಅವರು ತುಂಬ ನಂಬಿಕೆಯನ್ನಿಟ್ಟಿದ್ದರು.

ಬಹುಶಃ ರೆಡ್ಡಿಯವರು ಉನ್ನತವಾದ ಹೊಣೆಗಾರಿಕೆಯನ್ನೇ ನಿರೀಕ್ಷಿಸಿದ್ದರೆಂದು ಕಾಣುತ್ತದೆ. ಏನಿಲ್ಲದಿದ್ದರೂ ರಾಜಕೀಯ ವಲಯದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಅವರು ಪ್ರಯತ್ನಿಸಿದರೆನಿಸುತ್ತದೆ. ಬ್ರಿಟಿಷ್ ರಾಜ್ಯಪಾಲರುಗಳ ಆಶೀರ್ವಾದದಿಂದ ಉದಯಗೊಂಡ ಜಸ್ಟಿಸ್ ಪಕ್ಷವನ್ನು ಸೇರಿದರು. ವಿಧಾನ ಪರಿಷತ್ತಿಗೆ ಬಹಳ ಸುಲಭವಾಗಿಯೇ ಅವರು ಆಯ್ಕೆಗೊಂಡರು. ಆದರೆ ಜಾತೀಯತೆಯ ವಾತಾವರಣ, ಹುದ್ದೆಗಳಿಗಾಗಿ ಬೇಟೆಯಾಡುವ ಅಲ್ಲಿಯ ಪರಿಸರ ಅವರಿಗೆ ಹೊಂದಾಣಿಕೆಯಾಗಲಿಲ್ಲ. ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರರ ಮಾತುಗಳಲ್ಲೇ ಹೇಳಬಹುದಾದರೆ ರೆಡ್ಡಿಯವರಿಗೆ ಇದರಿಂದ ಹೊಸ ಜೀವನ ಪ್ರಾರಂಭವಾಯಿತೆನ್ನುವುದ ಸುಳ್ಳಾಯಿತು.

ರೆಡ್ಡಿಯವರು ಪ್ರಜಾಪ್ರಭುತ್ವದ ಬಗೆಗೆ ಆಧುನಿಕ ಭಾವನೆಯನ್ನಿಟ್ಟುಕೊಂಡಿದ್ದ ಪಾಶ್ಚಾತ್ಯಮೂಲದ ಉದಾರಚಿತ್ತದ ಪ್ರಜ್ಞಾವಂತರು. ಆಡಳಿತ ಪಕ್ಷದ ಅನೇಕರು ಸ್ವದೇಶೀನಾಯಕರಾಗಿದ್ದು ಮುಖ್ಯವಾದ ಅಧಿಕಾರವನ್ನೇ ದೃಷ್ಟಿಯಲ್ಲಿಟ್ಟುಕೊಂಡವರು. ಇವರಿಬ್ಬರಿಗೆ ಸಮಾನತೆ ಸಾಧ್ಯವಾಗಲಿಲ್ಲ, ಭಿನ್ನಾಭಿಪ್ರಾಯಗಳುಂಟಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ರೆಡ್ಡಿಯವರು ಪಾನಗಲ್ ಮಂತ್ರಿಮಂಡಲದ ಹುರುಳಿಲ್ಲದ ಪ್ರಜ್ಞಾರಹಿತ ರಾಜಕೀಯ ವಿಧಾನಗಳನ್ನು ನೋಡಿ ಎಷ್ಟು ಬೇಸರಗೊಂಡರೆಂದರೆ, ತಾವೇ ಒಂದು ಅವಿಶ್ವಾಸ ತೀರ್ಮಾನವನ್ನು ಮಂಡಿಸಿದರು. ಆಗ ಅವರು ಮಾಡಿದ ಭಾಷಣ ಚಿರಕಾಲ ಉಳಿಯುವಂಥದು. ಮಲಬಾರು ಮತ್ತು ಆಂಧ್ರಗಳಲ್ಲಿ ಪೋಲೀಸರ ದಬ್ಬಾಳಿಕೆಯ ಬಗೆಗೂ, ಜನತಾ ವಿರುದ್ಧ ಚಟುವಟಿಕೆಗಳ ಬಗೆಗೂ ತೀವ್ರ ವಿರೋಧ ವ್ಯಕ್ತಪಡಿಸಿದರು.

ಸಮಾನ ಅಭಿಪ್ರಾಯವುಳ್ಳ ಸ್ನೇಹಿತರ ನೆರವಿನಿಂದ ರೆಡ್ಡಿಯವರು ಆ ಕೂಡಲೇ ಯುನೈಟೆಡ್ ನ್ಯಾಷನಲ್ ಪಕ್ಷವನ್ನು ರೂಪಿಸಿದರು. ಸರ್ಕಾರವನ್ನು (ನೇಮಕಗೊಂಡ

ಸದಸ್ಯರ ಬೆಂಬಲದಿಂದ ಸ್ಥಿರವಾಗಿತ್ತೆಂಬುದನ್ನು ಮರೆಯಬಾರದು) ಉರುಳಿಸುವಷ್ಟು ಸದಸ್ಯರು ಶಕ್ತಿಯುತವಾಗಿಲ್ಲದಿದ್ದರೂ ಈ ಪಕ್ಷ ಸರ್ಕಾರಕ್ಕೆ ಆಗಾಗ್ಗೆ ಆತಂಕ ನೀಡುತ್ತಿತ್ತೆಂಬುದೇನೋ ನಿಜ.

ರಾಮಲಿಂಗಾರೆಡ್ಡಿಯವರ ಸ್ನೇಹಿತರು, ಅಭಿಮಾನಿಗಳು ಅವರು ಶಿಕ್ಷಣ ಮಂತ್ರಿಯಾಗದಿದ್ದುದಕ್ಕೆ ವ್ಯಥೆ ಪಡುತ್ತಿದ್ದರು. ಅವರ ಪ್ರತಿಭೆ ಮತ್ತು ಅವರು ಪಡೆದ ತರಬೇತಿ ಆ ಹುದ್ದೆಗೆ ತಕ್ಕವಾಗಿದ್ದವು. ಆದರೆ ಸರ್ಕಾರವನ್ನು ಟೀಕಿಸಿ ಅವರು ಯಾವಾಗಲೂ ಮಂತ್ರಿಗಳಿಗೆ ಆತಂಕವನ್ನುಂಟು ಮಾಡುತ್ತಿದ್ದರು. ಅವರ ಸದ್ಯಃ ಸ್ಫೂರ್ತಿ,ಕಟು ವ್ಯಂಗ್ಯ ವಿಧಾನ ಸಭೆಯ ವ್ಯರ್ಥಾಲಾಪಗಳ ಬೇಸರದ ನಡುವೆ ಜೀವಕಳೆಯನ್ನು ತರುತ್ತಿತ್ತು. ವಾದವಿವಾದಗಳಲ್ಲಿ ನುರಿತವರೇ ಆಗಿದ್ದ ಮುಖ್ಯಮಂತ್ರಿ ಪಾನಗಲ್ ರಾಜಾ ಆಗಾಗ್ಗೆ ರೆಡ್ಡಿಯವರ ಖಂಡನೆಗೆ ಗುರಿಯಾಗುತ್ತಿದ್ದರು.

ಅಧಿಕಾರ ಪಕ್ಷದವರು ವಿಧಾನಸಭೆಯಲ್ಲಿ ಬಹುಮತವನ್ನು ಗಳಿಸಲು ಅನುಸರಿಸುತ್ತಿದ್ದ ಸಂದೇಹಾಸ್ಪದ ವಿಧಾನಗಳನ್ನು ಪ್ರಸ್ತಾಪಿಸುತ್ತಾ "ನೇಮಕಗಳು ಅನುಬಂಧವನ್ನೂ ನಿರಾಶೆಗಳು ಪ್ರತಿಬಂಧವನ್ನೂ ಕಲ್ಪಿಸುತ್ತಿವೆ" ಎಂದರು.

ಒಂದು ಸಂದರ್ಭದಲ್ಲಿ ಸರ್ಕಾರದ ನೇಮಕಗಳು ಮತ್ತು ಲೋಪಗಳನ್ನು ರೆಡ್ಡಿ ಬಯಲಿಗೆಳೆಯುತ್ತಿದ್ದರಂತೆ. ಯಾವುದೋ ಪ್ರಯೋಜನವನ್ನಾಶಿಸಿ ಕೊಟ್ಟರೆಂದು ನಂಬಲಾದ ರೆಡ್ಡಿಯವರ ಒಂದು ಪತ್ರವನ್ನು ಜೇಬಿನಿಂದ ತೆಗೆಯುವುದಾಗಿ ಮುಖ್ಯಮಂತ್ರಿ ಬೆದರಿಸಿದರಂತೆ. ಬುದ್ಧಿವಂತರಾದ ಈ ಸದಸ್ಯರು ಅಷ್ಟು ಸುಲಭವಾಗಿ ಹೆದರುವವರಲ್ಲ. "ಇಂಗ್ಲೆಂಡಿನಲ್ಲಾದರೆ ಪ್ರೇಮಿಗಳು ಜಗಳವಾಡಿದಾಗ ಪರಸ್ಪರ ಬರೆದುಕೊಂಡ ಪತ್ರಗಳನ್ನು ಹಿಂದಿರುಗಿಸುತ್ತಾರೆ" ಎಂದು ಉತ್ತರಿಸಿದರಂತೆ.

ರೆಡ್ಡಿಯವರು ಮುಖ್ಯಮಂತ್ರಿಗಳನ್ನು ಯಾವಾಗಲೂ ಮುಳ್ಳಿನಂತೆ ಚುಚ್ಚುತ್ತಿದ್ದರೆಂಬುದು ನಿಜ. ಬಜೆಟ್ ಹಂಚಿಕೆಗಳ ಬಗ್ಗೆ ಅವರ ಟೀಕೆಗಳು ತುಂಬ ಪರಿಣಾಮಕಾರಿಯಾಗಿರುತ್ತಿದ್ದವು. ರಾಜ್ಯದಲ್ಲಿ ಶಿಕ್ಷಣಕ್ಕೆ ನಿಗದಿ ಮಾಡಿದ ನಿಧಿಗಳು ಅವರಿಗೆ ರೋಷವನ್ನುಂಟು ಮಾಡಿದವು. ಸಹಾಯ ನಿರಾಕರಣ ಚಳುವಳಿಯಿಂದಾಗಿ ಕಂದಾಯದ ವಸೂಲಿ ಸಮರ್ಪಕವಾಗಿ ನಡೆದಿಲ್ಲವೆಂಬುದನ್ನು ರೆಡ್ಡಿ ತೀವ್ರವಾಗಿ ಪ್ರತಿಭಟಿಸಿದರು. ಜನರೊಂದಿಗೆ ವರ್ತಿಸುವ ರೀತಿಯಲ್ಲಿ ವೈಫಲ್ಯವನ್ನು ಮರೆಸುತ್ತಿದ್ದಾರೆಂದು ರೆಡ್ಡಿಯವರು ಹೇಳಿದರು. ಇನ್ನೊಂದು ರೀತಿಯಲ್ಲಿ ತೆರಿಗೆ ವಿರುದ್ಧದ ಚಳುವಳಿಯ ವಿಜಯವನ್ನು ಒಪ್ಪಿದಂತಾಯಿತೆಂದು ಅವರು ಹೇಳಿದರು.

ಶಿಕ್ಷಣಕ್ಕೆ ಸಂಬಂಧಿಸಿದ ರೆಡ್ಡಿಯವರ ಉಪನ್ಯಾಸಗಳು ಜ್ಞಾನದಾಯಕ ಹಾಗೂ ಆಕರ್ಷಕವಾಗಿರುತ್ತಿದ್ದವೆಂದು ಎಲ್ಲರೂ ಹೇಳುತ್ತಿದ್ದರು. ಅವರ ಹಿನ್ನೆಲೆಯನ್ನು ಗೌರವದಿಂದ ನೋಡಿದವರಿಗೆ ಇದು ಅಷ್ಟೇನೂ ಅನಿರೀಕ್ಷಿತವಲ್ಲ. ಮದರಾಸು ವಿಶ್ವವಿದ್ಯಾನಿಲಯದ ಸುಧಾರಣೆಯನ್ನು ಕುರಿತ ವಾದಗಳಲ್ಲಿ ರೆಡ್ಡಿಯವರು ಉತ್ಸಾಹದಿಂದ

ಪಾಲ್ಗೊಳ್ಳುತ್ತಿದ್ದರು. ಈ ಸಂಬಂಧವಾಗಿ ನೇಮಕಗೊಂಡ ಸಮಿತಿಯೊಂದಿಗೂ ಅವರಿಗೆ ಸಂಬಂಧವಿತ್ತು.

ಆಂಧ್ರರ ಅಭಿಲಾಷೆಗಳನ್ನು ವ್ಯಕ್ತಪಡಿಸಲು ಯಾವಾಗಲೂ ಮುಂದಾಗುತ್ತಿದ್ದ ರೆಡ್ಡಿಯವರು, ಆಂಧ್ರ ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಸರ್ಕಾರ ಕೈಗೆತ್ತಿಕೊಂಡಾಗ ಸಹಜವಾಗಿಯೇ ಸಂತೋಷ ಪಟ್ಟರು. ಪ್ರತ್ಯೇಕ ರಾಜ್ಯದ ಸಾಧನೆಗೆ ಇದೊಂದು ಪೂರ್ವರಂಗವಾಗಬಹುದಿತ್ತು. ವಿಶ್ವವಿದ್ಯಾನಿಲಯದ ಸ್ಥಾಪನೆಯಿಂದಾಗುವ ಲಾಭವನ್ನು ಅನೇಕ ತಿದ್ದುಪಡಿಗಳಿಂದ ತಗ್ಗಿಸುತ್ತಿದ್ದುದನ್ನು ನೋಡಿ ರೆಡ್ಡಿಯವರು ವ್ಯಥೆಪಟ್ಟರು.

ಆಂಧ್ರ ವಿಶ್ವವಿದ್ಯಾನಿಲಯದ ಕಾಯಿದೆಯನ್ನು 1925ರಲ್ಲಿ ಜಾರಿಗೆ ತಂದಾಗ ರಾಮಲಿಂಗಾರೆಡ್ಡಿಯವರನ್ನು ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಕುಲಪತಿಯಾಗಿ ನೇಮಿಸಲಾಯಿತು. ಒಳ್ಳೆಯವರನ್ನು ಒಳ್ಳೆಯ ಹುದ್ದೆಗೆ ಆರಿಸಲಾಯಿತೆಂದು ಎಲ್ಲರೂ ಪ್ರಶಂಸಿಸಿದರು. ವಿಧಾನಸಭೆಯ ಪ್ರತಿಪಕ್ಷದ ಬೆಂಚುಗಳಲ್ಲಿ ಕುಳಿತು ತೊಂದರೆ ಕೊಡುವ ಸದಸ್ಯರಿಂದ ಮುಕ್ತವಾದೆವೆಂದು ಮುಖ್ಯಮಂತ್ರಿ ಸಂತೋಷಪಟ್ಟರೆಂಬ ಗುಸುಗುಸು ಕೇಳಿ ಬಂದಿತು. ''ರಾಜಕೀಯಕ್ಕೆ ನಷ್ಟ ಶಿಕ್ಷಣ ರಂಗಕ್ಕೆ ಲಾಭ''– ಎಂದು ಪತ್ರಿಕೆಗಳ, ಸಾರ್ವಜನಿಕರ ಅಭಿಪ್ರಾಯ ವ್ಯಕ್ತವಾಯಿತು. ದಯವಿಲ್ಲದ ವಿದೂಷಕನೊಬ್ಬ ''ರಾಜಕೀಯಕ್ಕೆ ಲಾಭ ಶಿಕ್ಷಣರಂಗಕ್ಕೆ ನಷ್ಟ'' ಎಂದು ಹೀಯಾಳಿಸಿದ.

# 6 ಕುಲಪತಿ

ರಾಮಲಿಂಗಾರೆಡ್ಡಿಯವರು ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದಾಗ ಆಂಧ್ರವಿಶ್ವ ವಿದ್ಯಾನಿಲಯವೆಂಬುದು ಹೆಸರಿಗೆ ಮಾತ್ರ ಇತ್ತು. ಅದಕ್ಕೆ ಸ್ಥಳೀಯವಾಗಿ ಒಂದು ಇರವೂ ಇರಲಿಲ್ಲ. ರೆಡ್ಡಿಯವರು ಬೆಜವಾಡ (ಅದನ್ನವರು ''ಬ್ಲೇಜ್‌ವಾಡ'' = ಉರಿಯುವ ಊರು, ಎಂದು ಕರೆಯಲಿಷ್ಟಪಡುತ್ತಿದ್ದರು) ದಲ್ಲಿ ಕೆಲಸ ಮಾಡುತ್ತಿದ್ದರು. ವಿಶ್ವವಿದ್ಯಾ ನಿಲಯದ ಕಾಯಿದೆ, ಆದರ ತೊಡಕುಗಳ ನಿವಾರಣೆ, ಚಿಹ್ನೆ ಮತ್ತು ಧ್ಯೇಯವಾಕ್ಯ, ಸಿಬ್ಬಂದಿವರ್ಗದ ನೇಮಕ–ಹೀಗೆ ಮೊದಲಿಂದ ಎಲ್ಲವನ್ನೂ ಅವರು ಮಾಡಬೇಕಾಗಿತ್ತು.

ಸ್ಥಳವನ್ನು ಆರಿಸುವುದು ರೆಡ್ಡಿಯವರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿತು. ಅನಂತಪುರ, ವಿಜಯವಾಡ, ರಾಜಮಂಡ್ರಿ, ಮತ್ತು ವಿಶಾಖಪಟ್ನಂ ಮುಂತಾದ ಆಂಧ್ರದ ಎಲ್ಲಾ ಮುಖ್ಯ ಪಟ್ಟಣಗಳಿಂದ ಒತ್ತಾಯ ಬಂತು. ''ಸ್ಥಳಕ್ಕಾಗಿಹೋರಾಟ'' ಎಂಬುದು ''ಸ್ವಲ್ಪಕಾಲ ಕೆರಳಿಸಿತು.'' ರೆಡ್ಡಿಯವರು ವಾಲ್ಟೇರಿನ (ವಿಶಾಖಪಟ್ನಂ) ಉನ್ನತ ಪ್ರದೇಶಗಳನ್ನು ಆರಿಸಿದರು. ಸಂಬಂಧಪಟ್ಟ ಅಧಿಕಾರಿಗಳೂ ಅದನ್ನು ಒಪ್ಪಿದರು. ಅದು ಒಳ್ಳೆಯ ಆಯ್ಕೆ ಎಂಬುದೂ ಆ ಮೇಲೆ ಖಚಿತವಾಯಿತು. ಸಮುದ್ರತೀರದಲ್ಲಿ, ಹಿತಕರ ವಾದ ಹವಾಮಾನವಿರುವುದರಿಂದ ಆ ಪ್ರದೇಶಕ್ಕಿಂತ ಒಳ್ಳೆಯ ಪ್ರದೇಶವೂ ಸಿಕ್ಕಿರ ಲಾರದು.

ಕೆಲವು ಹಳೆಯ ವಿಶ್ವವಿದ್ಯಾನಿಲಯಗಳಂತಲ್ಲದೆ ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮತ್ತು ಸಂಶೋಧನೆಗಳಿಗೆ ಹೆಚ್ಚುಗಮನ ಕೊಡಲಾಯಿತು. ವಿಶ್ವವಿದ್ಯಾನಿಲ ಯದ ಭಾಗವಾಗಿ ಕೆಲವು ಕಾಲೇಜುಗಳು, ಸಂಬಂಧಿತಕಾಲೇಜುಗಳೂ ಇದ್ದವು. ತಾವು ಸಾಮಾಜಿಕ ವಿಜ್ಞಾನಗಳ ವಿದ್ಯಾರ್ಥಿಯಾಗಿದ್ದರೂ, ವಿಭಾಗಗಳನ್ನು ರೂಪಿಸುವಾಗ ರೆಡ್ಡಿ ಯವರು ವಿಜ್ಞಾನದತ್ತ ಒಲವು ತೋರಿಸಿದರು. ಸಾಂಪ್ರದಾಯಿಕ ರೀತಿಯ ವಿಜ್ಞಾನಗಳ ಜೊತೆಗೆ ಗಣಿತೀಯ ಭೌತಶಾಸ್ತ್ರ, ಅಣುಭೌತಶಾಸ್ತ್ರ ಮುಂತಾದ ಹೊಸ ವಿಷಯಗಳೂ ಇದ್ದವು. ಇಂಗ್ಲೆಂಡಿನಲ್ಲೆ ಅಲ್ಲದೆ ಜಗತ್ತಿನ ಎರಡು ತೀರ ಹಳೆಯ ವಿಶ್ವವಿದ್ಯಾನಿಲಯ ಗಳಲ್ಲಿ ಒಂದರ ಶಿಷ್ಯರಾಗಿದ್ದರೂ, ಆಂಧ್ರ ವಿಶ್ವವಿದ್ಯಾನಿಲಯವನ್ನು ಕೇಂಬ್ರಿಡ್ಜ್‌ನ ಪಡಿಯಚ್ಚಿನಂತೆ ಮಾಡಲು ರೆಡ್ಡಿಯವರು ಇಷ್ಟಪಡಲಿಲ್ಲ. ಹಳೆಯ ಮತ್ತು ಹೊಸ ಪ್ರಪಂಚಗಳಲ್ಲಿ ಪ್ರಾಚ್ಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿರುವ ವಿಶ್ವವಿದ್ಯಾನಿಲಯಗಳ ಸದ್ಗುಣಗಳನ್ನು ಕೂಡಿಸಿ ಸರಿಯಾದ ರೀತಿಯಲ್ಲಿ, ಅಭಿವೃದ್ಧಿಶೀಲ ಸಮಾಜದ ಅಗತ್ಯಗಳಿಗೆ ತಕ್ಕಂತೆ ತಮ್ಮ ವಿಶ್ವವಿದ್ಯಾನಿಲಯವನ್ನು ರೂಪಿಸಿದರು.

ತೆಲುಗು ಭಾಷಾ ಸಾಹಿತ್ಯಗಳನ್ನು ಪ್ರೀತಿಸುವಲ್ಲಿ ಯಾರಿಗೂ ಕಡಿಮೆಯಿಲ್ಲ ದಿದ್ದರೂ, ರೆಡ್ಡಿಯವರು ತಮ್ಮ ವಿಶ್ವವಿದ್ಯಾನಿಲಯದಲ್ಲಿ ತೆಲುಗನ್ನು ಶೈಕ್ಷಣಿಕ ಮಾಧ್ಯಮವಾಗಿ ಮಾಡಲಿಲ್ಲ. ಶಿಕ್ಷಣದಲ್ಲಿ ಉನ್ನತ ಮಟ್ಟವನ್ನು ಕಾಪಾಡಬೇಕೆಂಬುದೇ

ಅವರ ಧ್ಯೇಯ; ಅಷ್ಟೇ ಅಲ್ಲವೆ ತಮ್ಮ ಸಂಸ್ಥೆ ವಿಶ್ವ ದೃಷ್ಟಿಯಿಂದ ಕೂಡಿರಬೇಕೆಂಬುದು ಅವರ ಆಸೆ. ಪ್ರತ್ಯೇಕ ವಿಭಾಗಗಳನ್ನು ಏರ್ಪಡಿಸುವ ಮೂಲಕ ತೆಲುಗು ಮತ್ತು ಇತರ ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸಿದರೆಂಬುದೇನೋ ನಿಜ. ಇಷ್ಟೇ ಸಾಕು ಇನ್ನು ಹೆಚ್ಚು ಬೇಕಿಲ್ಲವೆಂದು ಅವರು ಭಾವಿಸಿದರು. 'ಮೆಲ್ಲಗೆ ಓಡು' ಎಂಬುದು ಅವರ ಧ್ಯೇಯ.

ವಿಶ್ವವಿದ್ಯಾನಿಲಯದ ಚಿಹ್ನೆಯನ್ನು ಆಯ್ಕೆ ಮಾಡಲು ಅವರು ಪ್ರತ್ಯೇಕ ಶ್ರದ್ಧೆ ವಹಿಸಿದರು. ಸೂರ್ಯನ ಕೆಳಗೆ ಅರಳುತ್ತಿರುವ ಬಹು ಪತ್ರ ಪದ್ಮ, ಒಂದು ವರ್ತುಲವ ಕೇಂದ್ರವಾಗಿ ಎರಡು ಪಕ್ಕದಲ್ಲಿ ಎರಡು ಸರ್ಪಗಳು ಕಾಯುತ್ತಿರುತ್ತವೆ. "ಆಂಧ್ರ ವಿಶ್ವ ಕಳಾ ಪರಿಷತ್ತು" ಎಂಬ ಹೆಸರು ತೆಲುಗಿನಲ್ಲಿದೆ. ಧ್ಯೇಯ ಸೂತ್ರವಾದ "ತೇಜಸ್ವಿನಾ ಅವಧೂತ ಮಸ್ತು" (ವಿದ್ಯಾರ್ಥಿಗಳಾದ ನಾವು ತೇಜೋವಂತರಾಗಲಿ) ಎಂಬುದು ವೇದ ಮಂತ್ರ. ಸರ್ಪಗಳು ಜ್ಞಾನವನ್ನು ಸೂಚಿಸುವುದು ಮಾತ್ರವಲ್ಲದೆ, ಆಂಧ್ರರಿಗೆ ನಾಗಜಾತಿಯವರು ಪೂರ್ವಜರೆಂಬ ಪೌರಾಣಿಕ ಪ್ರಸಂಗವನ್ನು ಸೂಚಿಸುತ್ತಿರಬಹುದು. ಈ ಸಿದ್ಧಾಂತ ರೆಡ್ಡಿಯವರಿಗೆ ಪ್ರೀತಿಪಾತ್ರವೂ ಅಹುದು. ತಾವರೆ ತುಂಬ ಜನಪ್ರಿಯ ಆಶಯವಾಗಿ ಭಾರತೀಯ ಚಿತ್ರಕಲೆಯಲ್ಲಿ, ಹಿಂದೂ ವೇದಾಂತದಲ್ಲೂ ಇರುವಂಥದು. ಚಿತ್ತೂರಿನಲ್ಲಿರುವ ಮನೆಗೆ ರೆಡ್ಡಿಯವರು 'ಪದ್ಮಪ್ರಭಾಸ' ಎಂದು ಹೆಸರಿಟ್ಟಿರುವುದನ್ನು ನೋಡಿದಾಗ ಅವರಿಗೆ ಇದರ ಮೇಲಿರುವ ಪ್ರೀತಿ ಗೊತ್ತಾಗುತ್ತದೆ.

ಅಧ್ಯಾಪಕ ಸಿಬ್ಬಂದಿಯ ನೇಮಕದಲ್ಲಿ ರೆಡ್ಡಿಯವರು ಗುಣಮಟ್ಟವನ್ನೇ ಕಡ್ಡಾಯವಾಗಿ ಅನುಸರಿಸಿದರು. ಭಾಷೆ, ಜನ್ಮಸ್ಥಳಗಳನ್ನು ಗಣನೆಗೆ ತೆಗೆದುಕೊಳ್ಳದೆ ಉನ್ನತ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳನ್ನು ಆರಿಸಿಕೊಳ್ಳಲು ಸಿದ್ಧರಾಗಿದ್ದರು. ಎಲ್ಲರೂ ನಿರೀಕ್ಷಿಸಿದಂತೆ ಆಂಧ್ರರನ್ನು ಅಭಿಮಾನಿಸಲಿಲ್ಲವೆಂಬ ಟೀಕೆ ಕೆಲವು ಕಡೆ ಕೇಳಿ ಬಂತು. ರೆಡ್ಡಿಯವರು ಇದನ್ನು ಹೆಚ್ಚು ಹಚ್ಚಿಕೊಳ್ಳಲಿಲ್ಲ. ಇದು ಅವರ ವಸ್ತುನಿಷ್ಠತೆಗೆ ಪರೋಕ್ಷವಾದ ಅಭಿನಂದನೆಯೆಂದು ಭಾವಿಸಬಹುದು.

ವಿಶ್ವವಿದ್ಯಾನಿಲಯದ ಭಾವನೆಗೆ ರೂಪ ಕಲ್ಪನೆ ಮಾಡಲು ಅವರಿಗಿಂತ ಹೆಚ್ಚಾಗಿ ಯಾರೂ ಹೆಣಗಿರಲಾರರು. ಅವರು ಅನೇಕ ಅಡಚಣೆಗಳನ್ನು ಎದುರಿಸಿ ಜಯಾಪಜಯಗಳನ್ನು, ಬೇಸರದ ಕ್ಷಣಗಳನ್ನು ಮುನ್ನಡೆಯ ಕಾಲದಲ್ಲಿ ಅನುಭವಿಸಿದರು. ಮೊದಲ ಐದು ವರ್ಷಗಳ ಕೊನೆಯಲ್ಲಿ ಅವರ ನಿರ್ಮಾಣಾತ್ಮಕ ಕೃಷಿಯ ಫಲ ಕಂಡುಬಂದಿತು.

ಪೂರ್ಣಾವಧಿಯ ಕುಲಪತಿಗಳಾಗಿ ರೆಡ್ಡಿಯವರು ಪಕ್ಷದ ರಾಜಕೀಯವನ್ನು ಬಿಡಬೇಕಾಯಿತು. ಆದರೂ ಅವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಾಂಧೀಜಿಯವರ ಭಾವನೆಗಳಿಗೆ ಆದರ ತೋರುವ ಪ್ರಗತಿಶೀಲ ರಾಷ್ಟ್ರೀಯವಾದಿಯಾಗಿಯೇ ಇದ್ದರು. ಹೀಗಿದ್ದರೂ ಸಂವಿಧಾನದ ಬೆಂಬಲಿಗರಾಗಿ 1930 ರ ಅವಿಧೇಯ ಜನ ಚಳುವಳಿಯ ಉತ್ಸಾಹಿಗಳೊಂದಿಗೆ ಸೇರಲು ಇಷ್ಟಪಡಲಿಲ್ಲ. ಅವರ ಅಧಿಕಾರಶಾಹಿ ಅಸಹಕಾರ



Indian Institute of Advanced Study
117200
10.12.04

ಚಳುವಳಿಯನ್ನು ಹತ್ತಿಕ್ಕಲು ಅನುಸರಿಸಿ ಭಯಂಕರ ವಿಧಾನಗಳನ್ನಂತೂ ಅವರು ಒಪ್ಪಲಿಲ್ಲ. ಪ್ರತಿಭಟನಾ ಸೂಚಕವಾಗಿ ಅವರು ತಮ್ಮ ಕುಲಪತಿ ಪದವಿಗೆ ರಾಜೀನಾಮೆ ನೀಡಿದರು. ಕುಲಾಧಿಪತಿಗಳಾದ ಮದರಾಸಿನ ರಾಜ್ಯಪಾಲರಿಗೆ ಅವರು ಕೋಪೋದ್ರಿಕ್ತರಾಗಿ ಬರೆದ ಪತ್ರ ಚಿರಸ್ಮರಣೀಯ ದಾಖಲೆಯಾಗಿದೆ. ಪ್ರಸಿದ್ಧ ಪತ್ರಿಕೋದ್ಯಮಿಯಾದ ಖಾಸಾಸುಬ್ಬಾರಾವ್ ಇದನ್ನು "ರಾಷ್ಟ್ರದ ದೇಶಭಕ್ತಿ ಸಾಹಿತ್ಯದಲ್ಲಿ ಅತ್ಯುತ್ಕೃಷ್ಟವಾದುದು" ಎಂದು ಹೊಗಳಿದರು. ಲೇಖಕರ ನಿಲುವನ್ನು ಸಂಗ್ರಹಿಸಿದರೆ ಹೀಗಿರುತ್ತದೆ:

...ಅವರವರ ರಾಜಕೀಯ ಸಂಬಂಧಗಳೇನೇ ಇರಲಿ, ಭಾರತೀಯರೆಲ್ಲರೂ ಒಂದುಗೂಡಿ ಈ ದಬ್ಬಾಳಿಕೆಯನ್ನು ಪ್ರತಿಭಟಿಸುವುದು ಅವರ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಕಾಂಗ್ರೆಸ್ಸನ್ನು ವಿಭಜಿಸುವವರು ಕೂಡ ಅದು ಭಾರತದಲ್ಲಿ ರಾಷ್ಟ್ರೀಯತೆ ರೂಪಿಸುವ ಬೃಹತ್ ಪ್ರಯೋಗಶಾಲೆ ಎಂಬುದನ್ನು ಗುರುತಿಸಬೇಕು. ಪ್ರೇಮತತ್ತ್ವವನ್ನು, ಅಹಿಂಸೆಯನ್ನು ಬೋಧಿಸುವ ಮೂಲಕ ಕಾಂಗ್ರೆಸ್ ಭಾರತೀಯರಿಗೆ ಸಂಘಟನೆಯ ಕಲೆಯನ್ನು, ಶಿಸ್ತನ್ನು, ಆಧ್ಯಾತ್ಮಿಕ ರೀತಿಯ ರಾಜಕೀಯ ಚಳುವಳಿಯನ್ನು ಕಲಿಸಿಕೊಟ್ಟಿತು.

ನಮ್ಮ ದೇಶದ ಸ್ತ್ರೀ ಪುರುಷರ ತ್ಯಾಗಗಳು, ನೋವುಗಳು ಈ ಹುದ್ದೆಯಲ್ಲಿ ನಾನಿರುವುದಕ್ಕೆ ಸಾಧ್ಯವಿಲ್ಲದಂತೆ ಮಾಡುತ್ತಿವೆ. ಈ ರೀತಿಯ ಚಿತ್ರಹಿಂಸೆಗಳ ನಡುವೆ ಕುಲಪತಿಯ ಹುದ್ದೆ ನನಗೆ ಸಂತೋಷಕರವೂ ಅಲ್ಲ, ಗೌರವವೂ ಅಲ್ಲ.

1930 ಮತ್ತು 1936 ರ ನಡುವೆ ರೆಡ್ಡಿಯವರು ವಿಶ್ವವಿದ್ಯಾನಿಲಯವನ್ನು ಬಿಟ್ಟರು. ಆದರೂ ತಮ್ಮ ಉತ್ತರಾಧಿಕಾರಿಯಾಗಿ ಆಂಧ್ರದ ಇನ್ನೊಬ್ಬ ಮಹಾನ್ ಶಿಕ್ಷಣತಜ್ಞರು, ಸ್ನೇಹಿತರೂ ಆದ ಡಾ. ಎಸ್. ರಾಧಾಕೃಷ್ಣನ್ ನೇಮಕಗೊಂಡದ್ದು ರೆಡ್ಡಿಯವರಿಗೆ ತೃಪ್ತಿಯನ್ನು ಕೊಟ್ಟಿತು. ಅಸಹಕಾರ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರೂ, ರೆಡ್ಡಿಯವರು ಸುಮ್ಮನೆ ಕುಳಿತಿರಲಿಲ್ಲ. ಇದು ಅವರ ರಾಜಕೀಯ ವಿಷ್ಕಂಭ ಕಾಲವಾಗಿತ್ತು. ರೆಡ್ಡಿಯವರು ದುಂಡು ಮೇಜಿನ ಪರಿಷತ್ತಿನ ಬಗೆಗೂ, ಗಾಂಧೀಜಿಯವರ ಚಳುವಳಿಯ ಬಗೆಗೂ ಲೇಖನಗಳನ್ನು ಬರೆಯುತ್ತಾ, ಭಾಷಣಗಳನ್ನು ಮಾಡುತ್ತಾ ಇದ್ದರು. ಇವು ಆ ಮೇಲೆ "ಆರ್ಟಿಕಲ್ಸ್ ಆನ್ ಆರ್. ಟಿ. ಸಿ. ಅಂಡ್ ಅದರ್ ಅಡ್ರೆಸೆಸ್" ಎಂಬ ಹೆಸರಿನಲ್ಲಿ ಸಂಕಲಿತವಾದವು. ಮಹಾತ್ಮರ ಬಗೆಗೆ ಮನಮುಟ್ಟುವಂತೆ ಹೇಳುತ್ತಾ ಅವರು ಹೀಗೆ ಬರೆದರು:

ಮಹಾತ್ಮಾಗಾಂಧಿ ಲಂಡನ್ನಿನಲ್ಲೋ, ದೆಹಲಿಯಲ್ಲೋ ಇದ್ದುಕೊಂಡು ಸಂವಿಧಾನ-ನಿರ್ಮಾಣದಲ್ಲಿ ತೊಡಗದೆ, ಇಲ್ಲೇ ಇದ್ದು ರಾಷ್ಟ್ರ ನಿರ್ಮಾಣದ ಬಗೆಗೆ ಹೆಚ್ಚು ಚಿಂತಿಸುವಂತೆ ಕಾಣುತ್ತದೆ. ಬೇರೆಯವರು ಔತಣಗಳಲ್ಲಿ ತೊಡಗಿದ್ದರೆ ಅವರು ಉಪವಾಸದಲ್ಲಿ ತೊಡಗುತ್ತಾರೆ...ಅವರು ದುಃಖದ ಮಾನವ, ಯಾಕೆಂದರೆ ನಮ್ಮದು ದುಃಖದ ನಾಡು.

ಕುಲಪತಿಯ ಹುದ್ದೆಯನ್ನು ನಿರಾಯಾಸವಾಗಿ ಬಿಟ್ಟುಕೊಟ್ಟ ರೆಡ್ಡಿಯವರು ಸ್ಥಳೀಯ ರಾಜಕೀಯದಲ್ಲಿ ಪಾತ್ರವಹಿಸಲಿಚ್ಛಿಸಿದ್ದು ಸೋಜಿಗದ ಸಂಗತಿ. 1935 ರಲ್ಲಿ ಚಿತ್ತೂರು ಜಿಲ್ಲಾ ಮಂಡಲಿಯ ಅಧ್ಯಕ್ಷರಾಗಿ ಆಯ್ಕೆಗೊಂಡರು. ಈ ಆಯ್ಕೆಯು ಚೀಟಿ ತೆಗೆದು ಮಾಡಿದ ಆಕಸ್ಮಾತ್ ನಿರ್ಣಯ. ಅನಂತರ ವಿಧಾನ ಪರಿಷತ್ತಿಗೂ ಅವರು ಚುನಾಯಿತರಾದರು. ಬಹುಜನ ಕಾಂಗ್ರೆಸ್ ಸದಸ್ಯರು ಬಹಿಷ್ಕರಿಸಿದ್ದರಿಂದ ಪರಿಷತ್ತಿನಲ್ಲೂ ಅವರಿಗೆ ಹೆಚ್ಚಿನ ಕೆಲಸವೇನೂ ಇರಲಿಲ್ಲ.

ಇದೇ ಕಾಲದಲ್ಲಿ ಆಂಧ್ರ ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆ 1936 ರಲ್ಲಿ ಮತ್ತೊಮ್ಮೆ ಖಾಲಿಯಾಯಿತು, ಡಾ॥ ರಾಧಾಕೃಷ್ಣನ್ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಪೌರ್ವಾತ್ಯ ಧರ್ಮಗಳು ಮತ್ತು ನೀತಿಶಾಸ್ತ್ರ ಬೋಧಿಸುವ ಸ್ಪಾಲ್ಡಿಂಗ್ ಪ್ರಾಧ್ಯಾಪಕರ ಹುದ್ದೆಗೆ ಹೋದರು. ಖಾಲಿಯಾದ ಜಾಗಕ್ಕೆ ರೆಡ್ಡಿಯವರೇ ಸಹಜವಾಗಿ ಆಯ್ಕೆಯಾದರು. 1949 ರ ವರೆಗೆ ಅವ್ಯಾಹತವಾಗಿ ಆ ಹುದ್ದೆಯಲ್ಲಿದ್ದು ಅಂತಿಮವಾಗಿ ವಾಲ್ಟೇರನ್ನು ಬೀಳ್ಕೊಟ್ಟು ಮೈಸೂರು ವಿಶ್ವವಿದ್ಯಾನಿಲಯದ ಕುಲಾಧಿಪತಿಯಾದರು. ಇದಕ್ಕೆ ಕೆಲವು ವರ್ಷಗಳ ಹಿಂದೆ ಆಂಧ್ರ ವಿಶ್ವವಿದ್ಯಾನಿಲಯ ಡಾಕ್ಟರ್ ಆಫ್ ಲೆಟರ್ಸ್ ಗೌರವ ಪದವಿಯನ್ನು ನೀಡಿತು.

ಆಂಧ್ರ ವಿಶ್ವವಿದ್ಯಾನಿಲಯದೊಂದಿಗೆ ರೆಡ್ಡಿಯವರಿಗಿದ್ದ ನಿಕಟ ಸಂಪರ್ಕದ ಕಾಲದಲ್ಲಿ, ಕೆಲವು ಸಾರಿ ನಿರಾಶೆ ಉಂಟಾದರೂ ಹೃತ್ಪೂರ್ವಕವಾಗಿ ಆ ಸಂಸ್ಥೆಯನ್ನು ರೂಪಿಸಿದ ತೃಪ್ತಿ ಅವರಿಗೆ ಸಿಕ್ಕಿತು.

ಮೈಸೂರಿನಲ್ಲಿ ಅವರ ಇರುವಿಕೆ ಸ್ವಲ್ಪ ಕಾಲ ಮಾತ್ರವಾಗಿತ್ತು. ಅವರ ಆರೋಗ್ಯವೂ ಸರಿಯಾಗಿರಲಿಲ್ಲ. ಭಾರವಾದ ಕಾರ್ಯಾಲಯದ ಚಟುವಟಿಕೆಗಳಿಂದ ಮುಕ್ತವಾಗುವುದೇ ಅವರಿಗೆ ಸಂತೋಷಕರವಾಗಿತ್ತು. ಮೈಸೂರಿನಲ್ಲಿ ಅವರಿದ್ದ ಒಂದು ವರ್ಷ ಅಥವಾ ಹೆಚ್ಚು ಕಾಲದಲ್ಲಿ ರೆಡ್ಡಿಯವರು ಶಿಕ್ಷಣತಜ್ಞರಾಗಿ ತಮ್ಮ ಪರಿಣತ ಜ್ಞಾನ ಸಂಪತ್ತನ್ನು, ಅನುಭವದ ಹರವನ್ನು ಮೈಸೂರಿಗೆ ನೀಡಿದರು.

1951 ರ ಆರಂಭದಲ್ಲಿ ರಾಮಲಿಂಗಾರೆಡ್ಡಿ ಅನಾರೋಗ್ಯಕ್ಕೊಳಗಾದರು. ಮದರಾಸಿಗೆ ತೆರಳಿ ಅಲ್ಲಿಯ ಒಂದು ನರ್ಸಿಂಗ್ ಹೋಂಗೆ ಸೇರಿದ ರೆಡ್ಡಿಯವರಿಗೆ ಶಸ್ತ್ರಚಿಕಿತ್ಸೆ ಮಾಡಲಾಯಿತು. 1951 ರ ಫೆಬ್ರವರಿ 24 ರಂದು ಅವರು ನಿಧನರಾದರು.

# 7 ಕವಿ

ರಾಮಲಿಂಗಾರೆಡ್ಡಿಯವರು ಸಮೃದ್ಧ ಸಾಹಿತ್ಯವನ್ನು ಸೃಷ್ಟಿಸಿದ ಲೇಖಕರಲ್ಲ ದಿದ್ದರೂ ಸ್ವೋಪಜ್ಞತೆಯುಳ್ಳವರು. ಗದ್ಯದಲ್ಲಿ ಅವರು ಬರೆದದ್ದು ಕಡಮೆಯೆಂದರೆ, ಪದ್ಯದಲ್ಲಿ ಇನ್ನೂ ಕಡಮೆ. ಶಿಕ್ಷಣತಜ್ಞರಾಗಿ, ಆಡಳಿತಗಾರರಾಗಿ ಮತ್ತು ರಾಜಕಾರಣಿ ಯಾಗಿ ಜೀವನದಲ್ಲಿ ಕಾರ್ಯನಿರತರಾಗಿದ್ದುದು ಇದಕ್ಕೆ ಸ್ವಲ್ಪಮಟ್ಟಿಗೆ ಕಾರಣ ಇರ ಬಹುದು. ಕವಿಯಾಗಿ ಅವರ ಖ್ಯಾತಿ ಮುಖ್ಯವಾಗಿ 'ಮುಸಲಮ್ಮ ಮರಣಮು' ಎಂಬು ದನ್ನು ಆಧರಿಸಿದ್ದು, ಕೆಲವು ಪುಟ್ಟ ರಚನೆಗಳು ಸ್ವಲ್ಪಮಟ್ಟಿಗೆ ಕಾರಣವೆನ್ನಬಹುದು. ಇವೆಲ್ಲವನ್ನೂ ಸೇರಿಸಿದರೂ ಐವತ್ತು ಮುದ್ರಿತ ಪುಟಗಳಿಗಿಂತ ಹೆಚ್ಚಾಗುವುದಿಲ್ಲ. ಅವರ ರಚನೆಗಳ ರಾಶಿಗಿಂತ ಅವುಗಳ ಗುಣಪೌಷ್ಕಲ್ಯ ಓದುಗರ ಗಮನ ಸೆಳೆಯುತ್ತದೆ.

ರೆಡ್ಡಿಯವರು ಪ್ರಾಚೀನಶಿಷ್ಟ ಸಾಹಿತ್ಯದಹಿನ್ನೆಲೆ, ಸಮಕಾಲೀನ ಪ್ರಜ್ಞೆಯುಳ್ಳ ಕವಿಯೆಂದು ತಿಳಿಯಲು ಹೆಚ್ಚುಕಾಲ ಹಿಡಿಯುವುದಿಲ್ಲ. ಅವರು ಆಧುನಿಕತೆಯುಳ್ಳವರು; ಆದರೆ ಅವರ ಆಧುನಿಕತೆ ಭಿನ್ನ ರೀತಿಯದು. ಸೃಜನಶೀಲಗುಣ ತುಂಬ ಚಿಕ್ಕ ವಯಸ್ಸಿ ನಲ್ಲೇ ಎಚ್ಚರಗೊಂಡು, ಆದರೆ ಸಾಕಷ್ಟು ಕೆಲಸಮಾಡುವವರೆಗೆ ಅದು ಹಾಗೆಯೇ ಉಳಿ ದಂತೆ ಕಾಣುವುದಿಲ್ಲ. ಅವರ ಜೀವನದ ನಿರ್ದಿಷ್ಟಕಾಲದಲ್ಲಿ ಓದಿದ ತೆಲುಗು ಪ್ರಾಚೀನ ಸಾಹಿತ್ಯ, ಅದರಲ್ಲೂ ಮಹಾಭಾರತ, ಪಿಂಗಳಿಸೂರನನ ಪ್ರಬಂಧಗಳು ಅವರ ಸಾಹಿತ್ಯಾ ಭಿರುಚಿಯ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ಇದರಿಂದ ಹೊರಬೀಳುವುದೇ ಅವ ರಿಗೆ ಕಷ್ಟವಾಯಿತು. ಅವರ ಮೊಟ್ಟಮೊದಲ ಹಾಗೂ ತುಂಬ ಗಮನಾರ್ಹವಾದ ಕೃತಿ ಯಿಂದ ಇದು ಚೆನ್ನಾಗಿ ತಿಳಿಯುತ್ತದೆ.

**ಮುಸಲಮ್ಮ ಮರಣಮು (1899)**

ಈ ಕಾವ್ಯವನ್ನು ಬರೆದಾಗ ರೆಡ್ಡಿಯವರಿಗೆ 19 ವರ್ಷ. ಅವರು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಆಂಧ್ರ ಭಾಷಾಭಿರಂಜನಿ ಸಂಘ ಏರ್ಪಡಿಸಿದ ಸ್ಪರ್ಧೆಗಾಗಿ ರೆಡ್ಡಿ ಇದನ್ನು ಬರೆದರು. ಸಂಘದ ಪೋಷಕರಾದ ಸಮರ್ಥಿ ರಂಗಯ್ಯಸೆಟ್ಟಿ ಇದನ್ನು ಬರೆಯುವಂತೆ ಪ್ರೋತ್ಸಾಹಿಸಿದರು. ರೆಡ್ಡಿಯವರು ಬರೆದದ್ದು ಮಾತ್ರವಲ್ಲದೆ ಬಹುಮಾನವನ್ನೂ ಪಡೆದರು. ಸಹಪಾಠಿಗಳ ಆಸಕ್ತಿಯ ಫಲದಿಂದ ಒಂದು ವರ್ಷದ ಅನಂತರ ಈ ಕೃತಿ ಅಚ್ಚಾಯಿತು.

ಇದು ಸುಮಾರು ನೂರು ಪದ್ಯಗಳಿರುವ ಕಥನಗೀತೆ. ಬ್ರಿಟಿಷ್ ಅಧಿಕಾರಿಯೂ ತೆಲುಗು ವಿದ್ವಾಂಸರೂ ಆಗಿದ್ದ ಸಿ. ಪಿ. ಬ್ರೌನ್‌ರ 'ಹಿಸ್ಟರಿ ಆಫ್ ಅನಂತಪುರ್ ಡಿಸ್ಟ್ರಿಕ್ಟ್' ನಿಂದ ಕಥೆಯನ್ನು ಸ್ವೀಕರಿಸಲಾಯಿತು. ಅನಂತಪುರದ ಬಳಿಯಿರುವ ಬುಕ್ಕರಾಯ ಸಮುದ್ರಂ ಎಂಬ ಹಳ್ಳಿ ಕಥೆ ನಡೆಯುವ ಸ್ಥಳ. ಕೆರೆ ಒಡೆದು ಮಹಾಪೂರ ಬಂದಾಗ

ಭೀತಿಗೊಂಡ ಹಳ್ಳಿಗರು ಗ್ರಾಮದೇವತೆಯಾದ ಪೋಲೇರಮ್ಮನನ್ನು ಕಾಪಾಡುವಂತೆ ಬೇಡುತ್ತಾರೆ. ಮುಸಲಮ್ಮ ಎಂಬ ಆ ಊರಿನ ಯುವತಿಯನ್ನು ಬಲಿಕೊಟ್ಟರೇನೇ ದೇವತೆಗೆ ಶಾಂತಿಯಾಗುತ್ತದೆಂದು ಆಮೇಲೆ ಗೊತ್ತಾಗುತ್ತದೆ. ಅವಳು ಕೋಮಲಿ, ಉದಾರಿ, ಮತ್ತು ಉತ್ತಮ ಶೀಲವುಳ್ಳವಳು. ಊರಿನ ಜನಕ್ಕಾಗಿ ತನ್ನ ಪ್ರಾಣ ಅರ್ಪಿಸಲು ಅವಳು ಒಪ್ಪಿಕೊಳ್ಳುತ್ತಾಳೆ. ಕೆರೆ ಶಾಂತವಾಗುತ್ತದೆ. ''ಮುಸಲಮ್ಮ ಕಟ್ಟೆ'' ಎಂದು ಇಂದಿಗೂ ಆ ಧೀರೆಯ ಹೆಸರಿನಲ್ಲಿಯೇ ಆ ಕೆರೆ ಇದೆ.

ರೆಡ್ಡಿಯವರು ತಮ್ಮ ಕಾವ್ಯ ವಸ್ತುವನ್ನು ಸ್ವೀಕರಿಸುವಾಗ ಅದನ್ನು ಆವರಿಸಿರುವ ಕರುಣರಸಧಾರೆಗೆ ಮಾರುಹೋಗಿದ್ದಾರೆ. ಮೂಲಕಥೆಗೆ ಪಾತ್ರಚಿತ್ರಣ ಮತ್ತು ಕಲಾತ್ಮ ಕತೆಯ ಇತರ ಗುಣಗಳ ದೃಷ್ಟಿಯಿಂದ ರೆಡ್ಡಿಯವರು ಕೆಲವು ಸಣ್ಣ ಪುಟ್ಟ ಮಾರ್ಪಾಡು ಗಳನ್ನು ಮಾಡಿದರು.

ಕವಿಯ ರಚನಾವಿಧಾನ ಸಂಪೂರ್ಣವಾಗಿ ಸಾಂಪ್ರದಾಯಿಕ. ಇದು ಪ್ರಾಚೀನ ಪ್ರಬಂಧ ಶೈಲಿಯಲ್ಲಿದೆ. ಅವರು ಬಳಸಿದ್ದು ಗ್ರಂಥಸ್ಥ ಭಾಷೆ. ಈ ಕೃತಿ ಕೆಲವೆಡೆ ಉದ್ದನೆಯ ಸಂಸ್ಕೃತ ಸಮಾಸಗಳಿಗಿಂದ, ಇನ್ನು ಕೆಲವೆಡೆ ಪ್ರಾಚೀನ ಅಚ್ಚ ತೆಲುಗು ಪದಗಳಿಂದ ಕೂಡಿದೆ. ಅವರು ಬಳಸಿದ ಪದ್ಯಗಳು ಸಂಸ್ಕೃತ ಸಂಪ್ರದಾಯದ ವೃತ್ತಗಳಾದ ಉತ್ಪಲಮಾಲ, ಚಂಪಕಮಾಲ ಅಥವಾ ಸೀಸಪದ್ಯಂ, ಕಂದಪದ್ಯಂ. ಆಟವೆಲದಿ, ತೇಟಗೀತಿ ಮುಂತಾದ ದೇಸೀಯ ಪದ್ಯಗಳು. ಇಷ್ಟದೇವತಾ ಪ್ರಾರ್ಥನೆ, ಸುಕವಿಸ್ತುತಿ, ಕವಿ ಸಮರ್ಪಣ, ಭರತವಾಕ್ಯ ಮುಂತಾದ 'ಪ್ರಬಂಧ' ರಚನಾ ಸಂಬಂಧವಾದ ಪ್ರಸಿದ್ಧ ಗುಣಗಳೂ ಇವೆ. 107 ಪದ್ಯಗಳ ಈ ಕೃತಿಯ ಪೀಠಿಕಾಭಾಗದಲ್ಲೇ 16 ಪದ್ಯಗಳಿವೆ. ಸಾಂಪ್ರದಾಯಿಕವಾದ ಮುಕ್ತಾಯದಲ್ಲಿರುವ ಮೂರು ಪದ್ಯಗಳ ಬಗೆಗೆ ಬೇರೆ ಹೇಳಬೇಕಾಗಿಲ್ಲ.

ವರ್ಣನೆಯ ಭಾಗಗಳಲ್ಲಿ ಪ್ರಬಂಧ ಶೈಲಿಗಿಂತ ತೀರ ಭಿನ್ನವಾದುದೇನೂ ಕಂಡು ಬರುವುದಿಲ್ಲ. ಊರಿನ ಕೆರೆಯನ್ನು ದೊಡ್ಡ ಅಲೆಗಳಿಂದ ಕೂಡಿದ ಘೋರಸರಸ್ಸಿಗೆ, ಮಹಾ ಸಮುದ್ರಕ್ಕೆ ಹೋಲಿಸಲಾಗಿದೆ. ಈ ಪದ್ಯ ಶಬ್ದಾಡಂಬರದಿಂದ ಕೂಡಿದೆ.

> ಜಲದುತ್ತುಂಗ ಮಹೋಗ್ರಭಂಗಪಟಲೀ ಸಂಘಟ್ಟನಾರಾವಮು
> ಜ್ವಲಕೂಲಾಗ್ರನಟತರಂಗರವ ಮಂಚನ್ಮಧ್ಯ ಭಾಗ್ಭೂಮಿಭೃ
>
> ತ್ಕುಲ ಸಂಪಾತಿ ಮಹೋರ್ಮಿಕಾ ನಿಕರ ನಿರ್ಘೋಷಂಬುನಂ ಗೂಡಗಾ
> ನಲರುನ್ ಘೋರ ಸರಸ್ಸು ದಿಗ್ವಿದಳನವ್ಯಾಪಾರ ಪಾರೀಣಮೈ.

ಇದರ ಸಾರಾಂಶವನ್ನು ಹೀಗೆ ಹೇಳಬಹುದು:

ಆ ದೊಡ್ಡ ಸರಸ್ಸು ತನ್ನ ಭಯಂಕರ ಶಬ್ದದಿಂದ ದಿಕ್ಕುಗಳನ್ನು ಭೇದಿಸುವಂತಿದೆ. ಆ ಅಲೆಗಳು ದಡದಲ್ಲಿ ನಾಟ್ಯವಾಡುತ್ತಿವೆ, ನೀರಿನ ಮಧ್ಯಭಾಗದಲ್ಲಿರುವ ಬೆಟ್ಟವನ್ನು ಮುಟ್ಟುತ್ತಿವೆ.

ಕೆರೆಯ ಆಕಾರ ಎಂತಹದೇ ಇರಲಿ ಲೇಖಕನ ಗುರಿ ವಾಸ್ತವ ಚಿತ್ರಣವಾಗಿದ್ದರೆ ಈ ರೀತಿಯ ಅತಿಶಯೋಕ್ತಿ ಓದುಗರಲ್ಲಿ ವಿಶ್ವಾಸವನ್ನು ಮೂಡಿಸುವುದಿಲ್ಲ. ಪ್ರಧಾನ ಪಾತ್ರವಾದ ಮುಸಲಮ್ಮನ ಗುಣಗಳನ್ನು ವರ್ಣಿಸುವಾಗ ಕವಿ ಬಳಸಿದ ಉಪಮೆ ಮತ್ತು ರೂಪಕಗಳು ಕೆಲವು ಸಂದರ್ಭಗಳಲ್ಲಾದರೂ ಪ್ರಬಂಧ ಕಾವ್ಯಗಳ ನಾಯಿಕೆಯರನ್ನು ನೆನಪಿಗೆ ತರುತ್ತವೆ.

ಈ ಕಾವ್ಯಮೂಲಭೂತವಾಗಿ ಆಧುನಿಕ ರೀತಿಯದೆಂದು ಇದರ ಪರವಾಗಿ ವಾದಿಸುವವರು ಹೇಳುತ್ತಾರೆ (ಮುಖ್ಯವಾಗಿ ಹೆಸರಿಸಬೇಕಾದರೆ ಇದಕ್ಕೆ ಸುದೀರ್ಘ ಪೀಠಿಕೆಯನ್ನು ರಚಿಸಿದ ದಿ|| ಪ್ರೊ. ಪಿಂಗಳಿ ಲಕ್ಷ್ಮೀಕಾಂತಂ). ಹೀಗೆ ಹೇಳಲು ಕಾರಣ ಒಂದೇ. ಹಳ್ಳಿಯ ಸಾಮೂಹಿಕ ಕ್ಷೇಮಕ್ಕಾಗಿ ವ್ಯಕ್ತಿಯ ತ್ಯಾಗದ ರೂಪದಲ್ಲಿ ಸಮಕಾಲೀನವೂ, ಸೂಕ್ತವೂ ಆದ ಸಾಮಾಜಿಕ ವಸ್ತು ಇದರಲ್ಲಿದೆ. ಆಂಧ್ರದ ರಾಯಲಸೀಮಾ ಭಾಗ ವರ್ಷಾಭಾವಕ್ಕೆ ಹೆಸರಾಗಿದ್ದು, ವಾಯುಗುಣವನ್ನು ನಂಬಿಕೊಂಡಿರುವ ಪರಿಸ್ಥಿತಿಯಿದ್ದು, ಅತಿವೃಷ್ಟಿ ಅಥವಾ ಅನಾವೃಷ್ಟಿಗೆ ತುತ್ತಾಗುತ್ತಿರುತ್ತದೆ. ಸಾಂಪ್ರದಾಯಿಕ ಪ್ರಾಚೀನ ತೆಲುಗು ಕಾವ್ಯ ಪೌರಾಣಿಕ, ಐತಿಹಾಸಿಕ ಅಥವಾ ಐತಿಹ್ಯಾತ್ಮಕ ವಸ್ತುಗಳನ್ನು ಒಳಗೊಂಡಿದೆಯೇ ಹೊರತು ಸಾಮಾಜಿಕ ವಸ್ತುಗಳನ್ನಲ್ಲ.

ಈ ಕಾವ್ಯದ ಇನ್ನೊಂದು ವಿಶೇಷ ಎಂದರೆ ನಾಯಿಕೆಯ ಮರಣದಿಂದ ಇದು ದುರಂತವಾಗಿರುವುದು. ಈ ರೀತಿ ಮಾಡುವುದು 'ಅಮಂಗಳಕರ'ವೆಂದು ಕಾವ್ಯ ಸಂಪ್ರದಾಯದಲ್ಲಿ ಇದನ್ನು ಅಂಗೀಕರಿಸುವುದಿಲ್ಲ. 'ಕಾವ್ಯ' ಗಳು, 'ಪ್ರಬಂಧ' ಗಳು ಮದುವೆ, ದಿಗ್ವಿಜಯ ಮುಂತಾದ ಸಂತೋಷಕರವಾದ ಪ್ರಸಂಗಗಳಿಂದ ಅಂತ್ಯವಾಗಬೇಕು (ಮಂಗಳಾದೀನಿ, ಮಂಗಳಮಧ್ಯಾನಿ, ಮಂಗಳಾಂತಾನಿ). ಆದುದರಿಂದ ರೆಡ್ಡಿಯವರು ಮಾಡಿದ ಪ್ರಯೋಗ ಸಾಹಸೋಪೇತವಾದುದು, ನವೀನವೂ, ಆಧುನಿಕ ತೆಲುಗು ಕಾವ್ಯದಲ್ಲಿ ಗುರುತಿಸಬೇಕಾದ ಮೈಲಿಗಲ್ಲೂ ಆಗಿದೆ.

ಮೂರನೆಯದಾಗಿ, ಮುಸಲಮ್ಮನ ಪಾತ್ರ, ಚಿತ್ರಣ ಸಂಯಮದಿಂದ ಕೂಡಿದ್ದೂ ವಾಸ್ತವವೂ ಎಂದೂ ಪ್ರಬಂಧನಾಯಿಕೆಯರಂತೆ ಅತಿಶಯೋಕ್ತಿಗಳಿಂದ, ಒಂದೇ ರೀತಿಯ ವರ್ಣನೆಗಳಿಂದ ಕೂಡಿಲ್ಲವೆಂದು ಹೇಳಲಾಗಿದೆ ನಾಯಿಕೆಯ ಹೃದಯವಂತಿಕೆ, ಗೃಹಿಣಿಯಾಗಿ ಕರ್ತವ್ಯನಿಷ್ಠೆ, ವಿಧೇಯತೆ, ಆತ್ಮೀಯತೆ, ಮಾತೃಮೂರ್ತಿಯ ಸೌಕುಮಾರ್ಯಗಳಿಗೆ ಇಲ್ಲಿ ಹೆಚ್ಚುಗಮನ ಕೊಡಲಾಗಿದೆ. ಆಪಾದ ಮಸ್ತಕ ವರ್ಣನೆಯಲ್ಲಿ ತೊಡಗಿ, ದೈಹಿಕ ಸೌಂದರ್ಯ ಚಿತ್ರಣಕ್ಕೆ ಅಂಟಿಕೊಳ್ಳುವ ಪ್ರಬಂಧಕವಿಗಳ ಪದ್ಧತಿಯನ್ನು ಕೈಬಿಡಲಾಗಿದೆ. ಕೃತಿಯಲ್ಲಿ ಪ್ರಧಾನವಾಗಿರುವ ಶಾಂತರಸದೃಷ್ಟಿಗೆ ಇದು ಹೊಂದಿಕೊಂಡಿದೆ. ಪ್ರಬಂಧಕವಿಗಳಿಗೆ ಇಷ್ಟವಾದ ಶೃಂಗಾರರಸಕ್ಕೆ ಈ ಕೃತಿಯಲ್ಲಿ ಸ್ಥಾನವಿಲ್ಲ.

ಸಮಕಾಲೀನ ವಿಮರ್ಶಕರು ಹೇಳುವಂತೆ ಒಂದು ಕಾವ್ಯದ ನಿಜವಾದ ಆಧುನಿಕತೆಯೆಂಬುದು ವಸ್ತುವನ್ನು ಸ್ವೀಕರಿಸುವುದರಲ್ಲಿ, ಕಾವ್ಯಾಂತ್ಯದಲ್ಲಿ ಇರುವುದಿಲ್ಲ. ಕವಿ ತನ್ನ

ಕಾವ್ಯ ವಸ್ತುವನ್ನು ಪೌರಾಣಿಕ, ಐತಿಹಾಸಿಕ, ರಾಜಕೀಯ ಅಥವಾ ಸಾಮಾಜಿಕ ಮೂಲಗಳಿಂದ ತೆಗೆದುಕೊಳ್ಳಬಹುದು. ಆದರೆ ಅವನು ಅದನ್ನು ಹೇಗೆ ರೂಪಿಸುತ್ತಾನೆ ಎಂಬುದು ಮುಖ್ಯ. ರೆಡ್ಡಿಯವರು ಆಧುನಿಕ ರೀತಿಯಲ್ಲಿ ಅದನ್ನು ರೂಪಿಸಿಲ್ಲ ಎಂದು ಹೇಳಬೇಕಾಗುತ್ತದೆ. ಸಾಂಪ್ರದಾಯಿಕ ರೀತಿಯಲ್ಲಿ ಇದೊಂದು ವೈವಿಧ್ಯವೆಂದು ಹೇಳಬಹುದೇನೋ ! ಇದೊಂದು ಧೈರ್ಯದ ಹೆಜ್ಜೆಯೆಂದೂ ಹೇಳುವಹಾಗಿಲ್ಲ. ದುರಂತ ಅಂತ್ಯದ ಬಗ್ಗೆ ಹೇಳುವುದಾದರೆ, ಇದು ಪೂರ್ತಿಯಾಗಿ ಹೊಸದಲ್ಲ; ಕಥೆಯಲ್ಲೇ ಒಂದು ಭಾಗ. ಏಕೆಂದರೆ ರೆಡ್ಡಿಯವರಿಗೆ ಆಧಾರವಾಗಿರುವ ಮೂಲಕಥೆಯಲ್ಲೇ ಈ ಭಾಗವಿದೆ. ಆದುದರಿಂದ ಈ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಕೊಡುವಹಾಗಿಲ್ಲ.

ತರುಣ ಕವಿಯಾದ ರೆಡ್ಡಿಯವರು ಉನ್ನತ ಮಟ್ಟದ ಛಂದೋಜ್ಞಾನವನ್ನು, ನಿರ್ದುಷ್ಟ ಭಾಷಾ ಪ್ರಯೋಗವನ್ನು ತೋರಿಸಿದ್ದಾರೆ. ರಚನಾ ತಂತ್ರಕ್ಕಾಗಿ ಅವರು ಮೆಚ್ಚಿದ ಕವಿಗಳು ತಿಕ್ಕನ ಮತ್ತು ಪಿಂಗಳಿಸೂರನ. ಎಲ್ಲೆಲ್ಲಿ ಅನುಕೂಲವಿದೆಯೋ ಅಲ್ಲೆಲ್ಲ ರೆಡ್ಡಿಯವರು ಈ ಕವಿಗಳನ್ನು ಅನುಸರಿಸಿದ್ದಾರೆ. ಅಲ್ಲಲ್ಲಿ ನನ್ನಯ, ಪೋತನರ ಛಾಯೆಗಳೂ ಕಂಡು ಬರುತ್ತವೆ. ಇವೆಲ್ಲಾ ಹೇಗೆ ಇದ್ದರೂ ರೆಡ್ಡಿಯವರು ಪದ್ಯದಲ್ಲಿ ಕಥೆ ಹೇಳುವ ರೀತಿಯಲ್ಲಿ ಓದುಗರನ್ನು ಆಕರ್ಷಿಸುತ್ತದೆ. ನಯವಾಗಿ ಒಪ್ಪಿಗೆಯಾಗುವ ರೀತಿಯಲ್ಲಿ ಹೇಳುವ ಸಾಮರ್ಥ್ಯವೂ ಅವರಿಗಿದೆ.

ಮುಸಲಮ್ಮ ಮತ್ತು ಅವಳ ಗಂಡನ ಸಂವಾದವನ್ನು ಸಮರ್ಥವಾಗಿ ನಿರೂಪಿಸಲಾಗಿದೆ. ಕರ್ತವ್ಯ ನಿಷ್ಠ ದೃಢ ನಿಶ್ಚಯವುಳ್ಳ ಹೆಂಡತಿ, ಅವಳ ನಿಶ್ಚಯದಿಂದ ವಿಷಣ್ಣನಾದ ಪ್ರೀತಿಯ ಗಂಡ – ಇವರಿಬ್ಬರೂ ಸ್ನೇಹಪೂರ್ವಕ ಚತುರ ಸಂಭಾಷಣಾ ಯುದ್ಧದಲ್ಲಿ ತೊಡಗುತ್ತಾರೆ. ವಾದಕ್ಕೆವಾದ, ಭಾವುಕತೆಯ ಮಾತಿಗೆ ಮಾತು ನಡೆಸುತ್ತಾರೆ. ಕೊನೆಗೆ ಹೆಂಡತಿಯೇ ಗೆಲ್ಲುತ್ತಾಳೆ. ಹೆಂಗಸಾದ್ದರಿಂದ ಈ ಗೌರವ ಸಿಕ್ಕಿದೆ ಎಂದು ಹೇಳುವುದೂ ಸರಿಯಲ್ಲ. ಆಕೆ ಕೊನೆಯ ಮಾತನಾಡುತ್ತಾ ಹಿಂದೊಮ್ಮೆ ಏನು ಬೇಕಾದರೂ ಕೇಳು ಎಂದು ಗಂಡ ಮಾತುಕೊಟ್ಟು ಅದರ ಬಗ್ಗೆ ಒತ್ತಾಯಿಸಿದನ್ನು ನೆನಪು ಮಾಡುತ್ತಾಳೆ. ಆ ವೇಳೆ ಈಗ ಬಂದಿತು. ತಾನು ನಿರ್ಗಮಿಸಲು ಅನುಮತಿಯನ್ನು ಮಾತ್ರ ಅವಳು ಬೇಡುತ್ತಾಳೆ. 'ಇಲ್ಲ' ಎನ್ನುವ ಉತ್ತರವನ್ನು ಸ್ವೀಕರಿಸಲು ತಯಾರಿರಲಿಲ್ಲ. ಅವನ ಮೌನವನ್ನು ಅರ್ಧಾಂಗೀಕಾರವೆಂದು ಮಾತ್ರವಲ್ಲ, ಪೂರ್ಣಾಂಗೀಕಾರವೆಂದೇ ಸ್ವೀಕರಿಸಿ ಪವಿತ್ರ ಪ್ರಯಾಣಕ್ಕೆ ಸಿದ್ಧವಾಗುತ್ತಾಳೆ.

ಹೊರಡುವ ವೇಳೆಯಲ್ಲಿ ಮುಸಲಮ್ಮನ ಚಿತ್ರ ಪ್ರಾಚೀನ ರೀತಿಯ ಪ್ರತಿಮೆಗಳಿಂದ ಕೂಡಿದ್ದಗೂ ಸೂಕ್ತವಾಗಿ, ಹೃದಯ ಸ್ಪರ್ಶಿಯಾಗಿ ಮೂಡಿ ಬಂದಿದೆ,

...ಊರು ಹಾರಿದ್ರಪುಜೀರಸಾಂಧ್ಯ ರುಚಿಗಾನೊಪ್ಪಾರ...
ಸರಸೀಮುಹಾಬ್ಧಿಕೈ ಚನಿಯೆ ವಿಸ್ಫಾರೀ ಭವನ್ಮೂರ್ತಿಯೈ.
ಅವಳು ಉಟ್ಟ ಹಳದಿ ಬಣ್ಣದಸೀರೆ ಸಂಧ್ಯಾ ಕಾಂತಿಯಿಂದ ಕೂಡಿತ್ತು
ಸಂತೋಷದಿಂದ ಕೂಡಿದ ಅವಳ ಮುಖ ಕೆಂಗಳೆಯ ಸೂರ್ಯನಂತಿತ್ತು

ವ್ಯಥೆಗೊಂಡ ಜನ ಹಕ್ಕಿವಿಂಡಿನಂತೆ ರೋದಿಸಲು
ಮಹಾನ್ ಮೂರ್ತಿಯಾಗಿ ಸಮುದ್ರದಂತೆ ಸರಸ್ಸಿನ ಕಡೆಗೆ ನಡೆದಳು.

ಕೆರೆಯ ಕಡೆಗೆ ಅವಳು ಹೋದದ್ದನ್ನು ಕವಿ ಹೀಗೆ ವರ್ಣಿಸುತ್ತಾರೆ :

"ಕುದುರೆಸವಾರ ತನ್ನ ಕುದುರೆ ಮೇಲೆ ಹೋಗುತ್ತಿರುವಾಗ ತರುಣ ಹೆಣ್ಣು ಕುದುರೆ ಹರಿಯುವ ನದಿಯನ್ನು ಕಂಡು ಕುಣಿಯುವಂತೆ ಅವಳ ನಡಿಗೆ ಕೋಮಲವಾಗಿ ರಮ್ಯವಾಗಿತ್ತು."

ಇದು ತೆಲುಗು ಕಾವ್ಯದಲ್ಲಿ ಸಾಧಾರಣ ಉಪಮೆಯಲ್ಲ, ಕೆಲವು ಓದುಗರ ಕಣ್ಣಿಗೆ ಹಿತಕರವಾಗಿಯೂ ಕಾಣುವುದಿಲ್ಲ. ಲೇಖಕರು ಇದನ್ನು ಹೋಮರನ 'ಇಲಿಯಡ್' ನಿಂದ ಸ್ವೀಕರಿಸಿದ್ದಾರೆ.

ನಾಯಿಕೆ ನೀರಿನಲ್ಲಿ ಮುಳುಗಿ ಹೋಗುವ ಸಂದರ್ಭವನ್ನು ವರ್ಣಿಸಲು ಲೇಖಕರು ಪ್ರಾಚೀನ ಕಾವ್ಯಾಭ್ಯಾಸವನ್ನೂ, ಭಾವನಾಶಕ್ತಿಯನ್ನೂ ಉಪಯೋಗಿಸಿಕೊಂಡಿದ್ದಾರೆ. ಇದೊಂದು ಪರಿಣಾಮಕಾರಿಯಾದ ಪಾಂಡಿತ್ಯ ಪ್ರದರ್ಶನವಾಗಿದೆ.

ಕನ್ನೆರವಾರಿನ ಖರಕರೋದಯ ಕಾಲ
ಮಲ್ಲನಮ್ರಿಂಗು ಜಾಬಿಲ್ಲಿಯನಗ;

ಜ್ವಲದಗ್ನಿ ಶಿಖಲಪೈನೆಲನವ್ವತೋಚೋವು
ಧಾತ್ರೀ ಮಹಾದೇವಿ ತನಯ ಯನಗ ;

ಜೆಂದಾಮರಲಬಾರು ಸುಂದರ ಮಗುಲೀಲ
ನಲ್ಲನಲ್ಲನ ಜೊಚ್ಚು ನಂಜಯನಗ ;

ಗಾಲಮಹಾಸ್ವರ್ಣಕಾರ ಕುಂಡಾಗ್ನಿಲೋ
ಗರಗಿಂಚು ಬಂಗಾರು ಕಣಿಕಯನಗ ;

ಕೆಂಗಣ್ಣಿನ ಸೂರ್ಯೋದಯ ಕಾಲಸುಂಗುತ್ತಿರುವ ಚಂದ್ರನಂತೆ ;
ಉರಿಯುವ ಅಗ್ನಿಜ್ವಾಲೆಗಳಲ್ಲಿ ಪ್ರವೇಶಿಸುತ್ತಿರುವ ಭೂಮಿಪುತ್ರಿ (ಜಾನಕಿ)ಯಂತೆ,
ಕೆಂದಾವರೆಯ ಸಾಲನ್ನು ಪ್ರವೇಶಿಸುತ್ತಿರುವ ಸುಂದರ ಗಮನದ ಹಂಸದಂತೆ
ಕಾಲವೆಂಬ ಸ್ವರ್ಣಕಾರನು ಅಗ್ನಿಯಲ್ಲಿ ಕರಗಿಸುತ್ತಿರುವ ಚಿನ್ನದ ಸಲಾಕೆಯಂತೆ
...ಅವಳು ಮೆಲ್ಲನೆ ನೀರಿನೊಳಕ್ಕೆ ಜಾರಿದಳು.

ಈ ಪದ್ಯವನ್ನು ಪ್ರಯೋಗವೆಂದು ಹಿಂದಿನ ಪೀಳಿಗೆಯ ಕೆಲವರಂತೆ ಹೊಗಳ ಬೇಕಾದರೆ, ಇದು ಪ್ರಾಚೀನ ಸಂಪ್ರದಾಯದ ಚೌಕಟ್ಟಿನಲ್ಲೇ ಹೊರಬಂದ ಸೀಮಿತ ಪ್ರಯೋಗವೆನ್ನಬೇಕಾಗುತ್ತದೆ. ಕಾವ್ಯದೇವ ದೇವತೆಯರ, ರಾಜರಾಣಿಯರ ಸಾಧನೆ ಗಳನ್ನೇ ಅಲ್ಲದೆ ಸಾಮಾನ್ಯ ಸ್ತ್ರೀ ಪುರುಷರ ಸಾಧನೆಗಳನ್ನೂ ಪ್ರದರ್ಶಿಸಬೇಕೆನ್ನುವವ ರಲ್ಲಿ ಈ ಲೇಖಕರು ಮೊದಲಿಗರೇನಲ್ಲ. ಆದರೆ ಇದು ಮತ್ತೆ ಮತ್ತೆ ಹೇಳಬೇಕಾದ ವಿಷಯ. ಇದನ್ನು ಒಬ್ಬ ಯುವಕ ಅದರಲ್ಲೂ ಆತ್ಮ ವಿಶ್ವಾಸದಿಂದ ಪರಿಣತಕವಿಯಂತೆ ಹೇಳಿದ್ದು ಶ್ಲಾಘ್ಯವಾಗಿದೆ. ಇವರ ರಚನೆ ಭರವಸೆಯನ್ನು ಮೂಡಿಸುವಂತಿದೆ. ಇದನ್ನು

ನಾವು ಪ್ರಾಚೀನ ಮತ್ತು ಆಧುನಿಕಕಾಲಗಳ ನಡುವೆ ಸಂಕ್ರಮಣ ಕಾಲವನ್ನು ಪ್ರತಿನಿಧಿಸುವ ಕಾವ್ಯ ಎಂದು ಹೇಳಬಹುದು. ಇದು ಖಂಡಿತವಾಗಿಯೂ ಪ್ರಾಚೀನ ಕಾವ್ಯದ ಪ್ರಭಾವದಿಂದ ಹೊರಬಂದದ್ದು; ಆಧುನಿಕತೆಯ ಧ್ವನಿ ಸ್ವಲ್ಪಮಟ್ಟಿಗೆ ಕಾಣುತ್ತದೆ. ಆಧುನಿಕ ತೆಲುಗು ಕಾವ್ಯೋದಯವನ್ನು ಮೂಡಿಸಿದ ಕ್ರಾಂತಿಯನ್ನು ಬೇರೆಡೆ ಹುಡುಕಬೇಕಷ್ಟೆ.

## ಲಘುಕಾವ್ಯಗಳು

ಬೇರೆ ಬೇರೆ ಸಂದರ್ಭಗಳಲ್ಲಿ ರಾಮಲಿಂಗಾರೆಡ್ಡಿ ಬರೆದ ಲಘುಕೃತಿಗಳಲ್ಲಿ ಕೆಲವು ಮಾತ್ರ ಅಚ್ಚಿನ ರೂಪದಲ್ಲಿ ಉಳಿದಿವೆ. ಅವು 1. ಅರ್ಥಶಾಸ್ತ್ರ (1911)ಕ್ಕೆ ಬರೆದ ಅರ್ಪಣೆಯ ಪದ್ಯಗಳು 2. 'ಕವಿತ್ವ ತತ್ತ್ವ ವಿಚಾರಮು' (1913) ವಿಗೆ ಬರೆದ ಪೀಠಿಕಾ ಪದ್ಯಗಳು 3. ತಮ್ಮ ದತ್ತಪುತ್ರಿಯನ್ನು ಮದುವೆಯ ಸಂದರ್ಭದಲ್ಲಿ ಬೀಳ್ಕೊಡುವಾಗ ಬರೆದ 'ಅಂಪಕಾಲು' (1919) 4. ತೆಲುಗು ಮಹಾಭಾರತವನ್ನು ಹೊಗಳುತ್ತಾ, ಅದಕ್ಕೆ ವಿಮರ್ಶಾತ್ಮಕ ಟೀಕು ಬರೆಯುವುದಾಗಿ ಹೇಳಿಕೊಂಡು ಬರೆದ 'ಭಾರತ ಪ್ರಶಂಸ' (1919) ಇವೆಲ್ಲಾ ಸೇರಿ ಹತ್ತು ಪುಟಗಳಿಂತ ಕಡಮೆ ಇವೆ.

ರೆಡ್ಡಿಯವರು ಮೈಸೂರಿನಲ್ಲಿ ಬರೆದ ಅರ್ಥಶಾಸ್ತ್ರಕ್ಕೆ ಹತ್ತು ಅರ್ಪಣೆಯ ಪದ್ಯಗಳನ್ನು ಬರೆದಿದ್ದಾರೆ. ಅವು ಮೊದಲನೆಯ ಗುಂಪಿಗೆ ಸೇರುತ್ತವೆ. ಈ ಹತ್ತು ಪದ್ಯಗಳೂ ಸಾಂಪ್ರದಾಯಿಕ ಛಂದಸ್ಸುಗಳಾದ ಕಂದ, ಗೀತ, ಶಾರ್ದೂಲ, ಸೀಸ, ಮತ್ತು ಚಂಪಕ ಮಾಲೆಗಳಲ್ಲಿವೆ. ಈ ಪದ್ಯಗಳು ಸುಲಭವಾಗಿ ಪ್ರವಹಿಸುತ್ತವೆ. ಗ್ರಾಂಥಿಕ ಶೈಲಿಯಲ್ಲಿದ್ದರೂ ಭಾಷೆ ಸರಳವಾಗಿದೆ. ವೈಯಕ್ತಿಕವಾಗಿ ಈ ಪದ್ಯಗಳಿಗೆ ಪ್ರಾಧಾನ್ಯವಿದೆ. ಏಕೆಂದರೆ ಇವು ಅಜ್ಞಾತರಾದ ಪ್ರೀತಿಯ ವ್ಯಕ್ತಿಯ ನೆನಪಿಗೆ ಬರೆದಂಥವು. ಈ ಪದ್ಯಗಳು ಪ್ರಾಚೀನ ರೀತಿಯಲ್ಲಿದ್ದರೂ, ಕಾಲ್ಪನಿಕ ವಸ್ತುವನ್ನೊಳಗೊಂಡ ಕವಿಯ ಶಕ್ತಭಾವಗಳ ಆ ಪ್ರಯತ್ನ ಅಭಿವ್ಯಕ್ತಿಗಳನ್ನು ಪ್ರತಿನಿಧಿಸುತ್ತವೆ. ಕೊನೆಯ ಪದ್ಯದಲ್ಲಿ ತನ್ನ ಪ್ರೇಮಿ ಸೇರಿದ ಪಂಚಭೂತಗಳಿಂದ ಕರೆಯನ್ನು ಕೇಳುತ್ತಾರೆ, ಭಾವುಕತೆಯ ಈ ಅರ್ಪಣೆ, ರೆಡ್ಡಿಯವರು ಶಾಶ್ವತವಾಗಿ ಮುಚ್ಚಿಟ್ಟ ವೈಯಕ್ತಿಕ ಜೀವನದ ಒಂದು ಅಧ್ಯಾಯದ ಮಸುಕು ಮಸುಕಾದ ತುಣುಕುಗಳನ್ನು ತೋರಿಸಿಕೊಡುತ್ತದೆ. ರೆಡ್ಡಿಯವರು ಮದುವೆಯಾಗಲೇ ಇಲ್ಲ.

ಎರಡನೆಯ ಗುಂಪಿಗೆ ಸೇರಿದ ಪದ್ಯಗಳು ಬೇರೆ ತರಹವಾದರೂ ಭಾವುಕತೆಯಿಂದ ಕೂಡಿವೆ. ಅವರು 1913 ರಲ್ಲಿ ಮೈಸೂರಿನಲ್ಲೇ ಬರೆದ 'ಕವಿತತ್ತ್ವವಿಚಾರಮು'ಗೆ ಪೀಠಿಕಾ ಪದ್ಯಗಳು ಆರು ಇವೆ. ಅವು ಸಾಂಪ್ರದಾಯಿಕ ರೀತಿಯಲ್ಲಿ ಪುತ್ರಧರ್ಮದ ಆವಿಷ್ಕಾರದ ರೂಪದಲ್ಲಿವೆ. ತಂದೆ ಶ್ರೀ ಸುಬ್ರಹ್ಮಣ್ಯ ರೆಡ್ಡಿಯವರನ್ನು ತಮ್ಮ ಕೃತಿಯಲ್ಲಿ ನೆನೆಯುತ್ತಾ ಅವರ ಸಮಗ್ರ ವ್ಯಕ್ತಿತ್ವ ಹಾಗೂ ಪಾಂಡಿತ್ಯಗಳನ್ನು ರೆಡ್ಡಿಯವರು ಸ್ಮರಿಸಿದ್ದಾರೆ.

'ಅಂಪಕಾಲು' (ವಧುವಿಗೆ ಬೀಳ್ಕೊಡುಗೆ)1919 ರಲ್ಲಿ ಬೆಂಗಳೂರಿನಲ್ಲಿ ಬರೆದ ಎಂಟು ಪದ್ಯಗಳ ಮಾಲೆ. ಇಲ್ಲೂ ಕೋಮಲ ಭಾವನೆಗಳು ಪ್ರಧಾನವಾಗಿವೆ. ಎಲಿಯ (ಚಾರ್ಲ್ಸ್‌ಲ್ಯಾಂಬ್) ರನ್ನು ಏಕೈಕ ಸಂತಾನದಿಂದ ಪಾರಾಗಿಸಲು ಕನಸಿನ ಮಕ್ಕಳು ಸಹಾಯ ಮಾಡಿದರು. ರೆಡ್ಡಿಯವರ ಪಿತೃ ಹೃದಯದ ಶೂನ್ಯವನ್ನು ತುಂಬಲು ಅವರ ಸೋದರನ ಮಕ್ಕಳು ನೆರವಾದರು. ಇವರಲ್ಲಿ ಸಂಜಂಟಿಕುಮಾರಿಯನ್ನು, ತಂದೆಗಿಂತ ಹೆಚ್ಚಾಗಿ ರೆಡ್ಡಿಯವರು ಪ್ರೀತಿಸಿದರು. ಈ ಪದ್ಯಗಳಲ್ಲಿ ವಿಯೋಗದ ವೇದನೆಯನ್ನು, ಕಣ್ಣೀರಿನ ಧಾರೆಯನ್ನು ಯಾರಾದರೂ ನೋಡಬಹುದು. ಅವರು ತಮ್ಮ ಸಂತೋಷಕ್ಕೆ ಆ ಮಗಳೇ ಕಾರಣವೆನ್ನುತ್ತಾರೆ. ಅವರ ಭಾವನೆಗಳು ವಾಸ್ತವ ಚಿತ್ರವಾಗಿ ಮೂಡಿ ಬಂದಿವೆ. ಅವರ ಮಾತುಗಳು ತುಂಬ ಸರಳವಾಗಿ, ದೈನಿಕ ಜೀವನದ ಭಾಷೆಯನ್ನು ವ್ಯಕ್ತೀಕರಿಸುತ್ತವೆ.

ನಾಲ್ಕನೆಯ ಪದ್ಯಗಳ ಮಾಲೆಯಲ್ಲಿ ಆರು ಪದ್ಯಗಳಿವೆ. ಮಹಾಭಾರತವನ್ನು ಪ್ರಶಂಸಿಸುವ ಈ ಪದ್ಯಗಳನ್ನು ಮೂರನೆಯದಾದ ಮೇಲೆ ಬರೆದಿದ್ದಾರೆ. ಪ್ರೀತಿಯ ಮಗಳನ್ನು ಅಗಲಿದ ಕವಿ ಆ ಶೂನ್ಯವನ್ನು ಪ್ರೀತಿಯ ಪುಸ್ತಕದಿಂದ ತುಂಬಲು ಯತ್ನಿಸಿದ್ದಾರೆ. ಪ್ರಾಚೀನ ಕಾವ್ಯಗಳಲ್ಲಿ ಅವರ ವಿಶೇಷಾಸಕ್ತಿಗೆ ಪಾತ್ರವಾದುದು ತೆಲುಗು ಮಹಾಭಾರತ. ವಸ್ತು, ಶೈಲಿ, ಯೋಚನೆಯ ಆಳ, ಪಾತ್ರ ಚಿತ್ರಣಗಳಲ್ಲಿ ಅದಕ್ಕೆ ಸಮನಾದುದು ಈ ಭೂಮಿಯ ಮೇಲಿಲ್ಲ ಎನ್ನುವಷ್ಟು ದೃಢವಾದ ಅಭಿಪ್ರಾಯ ಅವರಿಗಿತ್ತು. ತೆಲುಗಿನಲ್ಲಿ ಆ ಕಾವ್ಯಕ್ಕೆ ಹೊಸ ಟೀಕೊಂದನ್ನು ಬರೆಯಬೇಕೆಂಬ ಆಸೆ ಅವರಿಗಿತ್ತು: ಆದರೆ ಆ ಆಸೆ, ಆಸೆಯಾಗಿಯೆ ಉಳಿಯಿತು.

**ನವಯಾಮಿನಿ (1936)**

'ಮುಸಲಮ್ಮ ಮರಣಮು' ಆದ ಮೇಲೆ ನೀಳವಾದುದು ಮತ್ತು ಮಹತ್ವಾಕಾಂಕ್ಷೆಯದು ಇದೇ. ಇದರಲ್ಲಿ ಸುಮಾರು 30 ಪದ್ಯಗಳು, ಮೂರು ಪುಟಗಳಿಗೂ ಹೆಚ್ಚು ಗದ್ಯದ ಮುನ್ನುಡಿ ಇವೆ. ಇದನ್ನು ತಮ್ಮ ಜೀವನದ ಪರಿಪಕ್ವ ಸ್ಥಿತಿಯಲ್ಲಿ ಬರೆದಿದ್ದಾರೆ. ಆಗ ಅವರಿಗೆ ಅರವತ್ತುವರ್ಷ ಸಮೀಪಿಸುತ್ತಿತ್ತು ; ಜ್ಞಾನದ ಮತ್ತು ಅನುಭವದ ಪರಿಪೂರ್ಣವಾದ ಹಿನ್ನೆಲೆ ಇತ್ತು. ಕವಿ ಮತ್ತು ವಿಮರ್ಶಕರೆಂಬ ಖ್ಯಾತಿ ಅವರಿಗೆ ಬಂದಿತ್ತು.

ಈ ಕೃತಿಗೆ 'ಮತ್ತೆ ಹೇಳಿದ ಬಿಲ್ಹಣದಕತೆ' ಎಂದು ಹೆಸರಿಟ್ಟರೆ ತಪ್ಪಾಗಲಾರದು. ರೆಡ್ಡಿಯವರು ತಮ್ಮ ಮುನ್ನುಡಿಯಲ್ಲಿ ಸ್ವಲ್ಪ ದೀರ್ಘವಾಗಿಯೇ ವಿವರಿಸಿದ ಹಾಗೆ, ಸಂಸ್ಕೃತದ ಮೂಲಕತೆ 'ಬಿಲ್ಹಣೀಯಮ್'ನಲ್ಲಿ ತಪ್ಪು ಕಂಡುಹಿಡಿಯಬಹುದಾದ ಅನೇಕ ಸಂದರ್ಭಗಳಿವೆ. ಅನೇಕ ಭಾರತೀಯ ಓದುಗರಿಗೆ ತಿಳಿದ ಹಾಗೆ ಈ ಕತೆಯಲ್ಲಿ ಮುಖ್ಯವಾಗಿರುವುದು ಬಿಲ್ಹಣ ಎಂಬ ಸುಂದರ, ತರುಣಗುರುವಿಗೂ, ಅವನ ಶಿಷ್ಯೆಯಾದ ಚೆಲುವೆ, ಕಾಶ್ಮೀರ ಯುವರಾಣಿ ಯಾಮಿನೀ ಪೂರ್ಣತಿಲಕೆಗೂ ನಡೆದ ರಹಸ್ಯ ಪ್ರಣಯ.

ದುರ್ನೀತಿಯ ಪ್ರಭಾವವನ್ನು ಬೀರುವುದರೊಂದಿಗೆ, ರೆಡ್ಡಿಯವರ ಪ್ರಕಾರ ಈ ಕತೆಯಲ್ಲಿ ವಿಶ್ವಾಸವನ್ನು ಮೂಡಿಸುವ ಅಂಶಗಳೇ ಪ್ರಶ್ನಾರ್ಹವಾಗಿವೆ.

ಆಪಾದಕರ ಪರವಾಗಿ ವಾದಿಸುವ ವಕೀಲರಂತೆ ಪ್ರಶ್ನಿಸುವ ರೆಡ್ಡಿಯವರು, ಜವಾಬ್ದಾರಿಯುಳ್ಳ ಅರಸ ತನ್ನ ತರುಣ ಪುತ್ರಿಯನ್ನು ನವಯುವಕನಾದ ಗುರುವಿನ ಬಳಿ ಬಿಟ್ಟ ಬುದ್ಧಿವಂತಿಕೆ ಎಂತಹದೆನ್ನುತ್ತಾರೆ. ರಾಜಾಂತಃಪುರದ ಸ್ತ್ರೀಯರನ್ನು ಕಾವಲಿಲ್ಲದೆ, ಅನುಭವದ ಮತ್ತು ಜಾಗರೂಕತೆಯ ಹೆಂಗಸರಂತೆ ಬಿಡುವುದು ಅಸಾಧ್ಯ. ಈ ಸಂದರ್ಭದಲ್ಲಿ ಮಾತ್ರ ಅದಕ್ಕೆ ಅಪವಾದ ಏಕಿರಬೇಕು? ಇದು ಹೀಗಿರಲಿ. ಅಷ್ಟು ತರುಣ ವಯಸ್ಕನಾದವನು ಗುರುವಾಗುವಷ್ಟು ವಿದ್ವತ್ತನ್ನು ಹೇಗೆ ಗಳಿಸಿದ ? ಅಥವಾ ಅವನು ಸಹಜ ಪಂಡಿತನೆಂದು, ಪ್ರತಿಭಾವಂತನೆಂದು ನಾವು ಭಾವಿಸಬೇಕೇ ? ಅವನು ನಿಜವಾದ ವಿದ್ವಾಂಸನಾಗಿದ್ದರೆ, ಇಂದ್ರಿಯವಿಷಯವಾದ ಪ್ರೇಮಾಕರ್ಷಣೆಗೆ ಅಷ್ಟು ಸುಲಭವಾಗಿ ಬಲಿಯಾದನೇ ? ಯುವರಾಣಿಯ ವಿಷಯವೇನು ? ಉನ್ನತ ವಂಶಜಳಾದ ಆ ಸ್ತ್ರೀ ತನ್ನ ಕುಟುಂಬ ಸಂಪ್ರದಾಯದ ಭಾಗವಾದ ಸೌಶೀಲ್ಯ ಸಂಯಮಗಳಿಂದ ಹಿಂಜರಿಯುವುದಿಲ್ಲವೇ ?

ಈ ಕೃತಿ ಗುಣರಹಿತವಾಗಿದೆಯೆಂದು ತಿರಸ್ಕರಿಸಿ, ಕಲಾವಿಹೀನವೂ ಅನೀತಿಬೋಧಕವೂ ಆದ ಕತೆಯನ್ನು ಮತ್ತೆ ಹೇಳಲು ಈ ತೆಲುಗು ಕವಿ ಪ್ರಯತ್ನಿಸಿದ್ದಾರೆ. ಗುರುಶಿಷ್ಯೆಯರ ಪ್ರೇಮಸಂಬಂಧದ ಸಂಭಾವ್ಯತೆಯ ಸಂದೇಹವನ್ನು ವ್ಯಕ್ತಪಡಿಸಿದರೂ ಅದರ ಸಾಧ್ಯತೆಯನ್ನು ರೆಡ್ಡಿಯವರು ಪ್ರಶ್ನಿಸಿಲ್ಲ.

ಸಂಪೂರ್ಣ ಸ್ಪಷ್ಟತೆಯ ವಿಷಯದಲ್ಲಿ ಷಾ ಅವರನ್ನು ನೆನಪಿಗೆ ತರುವ ರೀತಿಯಲ್ಲಿ, ರೆಡ್ಡಿಯವರು ತಮ್ಮ ಭಾವನೆಯ ಬಿಲ್ಹಣ ಮತ್ತು ಯಾಮಿನಿಯರನ್ನು ವರ್ಣಿಸುತ್ತಾರೆ. ಅವರ ಬಿಲ್ಹಣನು ತಾರುಣ್ಯವನ್ನು ದಾಟಿದ ವಿದ್ವಾಂಸ, ಆದರೆ ಮುಪ್ಪಿನಲ್ಲಿ ಕಾಲಿಟ್ಟವನಲ್ಲ. ಯುಕ್ತಾಯುಕ್ತ ವಿಚಕ್ಷಣೆಯುಳ್ಳವನು. ಯಾಮಿನಿ-ತರುಣಿ. ಶೀಲಸಂಪನ್ನೆ, ಗುಣವತಿ, ಬಲ ಮತ್ತು ಸ್ಥಿರತೆ, ಸೌಕುಮಾರ್ಯ ಮತ್ತು ರಮ್ಯತೆಗಳು ಬೆರೆತ ಚಿತ್ತ ಅವಳದು. ಮೃದುಹೃದಯಿ, ಮಂಜುಭಾಷಿಣಿ, ದೃಢಚಿತ್ತೆ ಅವಳು.

ಈ ಕೃತಿಯಲ್ಲಿ ಯಾಮಿನಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಮುನ್ನ ಬಿಲ್ಹಣ ತುಂಬ ಹೆಣಗಾಡುತ್ತಾನೆ. ತಾನು ಏನು ಮಾಡುತ್ತಿದ್ದೇನೆಂಬುದು ಅವನಿಗೆ ಗೊತ್ತು ; ಆದರೆ ತನ್ನ ಪ್ರಯತ್ನವನ್ನು ಬಿಟ್ಟುಬಿಡುವುದು ಅಸಾಧ್ಯ ಎನ್ನುವಷ್ಟು ಪ್ರೀತಿ ಅವನಿಗಿತ್ತು. ಅವನಿಗೆ ಉತ್ತರಿಸುವ ಮುಂಚೆ ಯಾಮಿನಿಯಲ್ಲೂ ಬಹಳ ಘರ್ಷಣೆ ಉಂಟಾಯಿತು. ಕಣ್ಣೀರು ತುಂಬಿದ ಅವಳ ಮಿಂಚುವ ಕಣ್ಣುಗಳನ್ನು ಸೂರ್ಯ ಹಾಗೂ ಮಳೆಯ ಸಮ್ಮಿಶ್ರವೆಂದಿದ್ದಾರೆ ಕವಿ. ಅವಳು ಅವನನ್ನು ನಿಂದಿಸುವುದಿಲ್ಲ ; ಅವನ ಗುಣಶೀಲಗಳನ್ನು ಜ್ಞಾಪಿಸುತ್ತಾಳೆ. ಆಕೆ ಅವನನ್ನು ತಿರಸ್ಕರಿಸುವುದಿಲ್ಲ ; ತಿದ್ದುತ್ತಾಳೆ. ಇನ್ನೊಂದು ರೀತಿಯಲ್ಲಿ ಅವನು ತನ್ನನ್ನೂ ತಾನು ಸುಧಾರಿಸಿಕೊಳ್ಳಲು ನೆರವಾಗುತ್ತಾಳೆ. ಅವಳ ಮಾತುಗಳ ಸಾರಾಂಶವನ್ನು ಹೀಗೆ ಹೇಳಬಹುದು.

"ನಿಮ್ಮ ಪ್ರೇಮ ಜಲಿಸುವ ಕಲ್ಪನೆಯಂಥದು, ಎಷ್ಟು ದೊಡ್ಡದು ! ಇದು ಸತ್ಯ ವಲ್ಲ ಎಂದು ನನಗೆ ಗೊತ್ತು. ನಾನು ನಿಮ್ಮ ಪ್ರತಿಬಿಂಬ, ಪವಿತ್ರವಾದವಳು ; ಕೋಪಿಸ ಬೇಡಿ ; ನಿಮ್ಮ ನೆರಳಿನಲ್ಲಿ ಬೆಳೆದ ಬಳ್ಳಿ ಸರಿಯಾದ ಮಾರ್ಗದಲ್ಲಿ ಬೆಳೆಯಲಿ."

ಇದು ತಕ್ಷಣದಲ್ಲೇ ಬಿಲ್ಹಣದ ಮೇಲೆ ಪ್ರಭಾವ ಬೀರಿತು. ತಾನಿಳಿದ ತಪ್ಪು ದಾರಿಯನ್ನು ಅರಿತುಕೊಂಡು ತನ್ನ ತಪ್ಪನ್ನು ತಿದ್ದಿಕೊಂಡು, ಸ್ನೇಹಿತೆಯಾಗಿ, ತತ್ವಜ್ಞೆ ಯಾಗಿ, ಮಾರ್ಗದರ್ಶಿಯಾಗಿ ಸಹಾಯ ಮಾಡಿದುದಕ್ಕೆ ಕೃತಜ್ಞತೆ ತೋರಿಸುತ್ತಾನೆ.

ಈ ಮುಕ್ತಾಯ ನೀತಿಯ ದೃಷ್ಟಿಯಿಂದ ತೃಪ್ತಿಕರವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಮಾನವ ಸ್ವಭಾವದ ಏರುಪೇರುಗಳನ್ನು ಕವಿ ಸರಿಪಡಿಸಿದ್ದಾರೆನ್ನ ಬಹುದು. ಸುಪ್ತಪ್ರಜ್ಞೆಯ ಹಾಗೂ ಪ್ರಜ್ಞಾಹೀನಸ್ಥಿತಿಯಿಂದ ಉದ್ಭವಿಸುವ ಸ್ತ್ರೀ ಪುರುಷ ಸಂಬಂಧಗಳ ವಕ್ರತೆಗಳನ್ನು ಸರಿಪಡಿಸಿದ್ದಾರೆ. ಎರಡೂ ಕಡೆ ಅತೀವ ವೇದನೆ ಮತ್ತು ನಿರುತ್ಸಾಹಗಳನ್ನು ಅನುಭವಿಸದೆ ಪಾತ್ರ ಪರಿಷ್ಕರಣ ಸಾಧ್ಯವೇ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಕತೆ ಔಚಿತ್ಯವನ್ನು ಪಡೆದುಕೊಂಡು, ತೀವ್ರ ಘರ್ಷಣೆ ಯ ನಾಟಕೀಯತೆಯನ್ನು ಕಳೆದುಕೊಂಡಂತೆ ಕಾಣುತ್ತದೆ. ಮೂಲಭೂತವಾದ ಸ್ಪಂದನ ಶೀಲ ಚಿತ್ತವಿಲ್ಲದ ಮೇಲೆ ಮೂಲ ಬಿಲ್ಹಣನನ್ನು ಅವರು ಉತ್ತಮಪಡಿಸಿದ್ದಾರೆನ್ನು ವುದು ಸಂದೇಹಾಸ್ಪದವಾಗಿಯೇ ಉಳಿಯುತ್ತದೆ. ಇದರ ಭಾಷೆ ಸರಳ, ಪದ್ಯ ಸರಾಗ ವಾಗಿ ಓಡುತ್ತದೆ. ಆದರೆ ಕಾವ್ಯ ಕಳೆಗುಂದಿದೆ, ಏಕೆಂದರೆ ಅವರ ಮೊದಲ ಕೃತಿಯ ಹೊಳಪು ಇದರಲ್ಲಿಲ್ಲ. ಯುವಕನ ಶೋಧನಶೀಲ ಚಿತ್ತವೃತ್ತಿಯ ಸ್ಥಳದಲ್ಲಿ ಮುದುಕರ ಉಪದೇಶಾತ್ಮಕತೆ ಬಂದು ಸೇರಿದೆ.

1899 ರಿಂದ 1936 ರ ಅವಧಿಯಲ್ಲಿ ಕವಿಯಾಗಿ ರಾಮಲಿಂಗಾರೆಡ್ಡಿ ಹೆಚ್ಚಾಗಿ ಬೆಳೆದಂತೆ ಕಾಣುವುದಿಲ್ಲ. ಅವರ ಶೈಲಿ ಸ್ವಲ್ಪಮಟ್ಟಿಗೆ ಪರಿಪಕ್ವವಾಯಿತು. ಆದರೆ ಪ್ರಾಚೀನ ಕಾವ್ಯರೀತಿ, ನೀತಿಬೋಧ ಇದ್ದೇ ಇದೆ. ಯುವಕರಾಗಿ ರೆಡ್ಡಿಯವರು ಕಲ್ಪ ನೆಯ ಶಿಖರವನ್ನೇರಲಿಲ್ಲ ; ಪಕ್ವವಾದ ವಯಸ್ಸಿನಲ್ಲಿ ಪರಿಪೂರ್ಣಜ್ಞಾನದ ಆಳವನ್ನೂ ಮುಟ್ಟಲಿಲ್ಲ. ಕೊನೆಗೂ ಒಬ್ಬ ಕುಶಲಕರ್ಮಿಯಾಗಿಯೇ ಉಳಿದರು.

# 8 ವಿಮರ್ಶಕರು

ಒಬ್ಬ ಸಿನಿಕನ ವ್ಯಾಖ್ಯೆಯಂತೆ ಸೃಜನ ಶೀಲ ಸಾಹಿತಿಯಾಗದೆ ಹೋದವನು ವಿಮರ್ಶಕನಾಗುತ್ತಾನೆ. ಆದರೆ ಇದು ರಾಮಲಿಂಗಾರೆಡ್ಡಿಗೆ ಅನ್ವಯಿಸುವುದಿಲ್ಲ. ಸಾಮಾನ್ಯವಾಗಿ ಬೇರೆ ಬೇರೆಯಾಗಿರುವ ಸೃಜನ ಶೀಲ ಮತ್ತು ವಿಮರ್ಶಕ ಶಕ್ತಿಗಳು ಅವರಲ್ಲಿ ಒಂದುಗೂಡಿವೆ. ರೆಡ್ಡಿಯವರು ಅನೇಕ ಚರ್ಚೆಗಳಲ್ಲಿ ತೋರಿಸುವ ವಿಶಿಷ್ಟ ರೀತಿಯ ವೈಚಾರಿಕ ದೃಷ್ಟಿಕೋನ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ವಿಮರ್ಶಕರಾಗಿ ಅವರ ಪಾತ್ರಕ್ಕೆ ಸೂಕ್ತವಾಗಿವೆ.

ಅವರ 'ಮುಸಲಮ್ಮಮರಣಮು' ಪ್ರಾಚೀನ ಮತ್ತು ಆಧುನಿಕ ತೆಲುಗು ಕಾವ್ಯದ ಸಂಕ್ರಮಣ ಕಾಲವನ್ನು ಸೂಚಿಸುವುದಾದರೆ, ಅದರ 'ಕವಿತ್ವತತ್ತ್ವ ವಿಚಾರಮು' ಆಧುನಿಕ ತೆಲುಗು ವಿಮರ್ಶೆಯಲ್ಲಿ ಒಂದು ಮೈಲಿಗಲ್ಲಾಗಿದೆ: ಇದನ್ನು ಇಂಗ್ಲೀಷಿನ ಸಾಹಿತ್ಯ ಮೀಮಾಂಸೆಯ ಮೇರುಕೃತಿಗಳಾದ ಸಿಡ್ನಿಯ 'ಅಪಾಲಜಿ ಫಾರ್ ಪೊಯೆಟ್ರಿ' ಷೆಲ್ಲಿಯ 'ಎ ಡಿಫೆನ್ಸ್ ಆಫ್ ಪೊಯೆಟ್ರಿ', ವರ್ಡ್ಸ್‌ವರ್ತನ 'ಪ್ರಿಫೇಸ್ ಟು ದಿ ಲಿರಿಕಲ್ ಬ್ಯಾಲೆಡ್ಸ್' ಮತ್ತು ಕಾಲ್ರಿಡ್ಜನ 'ಬಯೋಗ್ರಾಫಿಯ ಲಿಟೆರೇರಿಯ'ಗಳಿಗೆ ಹೋಲಿಸಬಹುದು. ಕೆಲವು ವಿದ್ವಾಂಸರು ಈ ಕೃತಿಯ ಮೇಲೆ ಅಲೆಗ್ಸಾಂಡರ್ ಪೋಪನ 'ಎಸ್ಸೆ ಆನ್ ಕ್ರಿಟಿಸಿಜಮ್' ಮತ್ತು ಮ್ಯಾಥ್ಯೂ ಆರ್ನಾಲ್ಡನ 'ಎಸ್ಸೆ ಇನ್ ಕ್ರಿಟಿಸಿಜಮ್'ಗಳ ಪ್ರಭಾವ ಸ್ವಲ್ಪ ಮಟ್ಟಿಗಿದೆ ಎನ್ನುವುದುಂಟು.

ಪುಸ್ತಕ ರೂಪದಲ್ಲಿ ಮೊದಲು 1914 ರಲ್ಲಿ ಹೊರ ಬಂದರೂ, ಒಂದೂವರೆ ದಶಕದ ಹಿಂದೆಯೇ ಇದನ್ನು ಬರೆದಿದ್ದರು. 1899 ರಲ್ಲಿ ರಾಮಲಿಂಗಾರೆಡ್ಡಿ ಮದರಾಸ್ ಕ್ರಿಶ್ಚಿಯನ್ ಕಾಲೇಜಿನ ಆಂಧ್ರ ಭಾಷಾಭಿರಂಜಿನಿ ಸಂಘದ ಆಶ್ರಯದಲ್ಲಿ ಓದಿದ ಉದ್ದನೆಯ ಪ್ರಬಂಧದಲ್ಲಿ ಪಿಂಗಳಿಸೂರನನ 'ಕಳಾಪೂರ್ಣೋದಯ'ದ ವಿಮರ್ಶಾತ್ಮಕ ಅಧ್ಯಯನ ನಡೆಸಿದರು. ಸ್ನೇಹಿತರು ಮತ್ತು ಸಹಪಾಠಿಗಳ ಪ್ರೋತ್ಸಾಹದಿಂದ ರಾಜಮಂಡ್ರಿಯೂ ಸೇರಿದಂತೆ ಈ ಪ್ರಬಂಧವನ್ನು ಎರಡು ಮೂರು ಸಲ ಮತ್ತೆ ಮತ್ತೆ ಓದಿದರು. ಮದರಾಸಿನ ಒಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಸಿದ್ಧ ವಿದ್ವಾಂಸರೂ ವ್ಯಾಖ್ಯಾನಕಾರರೂ ಆದ ವೇದಂ ವೆಂಕಟರಾಯಶಾಸ್ತ್ರಿ ಈ ಯುವ ವಿಮರ್ಶಕರ ಪ್ರಜ್ಞಾ ವಿಶೇಷವನ್ನು ಧೈರ್ಯವನ್ನು ಪ್ರಶಂಸಿಸಿದರು. ಆದರೆ ಅಲ್ಲಲ್ಲಿ ಕಂಡು ಬಂದ ಪೂರ್ಣ ಭರವಸೆ ಅತಿಶಯೋಕ್ತಿ ಹೇಳಿಕೆಗಳನ್ನು ತೋರಿಸಿಕೊಟ್ಟು ರೆಡ್ಡಿಯವರ ವಿವರಣೆಯಲ್ಲಿ ಕಂಡುಬಂದ ಕೆಲವು ನ್ಯೂನತೆಗಳ ಕಡೆಗೆ ಗಮನ ಸೆಳೆದರು. ರೆಡ್ಡಿಯವರ ರಚನೆ ಭರವಸೆ ಮೂಡಿಸುವಂಥದಾಗಿದ್ದು, ಪ್ರತಿಯೊಬ್ಬರೂ ಅವರ ಅಪೂರ್ವ ಸ್ವೋಪಜ್ಞತೆಯನ್ನು ಗುರುತಿಸಿದರು.

ಅಂತಹ ವಿದ್ವತ್ಪೂರ್ಣ ವಿಮರ್ಶೆಯ ಬೆಳಕಿನಲ್ಲಿ, ರೆಡ್ಡಿಯವರು ತಮ್ಮ ಕೃತಿಯಲ್ಲಿದ್ದ ಕೆಲವು ಅತಿರೇಕಗಳನ್ನು ಬದಲಾಯಿಸಿದರು. ಆದರೆ ಮೂಲಭೂತ

ವಾದ ಅವರ ನಿಲುವು ಬದಲಾಗಲಿಲ್ಲ. ಅವರ ಕೃತಿಯಹಸ್ತಪ್ರತಿಗೆ ಮಾತ್ರ ಆಸಕ್ತಿಕರವಾದ ಇತಿಹಾಸವಿದೆ. ಕೆಲವು ವರ್ಷಗಳಾದ ಮೇಲೆ ಸ್ನೇಹಪೂರ್ಣ ಪ್ರಕಾಶಕರೊಬ್ಬರು (ವಾವಿಳ್ಳ ಅಂಡ್ ಸನ್ಸ್, ಮದ್ರಾಸು) ಅದನ್ನು ಪುಸ್ತಕ ರೂಪದಲ್ಲಿ ತರುತ್ತೇವೆ ಎಂದಾಗ ರೆಡ್ಡಿಯವರಿಗೆ ಸಂತೋಷವಾಯಿತು. ಹಸ್ತ ಪ್ರತಿಯನ್ನು ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಗೊಳಿಸಬೇಕೆಂದು ಕೊಂಡರು. ಕೇಂಬ್ರಿಡ್ಜ್‌ನಲ್ಲಿದ್ದಾಗ, ಅನಂತರ ಭಾರತಕ್ಕೆ ಬಂದ ಮೇಲೂ ಇದು ಅವರ ಮನಸ್ಸಿನಲ್ಲಿಯೇ ಇತ್ತು. ಅವರು ಮೈಸೂರಿನಲ್ಲಿದ್ದಾಗ ಹಸ್ತಪ್ರತಿಯನ್ನು ಕೈಗೆತ್ತಿಕೊಳ್ಳಬೇಕೆಂದು ಕೊಂಡರು. ಆದರೆ ಅದು ಕಾಣಲಿಲ್ಲ. ಅದು ಕಳೆದು ಹೋಯಿತೆಂದೇ ಭಾವಿಸಲಾಯಿತು. ಈ ಕಾರಣದಿಂದ ಅವರು ಮತ್ತೆ ಕಾವ್ಯಗಳನ್ನು ಓದಿ ಹೊಸ ಪ್ರಬಂಧವನ್ನೇ ಬರೆಯ ಬೇಕಾಯಿತು. 1914ರಲ್ಲಿ ಇದು 'ಕವಿತ್ವ ತತ್ತ್ವ ವಿಚಾರಮು' ಎಂಬ ಹೆಸರಿನಲ್ಲಿ ಪ್ರಕಟ ವಾಯಿತು. ಆದರೆ ಇದು ಅವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ 'ಕಳಾಪೂರ್ಣೋದಯಮು'ವನ್ನು ಕುರಿತು ಬರೆದ ಪ್ರಬಂಧದ ತಿರುಳನ್ನು ಆಧಾರವಾಗಿಟ್ಟುಕೊಂಡು ಬರೆದದ್ದೇ ಆಗಿದೆ. ಆದರೆ ಇದರ ಧ್ಯೇಯ ವಿಸ್ತೃತವಾದುದು. ಗಾತ್ರ ದೊಡ್ಡದು. 1941 ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯದ ಮಾಲೆಯಲ್ಲಿ ಪುನರ್ಮುದ್ರಿತವಾದ ಈ ಮೊದಲ ಪ್ರಕಟಣೆಯ ರೂಪವನ್ನು ಪೂರ್ಣವಾಗಿ ಉಳಿಸಿಕೊಂಡಿದೆ.

ಪಿಂಗಳಿ ಸೂರನನ ಕೃತಿ ವಿಮರ್ಶೆಯಲ್ಲಿ ರೆಡ್ಡಿಯವರು 'ಕಳಾಪೂರ್ಣೋದಯಮು' (ರೆಡ್ಡಿಯವರ ಪ್ರೀತಿಗಳಿಸಿದ ಕಾವ್ಯ) ಜೊತೆಗೆ ಕವಿಯ ಅನಂತರದ ಕೃತಿಯಾದ 'ಪ್ರಭಾವತೀಪ್ರದ್ಯುಮ್ನಮು'ವನ್ನು ತೆಗೆದುಕೊಂಡಿದ್ದಾರೆ. ಕೃತಿ ವಿಮರ್ಶೆಗೆ ಮುನ್ನುಡಿಯಾಗಿ ರೆಡ್ಡಿ ಎರಡು ಪೀಠಿಕಾಧ್ಯಾಯಗಳನ್ನು ಬರೆದಿದ್ದಾರೆ. ಮೊದಲನೆಯದು ಕಾವ್ಯದಲ್ಲಿ ಕಲ್ಪನೆಯಸ್ಥಾನವನ್ನು ಕುರಿತದ್ದು, ಪಾತ್ರ ಚಿತ್ರಣ, ತಂತ್ರ ವಿಧಾನ, ಸಾಹಿತ್ಯಿಕ ಕಲಾಕೃತಿಯಲ್ಲಿ ಐಕ್ಯತೆಗಿರುವ ಸ್ಥಾನ, ಪ್ರಾಚೀನ ಕವಿತ್ರಯರ ವಿಧಾನಗಳಿಗೂ,ಪ್ರಬಂಧ ಕವಿಗಳ ವಿಧಾನಗಳಿಗೂ ಇರುವ ವ್ಯತ್ಯಾಸಗಳು—ಮುಂತಾದುವನ್ನು ಚರ್ಚಿಸಲಾಗಿದೆ. 'ಪ್ರಭಾವತೀ ಪ್ರದ್ಯುಮ್ನಮು' ವಿನಲ್ಲಿ ಅವನತಿಯ ಗುರುತುಗಳು ಹೇಗೆ ಕಾಣುತ್ತಿವೆ ಎಂಬುದನ್ನು ಕೊನೆಯ ಅಧ್ಯಾಯ ವಿವರಿಸುತ್ತದೆ. ಶೃಂಗಾರ ನಿರೂಪಣೆಯಲ್ಲಿ ಕಲಾತ್ಮಕವಾಗಿ ಯಾವುದು ಉಚಿತ ಯಾವುದು ಅನುಚಿತ ಎನ್ನುವುದರ ಬಗೆಗಿನ ಲೇಖಕರ ಅಭಿಪ್ರಾಯದಿಂದ ಇದು ಮುಖ್ಯವಾಗಿದೆ.

ರೆಡ್ಡಿಯವರು ಕಾವ್ಯದಲ್ಲಿ ಭಾವನಾಶಕ್ತಿಗೆ ಅತ್ಯುನ್ನತ ಸ್ಥಾನವನ್ನು ಕೊಡು ತ್ತಾರೆ. ಅನೇಕ ರೀತಿಯಲ್ಲಿ ಪ್ರಾಚೀನ ಪಂಥಕ್ಕೆ ಸೇರಿದವರಾದರೂ, ಭಾವೋದ್ವೇಗಗಳ ಆಳ, ಭಾವನೆಗಳ ಸಮಗ್ರಾಭಿವ್ಯಕ್ತಿಯ ಕಡೆಗೆ ಅವರ ಒಲವು ಇಂಗ್ಲಿಷಿನ ರೊಮ್ಯಾಂಟಿಕ್ ಕವಿಗಳಾದ ವರ್ಡ್ಸ್‌ವರ್ತ್ ಮತ್ತು ಕಾಲ್ರಿಡ್ಜರನ್ನು ನೆನಪಿಗೆ ತರುತ್ತದೆ. ಭಾಷಾ ಪಾಂಡಿತ್ಯದ ಮೇಲೆ ಅವರಿಗೆ ಗೌರವ. ಆದರೆ ಇದು ಕಾವ್ಯದ ಸೃಜನಾತ್ಮಕ ಗುಣಕ್ಕೆ

ಅಡ್ಡಿಯಾಗುವಂಥದಾಗಬಾರದು. ರೆಡ್ಡಿಯವರು ತಮ್ಮ ಸಹಜವಾದ ತೀವ್ರಧೋರಣೆಯಲ್ಲಿ ಹೀಗೆನ್ನುತಾರೆ:

"ಕಾವ್ಯ ರಚನೆಗೆ ತೊಡಗಿದ ಚಿಂತನಶೀಲಕವಿ ವ್ಯಾಕರಣ, ನಿಘಂಟು, ಪ್ರಾಚೀನ ಗ್ರಂಥಗಳಿನ್ನು ಓದಲು ನಡುರಾತ್ರಿಯವರೆಗೆ ಎಣ್ಣೆನಷ್ಟ ಮಾಡುವುದರಿಂದ ಶಕ್ತನಾಗುವುದಿಲ್ಲ. ನೀವೇ ಅನುಭವಿಸದ ಭಾವನೆಗಳನ್ನು ಬೇರೆಯವರಲ್ಲಿ ಹೇಗೆ ಎಬ್ಬಿಸುತ್ತೀರಿ ? ಪ್ರಪಂಚದ ಸುಖಗಳಿಗೆ ಸ್ಪಂದಿಸುವ ಸಾಮಾನ್ಯ ಮಾನವ ಆವುಗಳಿಗೆ ಸ್ಪಂದಿಸದ ವಿದ್ವಾಂಸನಿಗಿಂತ ಎಷ್ಟೋ ಉತ್ತಮ ಎನ್ನಬಹುದು."

ಪಾಂಡಿತ್ಯ ಪ್ರದರ್ಶನದಲ್ಲೇ ಹೆಮ್ಮೆಪಟ್ಟು, ಸಾಂಪ್ರದಾಯಿಕ ಪ್ರತಿಮೆಗಳನ್ನೇ ಬಳಸುತ್ತಾ, ಕಾವ್ಯಶೈಲಿಯಲ್ಲಿ ಹೊಸದೇನನ್ನೂ ತೋರಿಸದೆ ಇದ್ದ ಮಧ್ಯ ಕಾಲೀನ ಪ್ರಬಂಧ ಕವಿಗಳ ಬಗೆಗೆ ಅವರಿಗೆ ತುಂಬ ಅಸಹನೆ ಇತ್ತು. ಈ ಕವಿಗಳು ತಮ್ಮ ಪ್ರತಿಮೆಗಳನ್ನು (ಪೂರ್ಣಚಂದ್ರಮುಖಿಗಳು, ತಾವರೆ ರೇಕಿನ ಕಣ್ಣು, ಬಳ್ಳಿಯಂತಹ ಕೈಗಳು, ಕಾಣ ಬರದ ನಡುಗಳು, ಅಂಚೆಯ ನಡೆಮುಂತಾದುವು) ನಿಘಂಟುಗಳಿಂದ, ಅಲಂಕಾರ ಶಾಸ್ತ್ರಗಳಿಂದ ತೆಗೆದುಕೊಂಡರೇ ಹೊರತು ನಿಜ ಜೀವನದ ಪ್ರತ್ಯಕ್ಷ ವೀಕ್ಷಣೆಯಿಂದಲ್ಲವೆಂದು ಪ್ರತಿಯೊಂದು ಹಂತದಲ್ಲಿಯೂ ರೆಡ್ಡಿಯವರು ಟೀಕಿಸಿದ್ದಾರೆ. ಬೇಸರ ತರುವ ರೀತಿಯಲ್ಲಿ, ಪುಸ್ತಕಗಳಿಂದ ತೆಗೆದುಕೊಂಡು ಸಸ್ಯ ಜಾತಿಗಳ ಹೆಸರುಗಳನ್ನು ಯಾಂತ್ರಿಕವಾಗಿ ಪಟ್ಟಿಮಾಡುವುದನ್ನು ರೆಡ್ಡಿಯವರು ಪ್ರತ್ಯೇಕವಾಗಿ ತೋರಿಸಿ ಕೊಟ್ಟಿದ್ದಾರೆ. ಈ ಕವಿಗಳಿಗೆ ಭೌಗೋಳಿಕ ವ್ಯತ್ಯಾಸಗಳ ಬಗ್ಗೆ, ಋತು ಸಂಬಂಧವಾದ ಬದಲಾವಣೆಗಳ ಬಗ್ಗೆ ಗಮನ ತೀರ ಕಡಮೆ ಅಥವಾ ಮನವೇ ಇಲ್ಲವೆನ್ನಬಹುದು. ಪ್ರಜ್ಞಾ ಪೂರ್ವಕವಾದ ಓದುಗನಿಗೆ ಇವು ವಿಶ್ವಾಸ ಕಳೆಮಕೊಳ್ಳುವಂತೆ ಮಾಡುತ್ತವೆ.

ಪಾಂಡಿತ್ಯ ಪ್ರದರ್ಶನದಲ್ಲೇ ಹೆಮ್ಮೆಪಟ್ಟು, ಸಾಂಪ್ರದಾಯಿಕ ಪ್ರತಿಮೆಗಳನ್ನೇ ಬಳಸುತ್ತಾ, ಕಾವ್ಯ ಶೈಲಿಯಲ್ಲಿ ಹೊಸದೇನನ್ನೂ ತೋರಿಸದೆ ಇದ್ದ ಮಧ್ಯಕಾಲೀನ ಪ್ರಬಂಧ ಕವಿಗಳ ಬಗೆಗೆ ಅವರಿಗೆ ತುಂಬ ಅಸಹನೆ ಇತ್ತು. ಈ ಕವಿಗಳು ತಮ್ಮ ಪ್ರತಿಮೆಗಳನ್ನು (ಪೂರ್ಣಚಂದ್ರಮುಖಿಗಳು, ತಾವರೆರೇಕಿನ ಕಣ್ಣು, ಬಳ್ಳಿಯಂತಹ ಕೈಗಳು, ಕಾಣಬರದ ನಡುಗಳು, ಅಂಚೆಯ ನಡೆ ಮುಂತಾದುವು) ನಿಘಂಟುಗಳಿಂದ, ಅಲಂಕಾರ ಶಾಸ್ತ್ರಗಳಿಂದ ತೆಗೆದುಕೊಂಡರೇ ಹೊರತು ನಿಜಜೀವನದ ಪ್ರತ್ಯಕ್ಷವೀಕ್ಷಣೆಯಿಂದಲ್ಲವೆಂದು ಪ್ರತಿಯೊಂದು ಹಂತದಲ್ಲಿಯೂ ರೆಡ್ಡಿಯವರು ಟೀಕಿಸಿದ್ದಾರೆ. ಬೇಸರ ತರುವ ರೀತಿಯಲ್ಲಿ, ಪುಸ್ತಕಗಳಿಂದ ತೆಗೆದುಕೊಂಡು ಸಸ್ಯಜಾತಿಗಳ ಹೆಸರುಗಳನ್ನು ಯಾಂತ್ರಿಕವಾಗಿ ಪಟ್ಟಿಮಾಡುವುದನ್ನು ರೆಡ್ಡಿಯವರು ಪ್ರತ್ಯೇಕವಾಗಿ ತೋರಿಸಿಕೊಟ್ಟಿದ್ದಾರೆ. ಈ ಕವಿಗಳಿಗೆ ಭೌಗೋಳಿಕ ವ್ಯತ್ಯಾಸಗಳ ಬಗ್ಗೆ, ಋತುಸಂಬಂಧವಾದ ಬದಲಾವಣೆಗಳ ಬಗ್ಗೆ ಗಮನ ತೀರ ಕಡಮೆ ಅಥವಾ ಗಮನವೇ ಇಲ್ಲವೆನ್ನಬಹುದು. ಪ್ರಜ್ಞಾ ಪೂರ್ವಕವಾದ ಓದುಗನಿಗೆ ಇವು ವಿಶ್ವಾಸ ಕಳೆದುಕೊಳ್ಳುವಂತೆ ಮಾಡುತ್ತವೆ.

ಕಾವ್ಯ ಭಾಷೆಯಲ್ಲಿ ಅಲಂಕಾರಗಳ ಪಾತ್ರವನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳುವುದು ಸಾಧ್ಯವಾದರೂ ಪ್ರತಿಯೊಂದು ಸಂದರ್ಭದಲ್ಲಿಯೂ ಉಪಮೆಗಳನ್ನು ಬಳಸುವುದರ ಬಗ್ಗೆ ರೆಡ್ಡಿಯವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಹಿತವಾಗುವಷ್ಟು ಬೇರೆ ವಸ್ತುಗಳೊಂದಿಗೆ ಹೋಲಿಸಿದಾಗ ನಿಜ ವಸ್ತು ತನ್ನ ಸ್ವಂತಿಕೆಯನ್ನೇ ಕಳೆದುಕೊಳ್ಳುತ್ತದೆಂದು ಅವರು ವಾದಿಸುತ್ತಾರೆ. ಸಾಂಪ್ರದಾಯಿಕ ಕವಿಗಳು ವರ್ಣನೆಗೆ ಕೊಟ್ಟ ಪ್ರಾಧಾನ್ಯವನ್ನು ಅವರು ಒಪ್ಪುವುದಿಲ್ಲ. ವರ್ಣನೆಗೆ ತೊಡಗಿರುವಾಗ ಪ್ರತಿಷ್ಠೆಗಾಗಿ ಮಾಡುವ ಕಾವ್ಯಪದ್ಧತಿಗಳನ್ನಂತು ರೆಡ್ಡಿಯವರು ಸಹಿಸುವುದಿಲ್ಲ. ಕೆಲವರು ಭಾಷಾತಜ್ಞರು ಅಭಿಪ್ರಾಯ ಪಡುವ ಹಾಗೆ, ಇದು ಪರೋಕ್ಷವಾಗಿ ಭಾಷೆಯಲ್ಲಿ ನಾಮಪದಗಳ ಅಭಾವವನ್ನು ಸೂಚಿಸುತ್ತದೆ. ಈ ಅಭಿಪ್ರಾಯವನ್ನು ರೆಡ್ಡಿಯವರು ಒಪ್ಪಿದಂತಿದೆ.

ಪಾತ್ರವರ್ಣನೆಯಲ್ಲಿ ಸಾಂಪ್ರದಾಯಿಕವಾಗಿ ಮಾನವ ಪಾತ್ರಗಳನ್ನು ವರ್ಗೀಕರಿಸುವ ಪದ್ಧತಿಯನ್ನಂತು ರೆಡ್ಡಿಯವರು ತೀವ್ರವಾಗಿ ಪ್ರತಿಭಟಿಸುತ್ತಾರೆ. ಅವರ ಪ್ರಕಾರ ಒಬ್ಬ ಮನುಷ್ಯ ಸಂಪೂರ್ಣವಾಗಿ ಉತ್ತಮ ಎಂದಾಗಲಿ, ಅಧಮ ಎಂದಾಗಲಿ, ಗುಣವಂತ ಎಂದಾಗಲಿ, ದುಷ್ಟನೆಂದಾಗಲಿ ಹೇಳುವುದು ಅಸಹಜ. ಅದು ಕಲಾತ್ಮಕವಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಪ್ರತಿಯೊಬ್ಬರೂ ಗುಣಾವಗುಣಗಳು, ಉತ್ತಮ ನೀಚಗುಣಗಳು ಮತ್ತು ಇನ್ನಿತರ ಎಲ್ಲಾ ವಿಷಯಗಳನ್ನೂ ಒಳಗೊಂಡಿರುತ್ತಾರೆ. ಮಾನವ ಸ್ವಭಾವಚಿತ್ರ ಪೂರ್ತಿ ಕಪ್ಪೂ ಅಲ್ಲ ಬಿಳುಪೂ ಅಲ್ಲ. ಅನೇಕ ಸಂದರ್ಭಗಳಲ್ಲಿ ಬೆಳಕು ನೆರಳುಗಳು, ನೀಲಿರೇಖೆಗಳು, ಬಣ್ಣಗಳು ಹೆಚ್ಚುಕಡಮೆಯಾಗುವುದು-ಇವೆಲ್ಲಾ ಮಾನವ ಚಿತ್ರದಲ್ಲಿ ಕಂಡುಬರುತ್ತವೆ. ಸಾಹಿತ್ಯ, ಜೀವನದಂತೆಯೇ ಜೀವಂತ ವ್ಯಕ್ತಿಗಳಿಂದ ತುಂಬಿರಬೇಕೇ ಹೊರತು ಮಾಂತ್ರಿಕ ನಿದರ್ಶನಗಳಿಂದಲ್ಲ ಎಂಬುದನ್ನು ಮರೆಯಬಾರದು. ಪಾತ್ರಗಳು ಗುಂಡಾಗಿರಬೇಕು, ಚಪ್ಪಟೆಯಾಗಿರಬಾರದು, ಅವು ಮಾರ್ಪಾಡಿಗೆ ಒಳಗಾಗುವಂತಿರಬೇಕು ; ಏಕೆಂದರೆ ಮಾರ್ಪಾಡೇ ಜೀವನದ ಧ್ಯೇಯ.

ರೆಡ್ಡಿಯವರು ರೂಪಿಸಿದ ಮಾನದಂಡದ ಪ್ರಕಾರ ಮಹಾಭಾರತದ ಪಾತ್ರಗಳು ರಾಮಾಯಣದ ಪಾತ್ರಗಳಿಗಿಂತ ಹೆಚ್ಚು ವೈವಿಧ್ಯವಾಗಿ, ಜೀವಂತವಾಗಿವೆ. ಭೀಮ, ಅರ್ಜುನ, ದ್ರೌಪದಿ, ದುರ್ಯೋಧನ ಮತ್ತಿತರರು ರಾಮಾಯಣದ ಅವರವರ ಸಂವಾದಿ ಪಾತ್ರಗಳಿಗಿಂತ ಹೆಚ್ಚು ಸಮರ್ಪಕವಾಗಿವೆ. ಏಕೆಂದರೆ ಸಾಮಾನ್ಯ ಮಾನವ ಅನೇಕ ತಲೆಮಾರುಗಳಿಂದ ಅನುಭವಿಸಿರುವ ಪ್ರೇಮ, ದ್ವೇಷ, ಚಾಂಚಲ್ಯ-ಇವೆಲ್ಲಾ ಆ ಪಾತ್ರಗಳಲ್ಲಿ ಕಂಡುಬರುತ್ತವೆ. ರಾಮಾಯಣದ ಅನೇಕ ಪಾತ್ರಗಳು ಆದರ್ಶಗಳ ವ್ಯಕ್ತೀಕರಣವಾಗಿವೆ. ರಾಮ, ಲಕ್ಷ್ಮಣ, ಸೀತೆ, ಹನುಮಂತ ಮುಂತಾದವರೆಲ್ಲಾ ಇಂತಹವರೇ. ಇಲ್ಲದಿದ್ದರೆ ನಮಗೆ ಇವರೆಲ್ಲ ಪರಿಚಿತರಾದ ರಾಕ್ಷಸರು, ವಾನರರು ಮುಂತಾದವರು. ಪ್ರಬಂಧ ಪಾತ್ರಗಳು ನಿರ್ಜೀವವಾಗಿಯೂ, ಹಿಂದಿನ ಕೃತಿಗಳ ವರ್ಣರಹಿತ ಪ್ರತಿಕೃತಿಗಳೂ ಆಗಿವೆ.

ನಮ್ಮ ಸುತ್ತಮುತ್ತ ಇರುವ ಜನರನ್ನು ಹೋಲುವ ಸ್ತ್ರೀ ಪುರುಷ ಪಾತ್ರಗಳಿರುವುದರಿಂದ ಅವು ಬೆಳೆಯುವುದೂ ಇಲ್ಲ, ಬದಲಾಗುವುದೂ ಇಲ್ಲ.

ಇತರ ವಿಷಯಗಳಲ್ಲೂ 'ಪ್ರಬಂಧ' ಕರ್ತೃಗಳಿಗಿಂತ, ತೆಲುಗು ಮಹಾಭಾರತ ಕರ್ತೃಗಳಾದ ಕವಿತ್ರಯ (ನನ್ನಯ, ತಿಕ್ಕನ ಮತ್ತು ಎರ್ರಾಪ್ರೆಗಡ)ರೆಂದರೆ ರೆಡ್ಡಿಯವರಿಗೆ ಹೆಚ್ಚಿನ ಗೌರವ ಇತ್ತು. ಪಾರಿಭಾಷಿಕವಾಗಿ ಹೇಳಬೇಕಾದರೆ ಕವಿತ್ರಯರು ಸಂಸ್ಕೃತದಿಂದ ಒಂದು ಕೃತಿಯನ್ನು ತೆಲುಗಿಗೆ ಅನುವಾದಿಸಿದರು. ಪ್ರಬಂಧಕವಿಗಳು ತಮ್ಮದೇ ಆದ ಭಾವನಾಶಕ್ತಿಯಿಂದ ಕೃತಿರಚನೆ ಮಾಡಿದರು. ಇಲ್ಲಿಯ ವಿರೋಧಾಭಾಸವೆಂದರೆ ಕವಿತ್ರಯರಲ್ಲೇ ಪ್ರಬಂಧ ಕವಿಗಳಿಗಿಂತ ಹೆಚ್ಚಿನ ಸ್ವೋಪಜ್ಞತೆ, ಕಾವ್ಯನಿರ್ಮಾಣಶಕ್ತಿ ಕಂಡುಬರುತ್ತವೆ. ಇದಕ್ಕೆ ಕಾರಣವೇನೆಂದರೆ ಕವಿತ್ರಯರು ಉನ್ನತ ಮಟ್ಟದ ಕವಿಗಳು ಮಾತ್ರವಲ್ಲದೆ, ಪಂಡಿತರೂ ಆಗಿದ್ದರು. ಅವರ ಆಲೋಚನೆಗಳು ಸಮರ್ಪಕವೂ, ಹೆಚ್ಚು ಸಂಯಮದಿಂದ ಕೂಡಿದವು, ಪಾತ್ರಗಳು ಹೆಚ್ಚು ಜೀವಂತವಾದವು, ವಾಸ್ತವವಾದವು ಎಂದು ರೆಡ್ಡಿಯವರು ಒತ್ತಿಹೇಳಿದ್ದಾರೆ. ಕವಿತ್ರಯರು ಅನುವಾದ ಮಾಡಿಲ್ಲ; ಪುನರ್ನಿರ್ಮಿಸಿದ್ದಾರೆ, ಪುನಃ ಸೃಷ್ಟಿಸಿದ್ದಾರೆ, ಅವರು ಹಾಗೆ ಮಾಡಲೇಬೇಕಾಯಿತು, ಏಕೆಂದರೆ ಅವರ ಸೃಜನ ಶೀಲಗುಣ ಅವರನ್ನು ಹಾಗೆ ಮಾಡುವಂತೆ ಪ್ರೇರಿಸಿತು.

ಪ್ರಬಂಧ ಪಂಥದ ಕವಿಗಳ ಕಥಾವಸ್ತು ಅವರದೇ ಆದುದರಿಂದ ಅವರಿಗೆ ಹೆಚ್ಚಿನ 'ಸ್ವಾತಂತ್ರ್ಯ'ವಿತ್ತೆಂದು ಹೇಳಬಹುದು. ಸತ್ಯಾಂಶವೆಂದರೆ, ಅವರ ಕೃತಿಗಳ ಶೈಲಿ ಒಂದೇ ರೀತಿಯದು, ಪಾತ್ರಗಳು ಒಂದೇ ತರಹದವು. ಈ ಕಾರಣದಿಂದ ಅವರ ಕೃತಿಗಳಲ್ಲಿ ಸ್ವಂತಿಕೆಯಾಗಲಿ, ಭಾವನಾಶಕ್ತಿಯಾಗಲಿ ಬಹಳ ಕಡಮೆ. ವ್ಯಕ್ತಿನಾಮಗಳು, ಸ್ಥಳಗಳನ್ನು ಬಿಟ್ಟರೆ ಒಂದು 'ಪ್ರಬಂಧ'ಕ್ಕೂ ಇನ್ನೊಂದು ಪ್ರಬಂಧಕ್ಕೂ ವ್ಯತ್ಯಾಸವಿಲ್ಲ. ಪಾಂಡಿತ್ಯ ಪ್ರದರ್ಶನಕ್ಕೆ ಕಡಮೆಯೇನೂ ಇಲ್ಲ. ಆದರೆ ಉತ್ತಮ ಕಾವ್ಯವಾಗಲು ಬೇಕಾದ ಮೂಲಸತ್ತ್ವಗಳಿಗಾಗಿ ಈ ಕಾವ್ಯಗಳಲ್ಲಿ ಹುಡುಕುವುದು ವ್ಯರ್ಥ. ಉತ್ತಮ ಕಾವ್ಯಕ್ಕಾಗಿ ನೋಡುವುದೂ ಕಷ್ಟವೇ.

ಪ್ರಚಲಿತ ಪದ್ಧತಿಯಂತೆ ಪ್ರತಿಯೊಂದು 'ಪ್ರಬಂಧ' ದಲ್ಲಿಯೂ ಅಷ್ಟಾದಶ ವರ್ಣನೆಗಳೂ, ನವರಸಗಳೂ ಇರಬೇಕು. ಸಂದರ್ಭಕ್ಕೆ ಅವು ಹೊಂದಿಕೆಯಾಗುತ್ತವೆಯೋ ಇಲ್ಲವೆ ಎನ್ನುವುದು ಇವರಿಗೆ ಬೇಕಾಗಿಲ್ಲ. ಸಂದರ್ಭವೇನಾದರೂ ಸಿಕ್ಕದಿದ್ದರೆ, ವರ್ಣನೆ ಮಾಡಲು ಏನಾದರೊಂದು ನೆಪ ಹುಡುಕ ಬೇಕಾಗುತ್ತದೆ. ಕಥಾವಸ್ತು ಬಹಳ ಚಿಕ್ಕದು; ಇರುವ ಕಥೆಯೂ ಸಂಬಲರ್ಪವಾದುದಲ್ಲ. ರಾಜಕುಮಾರ ಮತ್ತು ರಾಜಕುಮಾರಿ–ಇವರ ಪ್ರಣಯ ವೃತ್ತಾಂತ ಪ್ರಧಾನಸೂತ್ರವಾಗಿದ್ದು ಅದರ ಸುತ್ತ ಕಥೆ ಸಾಮಾನ್ಯವಾಗಿ ಹೆಣೆಯಲಾಗಿದೆ. ಪ್ರಣಯಮಿತ್ರರು, ನಾಯಕನ ಸಹಾಯಕರು, ನಾಯಿಕಾಸಹಾಯಕರು, ವೇಶ್ಯೆಯರು, ಬ್ರಾಹ್ಮಣ ಪುರೋಹಿತರು ಮುಂತಾದವರ ರೂಪದಲ್ಲಿ ಸಹಾಯಕ ಸೂತ್ರಗಳಿರುತ್ತವೆ. ಕಥಾನಿರೂಪಣೆಯಲ್ಲಿ ಮತ್ತು ಸಂಭಾಷಣೆಯಲ್ಲಿ ಶ್ಲೇಷೆ, ಚಂದ್ರೋಪಾಲಂಭನ (ಚಂದ್ರನನ್ನು ನಿಂದಿಸುವುದು), ಮನ್ಮಥೋಪಾಲಂಭನ

ಮುಂತಾದ ಸಾಂಪ್ರದಾಯಿಕ ಪದ್ಧತಿಗಳು ತೆಲುಗು 'ಪ್ರಬಂಧ'ಗಳಲ್ಲಿ ತಪ್ಪದೆ ಕಂಡು ಬರುವಂಥವು.

'ಪ್ರಬಂಧ'ಗಳಲ್ಲಿ ಉತ್ತಮ ಕೃತಿಗಳೇ ಇರಲಿಲ್ಲ ವೆಂದೂ ಹೇಳಲಾಗದು. ಉನ್ನತ ಮೌಲ್ಯಗಳುಳ್ಳ ಆರು ಕೃತಿಗಳಾದರೂ ಸಿಕ್ಕುತ್ತವೆ. ತೆಲುಗು ಕಾವ್ಯಗಳಲ್ಲಿ ರೆಡ್ಡಿಯವರು ಸಂತೋಷದಿಂದ ಮೂರು ಕಾವ್ಯಗಳಿಗಾದರೂ ಉನ್ನತಸ್ಥಾನ ಕೊಡುತ್ತಾರೆ. ಅವು– ಮನುಚರಿತ್ರ (ಅಲ್ಲಸಾನಿಪೆದ್ದನನದು), ವಸುಚರಿತ್ರ (ರಾಮರಾಜಭೂಷಣನದು), ವಿಜಯವಿಲಾಸಮು (ಚೇಮಕೂರ ವೆಂಕಟಕವಿಯದು). ಅವರ ಪ್ರೀತಿಗಳಿಸಿದ 'ಕಳಾಪೂರ್ಣೋದಯಮು' (ಪಿಂಗಳಿಸೂರನನದು)ವನ್ನು, 'ಪ್ರಭಾವತಿ ಪ್ರದ್ಯುಮ್ನಮು' (ಅದೇ ಕವಿಯದು)ವನ್ನೂ ಈ ಪಟ್ಟಿಯೊಳಗೆ ಸೇರಿಸಿಕೊಳ್ಳಬಹುದು.

'ಪ್ರಬಂಧ'ಗಳಲ್ಲಿ ಅತ್ಯುತ್ತಮವಾದುವೂ ರೆಡ್ಡಿಯವರ ವಿಮರ್ಶೆಯಿಂದ ತಪ್ಪಿಸಿಕೊಂಡಿಲ್ಲ. ಅವು ಸಾಮಾನ್ಯ ಜನರ ಜೀವನವನ್ನು ಅವರ ನೋವು ನಲಿವು, ಹಣಗಾಟ, ವೇದನೆ, ಆಸೆ, ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವುದಿಲ್ಲ. ಸಮಾಜದ ಗಣ್ಯ ವ್ಯಕ್ತಿಗಳ ಸಾಹಿತ್ಯವನ್ನು ಅವು ಪ್ರತಿನಿಧಿಸುತ್ತವೆ. ಈ ವಿಷಯದಲ್ಲಿ ಅವು ಸಮಕಾಲೀನ ಐರೋಪ್ಯ ಸಾಹಿತ್ಯದಿಂದ ತೀರ ಭಿನ್ನವಾಗಿವೆ. ಐರೋಪ್ಯ ಸಾಹಿತ್ಯವೂ ರಾಜಮನೆತನದ ಕಾರ್ಯಗಳನ್ನು ವರ್ಣಿಸಿದರೂ, ಬಡರೈತ, ಸಾಮಾನ್ಯಸೈನಿಕ, ಕಿರಾಣಿ ಅಂಗಡಿಯವನು, ಇತರ ಸಾಮಾನ್ಯ ಸೋದರ ಜನಾಂಗದ ಜೀವನವನ್ನು ಕಡೆಗಣಿಸಲಿಲ್ಲ. ಆದಿನ ಆಂಧ್ರದಲ್ಲಿ ಜೀವನ ಹಾಗೂ ಸಾಹಿತ್ಯಗಳ ನಡುವೆ ಭಾರಿ ಅಂತರವಿತ್ತು. ರೆಡ್ಡಿಯವರ ಪ್ರಕಾರ ಇದು ಸಾಮಾಜಿಕ ಪ್ರಜ್ಞೆಯ ಅಭಾವದಿಂದ ಉಂಟಾದದ್ದು ಮಾತ್ರವಲ್ಲದೆ, ಸಾಹಿತ್ಯವು ನಿಜವಾದ ಜೀವನದ ಸತ್ತ್ವವಿಲ್ಲದೆ ಕಳೆಗುಂದಿತು. ನಾಟಕೀಯ ಸಂಘರ್ಷವಾಗಲಿ, ಹೃದಯಸ್ಪರ್ಶಿಯಾದ ದುರಂತದ ಆಳವಾಗಲಿ ಈ ಕಾವ್ಯಗಳಲ್ಲಿಲ್ಲ.

'ಕಳಾಪೂರ್ಣೋದಯಮು' ಅನೇಕ ಕಾರಣಗಳಿಂದ ರೆಡ್ಡಿಯವರ ಗಮನ ಸೆಳೆಯಿತು. ಕವಿ ತೋರಿಸಿರುವ ಭಾವನಾಶಕ್ತಿ, ಸಂದರ್ಭೋಚಿತ ವರ್ಣನೆಗಳು, ವೈವಿಧ್ಯಮಯ ಪಾತ್ರಚಿತ್ರಣ, ಸಂದರ್ಭಕ್ಕೆ ತಕ್ಕ ಛಂದೋರಚನೆ ಈ ಕಾರಣಗಳು ಮುಖ್ಯವಾದವು. ಕಥೆ ಪೌರಾಣಿಕ ಮತ್ತು ಕಾಲ್ಪನಿಕ ವಸ್ತುಗಳ ಮಿಶ್ರಣ. ಲೇಖಕನಿಗೆ ಉಚಿತವಾದ ಕಾಲ್ಪನಿಕತೆಯೇ ಹೆಚ್ಚಾಗಿದೆ. ಉಪಾಖ್ಯಾನಗಳ ಅನುಕ್ರಮದಲ್ಲಿ, ಪಾತ್ರಗಳ ನಿರೂಪಣೆಯಲ್ಲಿ ಸಾಕಷ್ಟು ಸಂಕೀರ್ಣತೆಯಿದೆ. ಪ್ರೇಮಿಗಳ ಸಂಗಮದಲ್ಲಿ ಅನೇಕ ಸ್ರವಂತಿಗಳು ಉಪಸ್ರವಂತಿಗಳು ಇವೆ. ರಂಭೆ ಮತ್ತು ನಲಕೂಬರ, ಕಲಭಾಷಿಣಿ ಮತ್ತು ಮಣಿಕಂಧರ, ಅಭಿನವ ಕೌಮುದಿ/ಮಧುರಲಾಲಸ ಹಾಗೂ ಕಳಾಪೂರ್ಣರಲ್ಲಿ ಈ ಸಂಕೀರ್ಣತೆ ಕಂಡು ಬರುತ್ತದೆ. ಇದರ ಜೊತೆಗೆ ಸರಸ್ವತಿ ಮತ್ತು ಚತುರ್ಮುಖ ; ಸುಗಾತ್ರಿ ಮತ್ತು ಶಾಲೀನರ ರೂಪದಲ್ಲಿ ದಾಂಪತ್ಯ ಪ್ರಣಯವೂ ಕಂಡು ಬರುತ್ತದೆ. ಸಂಪೂರ್ಣಕಥಾವಸ್ತುವಿಗೆ ವೈವಿಧ್ಯವನ್ನು ತರುವ ಉದ್ದೇಶದಿಂದ ಪ್ರಣಯ ವೃತ್ತಾಂತಗಳನ್ನು ರೂಪಿಸಲಾಗಿದೆ. ಕೊನೆಯಲ್ಲಿ ಹೇಳಿದ ದಂಪತಿಗಳು ಮುಗ್ಧವಾತಾವರಣದಿಂದ, ಜೀವಂತವಾದ

ಸರಳತೆಗಳಿಂದ ಷೇಕ್ಸ್‌ಪಿಯರನ ''ಯಾಜ್ ಯು ಲೈಕ್ ಇಟ್'' ನಲ್ಲಿರುವ ರೋಸಲಿಂಡ್ ಮತ್ತು ಆರ್ಲ್ಲಂಡೋ ಎಂಬ ಪಾತ್ರಗಳನ್ನು ನೆನಪಿಗೆ ತರುತ್ತವೆ. ರಂಭಾ ನಲಕೂಬರರನ್ನು ಗುರುತಿಸುವಾಗ ಉಂಟಾವ ತಬ್ಬಿಬ್ಬುಗಳು 'ಕಾಮೆಡಿ ಆಫ್ ಎರ್ರರ್ಸ್'ನ್ನು ನೆನಪಿಗೆ ತರುತ್ತವೆ.

ರೆಡ್ಡಿಯವರು ಗುರುತಿಸಿದಂತೆ ಷೇಕ್ಸ್‌ಪಿಯರ್ ಹಾಗೂ ಸೂರನ ಸಮಕಾಲೀನರು. ಆದರೆ ಒಬ್ಬರು ಇರುವ ವಿಷಯ ಇನ್ನೊಬ್ಬರಿಗೆ ಗೊತ್ತಿಲ್ಲ ! ಇದು ನಿಜವಾಗಿಯೂ ಗಮನಾರ್ಹವಾದ ವಿಷಯವಾಗಿದೆ.

ಅನಂತರದ ಕೃತಿಯಾದ 'ಪ್ರಭಾವತೀ ಪ್ರದ್ಯುಮ್ನಮು' ವಿನಲ್ಲಿ ಒಂದು ರೀತಿಯ ಪರಿಪಕ್ವ ಶೈಲಿ, ಕವಿ ಅತಿಯಾಗಿ ಬಳಸಿದ ಗಾದೆಗಳಿಂದ ವ್ಯಕ್ತವಾಗುವ ಮಾನವ ಸ್ವಭಾವದ ಶ್ರೀಮಂತ ಅನುಭವಗಳನ್ನು ರೆಡ್ಡಿಯವರು ಗುರುತಿಸಿದ್ದಾರೆ. ಇದಕ್ಕೆ ಸಂವಾದಿಯಾಗಿ, ಮೂಲ ಸತ್ತ್ವವಾದ ಭಾವನಾಶಕ್ತಿಯ ಅವನತಿಯನ್ನೂ ನೋಡ ಬಹುದು. ಶ್ಲೇಷೆ ಮತ್ತು ದ್ವ್ಯರ್ಥಿ (ಎರಡರ್ಥಗಳು ಬರುವಂತೆ ಬರೆಯುವುದು)ಗಳನ್ನು ಉಪಯೋಗಿಸುವ ಅಭ್ಯಾಸದಿಂದ ತನ್ನನ್ನು ತಾನು ಬಿಡಿಸಿಕೊಂಡರೂ, ಚಿತ್ರಕಾವ್ಯ ಪದ್ಧತಿಗಳನ್ನು ಬಳಸುವ ಅಭ್ಯಾಸದಿಂದ ಈ ಕವಿ ತಪ್ಪಿಸಿಕೊಂಡಿಲ್ಲ.

ಪದ್ಯಕೃತಿಯ ಕಥಾ ನಿರೂಪಣೆಯಲ್ಲಿ ಕಾಲಾನುಕ್ರಮ ವಿವರಣೆಗಿಂತ ಕವಿ ಅನುಸರಿಸಿದ ತರ್ಕಬದ್ಧ ರೀತಿಯೇ ರೆಡ್ಡಿಯವರ ಒಪ್ಪಿಗೆಯನ್ನು ಪಡೆದಿದೆ. ಏಕೆಂದರೆ ಈ ಪದ್ಧತಿ ಇದರ ಹಿಂದಿನ ಕಲಾತ್ಮಕ ಉದ್ದೇಶವನ್ನು ಶಕ್ತಿಯುತವಾಗಿ ಪೂರೈಸುತ್ತದೆ. ಪಾತ್ರ ಪೋಷಣೆಯ ವಿಷಯದಲ್ಲಿ ಅವರಿಗೆ ನಿರ್ದಿಷ್ಟ ಅಭಿಪ್ರಾಯಗಳಿವೆ. ಇದನ್ನು ಹೆಜ್ಜೆ ಹೆಜ್ಜೆಗೂ ಕವಿಯ ಗಮನವನ್ನು ಸೆಳೆಯುವ ಹಾಗೆ ರೆಡ್ಡಿಯವರು ಹೇಳಿದ್ದಾರೆ. ಅವನ್ನು ಅವರು ಹೀಗೆನ್ನುತ್ತಾರೆ :

''ನಾಮಪದವರ್ಣನೆ ನಿಘಂಟುಕಾರನ ಕೆಲಸ. ವೈಯಕ್ತಿಕ ಚಿತ್ರವನ್ನು ಕೊಡುವುದು ಕವಿಯ ವ್ಯಾಪಾರ. ಇದನ್ನು ಮಾಡದಿದ್ದರೆ ಅವನು ಪಂಡಿತನೆನಿಸಿಕೊಂಡರೂ ಕವಿಯೆನಿಸಿಕೊಳ್ಳುವುದಿಲ್ಲ. ಕವಿ ತನ್ನ ಮನಸ್ಸಿನಲ್ಲೇ ಸೃಷ್ಟಿಸಿಕೊಂಡ ಚಿತ್ರವನ್ನು ಮಾತಿನ ಮಾಧ್ಯಮದಿಂದ ಓದುಗನು ತಿಳಿದುಕೊಳ್ಳುವ ಹಾಗೆ ಮಾಡುವ ಶಕ್ತಿ ಕಾವ್ಯದಲ್ಲಿರುತ್ತದೆ. ಒಂದು ನದಿಯನ್ನು ವರ್ಣಿಸುವಾಗ, ಅದನ್ನು ಇತರ ವಸ್ತುಗಳಿಗಿಂತ ಭಿನ್ನವಾಗಿ ರೂಪಿಸದಿದ್ದರೆ, ಅದು ಕಲೆ ಎನಿಸಿಕೊಳ್ಳುವುದಿಲ್ಲ. ನದಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರಬೇಕು. ಸರಸ್ಸುಗಳು, ಪ್ರಕೃತಿಯ ಇತರ ವಸ್ತುಗಳಿಗೂ ಈ ಮಾತು ಅನ್ವಯವಾಗುತ್ತದೆ. ಮಾನವ ಪಾತ್ರಗಳನ್ನು ಚಿತ್ರಿಸುವಾಗ ಈ ದೃಷ್ಟಿಕೋನವನ್ನು ಹೊಂದಿರಬೇಕಾಗುತ್ತದೆ.''

ಇಷ್ಟು ಕಾಲ ಕಳೆದಮೇಲೆ (ಅದನ್ನು ಬರೆದು ಏಳುದಶಕಗಳಿಗಿಂತ ಹೆಚ್ಚು ಕಾಲ ಆಯಿತು), ಆಧುನಿಕ ಸಾಹಿತ್ಯ ಹಾಗೂ ಪಾಶ್ಚಾತ್ಯ ವಿಮರ್ಶೆಯ ಮೂಲತತ್ತ್ವಗಳನ್ನು

ಚೆನ್ನಾಗಿ ಅರಿತವರಿಗೆ ರೆಡ್ಡಿಯವರ ಈ ಅಭಿಪ್ರಾಯಗಳು ಸರ್ವೇಸಾಮಾನ್ಯವಾದುವೆನಿಸ ಬಹುದು. ಆದರೆ ಹೊಸ ಶತಮಾನ ಕಾಲಿಟ್ಟ ಕಾಲದಲ್ಲಿ ಪಡುವಣಗಾಳಿಯ ಅಸ್ಥಿರ ಚೈತನ್ಯದೊಂದಿಗೆ ಅವರ ಅಭಿಪ್ರಾಯಗಳು ತೆಲುಗು ಸಾಹಿತ್ಯದ ಪ್ರಶಾಂತ ಕ್ಷೇತ್ರವನ್ನು ಕೆದಕಿದವು. ಸಾಂಪ್ರದಾಯಿಕ ಭಾವವುಳ್ಳವರ ಪಾಲಿಗೆ ಅವು ಕ್ರಾಂತಿಕಾರಕವೆನಿಸಿದವು. ಕೆಲವರು ತೆಲುಗು ಪಂಡಿತರು ಪ್ರಾಚೀನ ಆಲಂಕಾರಿಕರಿಂದ ಅಧ್ಯಾಯಗಳನ್ನು, ಪದ್ಯ ಗಳನ್ನು ಉಲ್ಲೇಖಿಸಿ ರೆಡ್ಡಿಯವರ ವಾದವನ್ನು ಖಂಡಿಸಲು ಯತ್ನಿಸಿದರು. 'ಕವಿತ್ವ ತತ್ತ್ವವಿಚಾರಮು'ವನ್ನು ಆಮೂಲಾಗ್ರವಾಗಿ ಭೇದಿಸುವ ಪುಸ್ತಕಗಳೂ ಹೊರಬಂದವು. ಆದರೆ ಆಧುನಿಕರು ರೆಡ್ಡಿಯವರ ಪುಸ್ತಕವನ್ನು ಸಾಹಿತ್ಯ ವಿಮರ್ಶೆಯ ಹೊಸವೇದವೆಂದು ಶ್ಲಾಘಿಸಿದರು. ವಿಮರ್ಶೆಯಲ್ಲಿ ಯಾವುದಕ್ಕೆ ಹೆಚ್ಚು ಪ್ರಾಧಾನ್ಯ ಕೊಡಬೇಕು ಎನ್ನುವು ದರ ಬಗ್ಗೆ ರೆಡ್ಡಿಯವರ ಪ್ರಯತ್ನವನ್ನು ಹೇಳಬೇಕಾದರೆ, ಅವರು ಬಹಿರಂಗ ಅಲಂಕಾರ ಗಳಿಗಿಂತ ಕಾವ್ಯದ ಅಂತಸ್ಸತ್ತ್ವಕ್ಕೂ, ಭಾಷೆಗಿಂತ ತತ್ತ್ವಕ್ಕೂ, ದೇಹಕ್ಕಿಂತ ಆತ್ಮಕ್ಕೂ ಮಹತ್ವವನ್ನು ಕೊಟ್ಟರು.

ರೆಡ್ಡಿಯವರು ಸಾಹಿತ್ಯ ವಿಮರ್ಶಕರಾಗಿ ಕೆಲವು ಕಾವ್ಯ ಪಾತ್ರಗಳ ಪುನರ್ವ್ಯಾ ಖ್ಯಾನದಲ್ಲಿ, ಕೆಲವು ಪುಸ್ತಕಗಳ ಮತ್ತು ಲೇಖಕರ ಪುನರ್ಮೌಲ್ಯ ಮಾಪನದಲ್ಲಿ ಗಣ ನೀಯವಾದ ಕೊಡುಗೆಯನ್ನಿತ್ತರು. ತೆಲುಗು ಮಹಾಭಾರತ ಅವರ ನೆಚ್ಚಿನ ಕಾವ್ಯ ವಾದರೆ, ದ್ರೌಪದಿ ಅವರ ನೆಚ್ಚಿನ ಪಾತ್ರ. 'ಪಂಚಮಿ' (ಐದು ಪ್ರಬಂಧಗಳ ಪುಸ್ತಕ)ಯ ಒಂದು ಪ್ರಬಂಧದಲ್ಲಿ ರೆಡ್ಡಿಯವರು ಸೀತೆ ಮತ್ತು ದ್ರೌಪದಿಯರನ್ನು ಸೂಕ್ಷ್ಮವಾಗಿ ತುಲನೆಮಾಡಿ ತೋರಿಸಿದ್ದಾರೆ. ಅನೇಕ ತಲೆಮಾರುಗಳಿಂದ ಈ ದೇಶದಲ್ಲಿ ಸೀತೆ ಆದರ್ಶ ಮಹಿಳೆಗೆ ಪ್ರತಿರೂಪವಾಗಿದ್ದಾಳೆ. ಸೀತೆಯ ಉತ್ತಮಗುಣಗಳಾದ ಪಾತಿವ್ರತ್ಯ, ಸಹನೆ, ಕೋಮಲತೆ, ಕಷ್ಟ ಸಹಿಷ್ಣುತೆಗಳನ್ನು ರೆಡ್ಡಿಯವರು ಮೆಚ್ಚಿಕೊಂಡಿದ್ದಾರೆಂಬುದೇನೋ ನಿಜ. ಆದರೆ ದ್ರೌಪದಿಯ ಧೈರ್ಯ, ಸಾಹಸ, ಕ್ರಿಯಾಶೀಲತೆ ಅವರ ಗಂಡು ಹೃದಯ ವನ್ನು ಗೆದ್ದಿವೆ.

ಅವರ ಮಾತುಗಳನ್ನೇ ಉಲ್ಲೇಖಿಸುವುದಾದರೆ :

"ಸೀತೆ ದ್ರೌಪದಿಯಂತೆ ಪ್ರಪಂಚದ ಎಲ್ಲರ ಹೃದಯವನ್ನೂ ಗೆದ್ದಿದ್ದಾಳೆ. ಆದರೆ ಅವಳು ಮನೆಯ ದೀಪವೇ ಹೊರತು, ಜಗತ್ತಿನ ಜ್ವಾಲೆಯಲ್ಲ. ಅವಳಿಗೆ ಸಾರ್ವಜನಿಕ ಸಭೆಗಳು ಬೇಕಾಗಿಲ್ಲ. ಗರತಿಯಾದ ಅವಳಿಗೆ ಅವುಗಳ ಮೇಲೆ ಆಸಕ್ತಿಯಾಗಲಿ ಆಸೆ ಯಾಗಲಿ ಇಲ್ಲ. ವಾದ ಪ್ರತಿವಾದಗಳಿಗೂ, ಸಾರ್ವಜನಿಕ ಘರ್ಷಣೆಗಳಿಗೂ, ಜಗಳಗಳಿಗೂ ಆಕೆಗೂ ತುಂಬ ದೂರ. ಅವಳ ಮೈಯೆಲ್ಲ ಸಿಹಿ; ಖಾರವಿಲ್ಲ............... ......... ದ್ರೌಪದಿಯ ಬಗ್ಗೆ ಹೇಳಬೇಕಾದರೆ, ಅವಳು ಆಧುನಿಕ ಅಮೆರಿಕದ ಸ್ತ್ರೀ ಮುಖಂಡರು ತಾವು ಗುಲಾಮರೆಂದು ಭಾವಿಸುವಂತೆ ಮಾಡಬಲ್ಲವಳು. ಅವಳ ಸ್ವತಂತ್ರ ಚಿತ್ತವೃತ್ತಿಯ ಮೂಲವೇನೆಂದರೆ ಅವಳ ಬುದ್ಧಿ ಶಕ್ತಿ, ವಿವೇಚನೆ, ಜ್ಞಾನ, ರಾಜ

ಕೀಯ ಚತುರತೆ, ಧೈರ್ಯ, ಹೆಮ್ಮೆಯ ಗುಣ, ಸಮ್ಮೋಹಕ ವ್ಯಕ್ತಿತ್ವ. ಅವಳು ತನ್ನ ಗಂಡಂದಿರನ್ನು ನಿಂದಿಸಿದರೂ ಅವರು ತಪ್ಪು ತಿಳಿಯುವುದಿಲ್ಲ ; ಬೇರೆಯವರೂ ಅಷ್ಟೆ. ಅವಳು ದೋಷವಿಲ್ಲದವಳು. ಅಂತಹವರನ್ನು ಅವರ ಜನರೇ ಏಕೆ, ಎಲ್ಲರೂ ಪ್ರೀತಿಸುತ್ತಾರೆ, ಅಷ್ಟೇಕೆ ಪೂಜಿಸುತ್ತಾರೆ, ಗೌರವಿಸುತ್ತಾರೆ...... . ಜಗತ್ತು ತನ್ನ ಸಮಗ್ರತೆಯನ್ನು ಅವರಲ್ಲಿ ಕಾಣುತ್ತದೆ, ''

ಅವರ ಈ ಸಾಹಸದ ಮಾತುಗಳು ಹೆಂಗಸರನ್ನು ಕೋಮಲೆಯೆಂದೂ ಅಬಲೆಯೆಂದೂ ಭಾವಿಸುವ ಗಂಡಸರಿಗೆ ಆಶ್ಚರಿಯನ್ನುಂಟು ಮಾಡಬಹುದು. ಆದರೆ ರೆಡ್ಡಿಯವರ ಅಭಿಪ್ರಾಯದಲ್ಲಿ ಅವಳು, ಶೃಂಗಾರ ಕರುಣಗಳಿಂದ ರೌದ್ರ ಭಯಾನಕಗಳವರೆಗೆ ಎಲ್ಲ ಗುಣಗಳುಳ್ಳವಳು, ನಿಜವಾಗಿಯೂ ಅವಳು ರೆಡ್ಡಿಯವರ ಸಮಗ್ರ ಭಾವನೆಯ ವ್ಯಕ್ತಿಯಾಗಿದ್ದಾಳೆ.

ದ್ರೌಪದಿಯ ಅನಂತರ ಅವರ ಹೃದಯವನ್ನು ಆಕರ್ಷಿಸಿದ ಪಾತ್ರ ಭೀಮ. ಬಲಹೀನರಿಗೆ ಅವನು ನೀಡುವ ನೆರವು ಅವರಿಗೆ ಮೆಚ್ಚಿಗೆಯಾಗಿದೆ. ಅವನು ದ್ರೌಪದಿಗೆ ಎರಡನೆಯ ಮಾತಿಲ್ಲದೆ ಮಾಡುವ ಸಹಾಯವನ್ನು ಕುರಿತು ಬೇರೇನೂ ಹೇಳಬೇಕಿಲ್ಲ. ಸಾಮಾನ್ಯವಾದ ಹೇಳಿಕೆಗಳಲ್ಲಿ ದುರ್ಯೋಧನನು ಮಹಾಭಾರತದ ದುಷ್ಟ ಚತುಷ್ಟಯದಲ್ಲಿ ಒಬ್ಬನಾಗಿರಬಹುದು. ಆದರೆ ರೆಡ್ಡಿಯವರಿಗೆ ಮಾತ್ರ ಅವನು ರಂಗಸ್ಥಳದ ಪ್ರತಿನಾಯಕನಲ್ಲ; ಆತ್ಮಗೌರವ, ಗಂಡುತನವಿರುವ ದುರಂತನಾಯಕ. ಷೇಕ್ಸ್‌ಪಿಯರನ ದುರಂತನಾಯಕರಂತೆ ಅವನಿಗೂ ಅಹಂಕಾರ ಮತ್ತು ಈರ್ಷ್ಯೆಗಳೆಂಬ ಪ್ರಾಣಾಂತಕ ದೌರ್ಬಲ್ಯಗಳಿದ್ದವು. ಇದರಿಂದ ಗುಣಶೀಲ ವ್ಯಕ್ತಿಗಳನ್ನು ಎದುರಿಸಿದಾಗ ಅವನು ಅಪಜಯಕ್ಕೀಡಾಗಬೇಕಾಯಿತು.

ರಂಗನಾಥನ ರಚನೆಯೆಂದು ಜನಪ್ರಿಯವಾಗಿರುವ 'ರಂಗನಾಥರಾಮಾಯಣ'ವೆಂಬ ದ್ವಿಪದಿ ಛಂದಸ್ಸಿನ ಕೃತಿ ಮಹಾಭಾರತದ ಅನಂತರ ರೆಡ್ಡಿಯವರ ಗಮನವನ್ನು ಸೆಳೆದ ಪ್ರಾಚೀನ ತೆಲುಗು ಗ್ರಂಥ. ಇದರ ಕರ್ತೃತ್ವದ ವಿಷಯದಲ್ಲಿ ರೆಡ್ಡಿಯವರು ಜನಪ್ರಿಯ ಅಭಿಪ್ರಾಯಕ್ಕೂ ಪೂರ್ತಿ ಮನ್ನಣೆ ಕೊಡಲಿಲ್ಲ, ಸಾಂಪ್ರದಾಯಿಕ ಸಿದ್ಧಾಂತವನ್ನೂ ಒಪ್ಪಲಿಲ್ಲ. ಈ ವಿಷಯದ ಬಗೆಗೆ ತಮ್ಮ ನಿಲುವನ್ನು ವಿಸ್ತರಿಸುತ್ತಾ ಅವರು ಹೀಗೆನ್ನುತ್ತಾರೆ: "1919ರಲ್ಲಿ ನೆಲ್ಲೂರಿನಲ್ಲಿ ಭಾಷಣ ಮಾಡುವಾಗ ರಂಗನಾಥನನ್ನು ಕಲ್ಪಿತ ವ್ಯಕ್ತಿಯೆಂದೂ, ಅವನನ್ನು ಕುರಿತದ್ದು ಕಟ್ಟುಕತೆಯೆಂದೂ ತಳ್ಳಿಹಾಕಿದೆ, 'ರಂಗನಾಥ' ಎಂಬುದು ವ್ಯಕ್ತಿಯ ಹೆಸರೇ, ಸ್ಥಳನಾಮವೇ, ದೇವರ ಹೆಸರೇ ಎಂಬುದು ಖಚಿತವಾಗಿ ಯಾರಿಗೂ ಗೊತ್ತಿಲ್ಲ. ರಾಮಾಯಣದಲ್ಲೇ ಇರುವ ಪ್ರತ್ಯಕ್ಷಸಾಕ್ಷ್ಯವನ್ನು ಅಲ್ಲಗಳೆಯುವ ಸಾಕ್ಷ್ಯಾಧಾರವೂ ಲಭಿಸಿಲ್ಲ. ಗೋನಬುದ್ಧನ ಕರ್ತೃತ್ವವನ್ನು ತಿರಸ್ಕರಿಸುವುದೂ ನ್ಯಾಯಬದ್ಧವಲ್ಲ..."

ರಾಮಲಿಂಗಾರೆಡ್ಡಿಯವರ ಪ್ರಕಾರ ಇದರ ಕರ್ತೃ ಕಾಕತೀಯರಿಗೆ ಸಾಮಂತರಾಜನಾಗಿದ್ದ 13 ನೇ ಶತಮಾನದ ಗೋನಬುದ್ಧಾರೆಡ್ಡಿ. ಈತ ಕ್ರಿ. ಶ. 1210 ರ ಸುಮಾರಿ

ನಲ್ಲಿ ಹುಟ್ಟಿ ಸುಮಾರು 1240 ರಲ್ಲಿ ತನ್ನ ತಂದೆಯಾದ ವಿಟ್ಠಲಧರಣಿ ಭೂಪಾಲನ ಆದೇಶದಂತೆ ಈ ಕೃತಿಯನ್ನು ರಚಿಸಿದ. ಗ್ರಂಥದಲ್ಲಿರುವ ಆಧಾರಗಳಿಂದ, ಶಾಸನಾಧಾರದಿಂದ ರೆಡ್ಡಿಯವರು ಈ ನಿರ್ಣಯಕ್ಕೆ ಬಂದಿದ್ದಾರೆ. ರಂಗನಾಥ ಎಂಬ ಹೆಸರಿನ ವಿಷಯದಲ್ಲಿರುವ ಎರಡು ವಿವರಣೆಗಳಲ್ಲಿ ಒಂದನ್ನು ಅವರು ಒಪ್ಪಿದ್ದಾರೆ.

ಈ ಪುಸ್ತಕವನ್ನು ಆದರ ಲೇಖಕನಾದ ಬುದ್ಧ ಭೂಪತಿ ತನ್ನ ತಂದೆ ವಿಟ್ಠಲನಿಗೆ ಅರ್ಪಿಸಿದ್ದಾನೆ. ಈ ಹೆಸರು ಪಾಂಡುರಂಗನಿಂದ ಬಂದಿರುವುದರಿಂದ ಪುಸ್ತಕಕ್ಕೆ 'ರಂಗನಾಥ ರಾಮಾಯಣ' ವೆಂಬ ಹೆಸರು ಬರುವುದು ಸಾಧ್ಯ. ಇದು ಪ್ರಾಚೀನ ಪಂಥದ ವಿಮರ್ಶಕರಾದ ಆಂಧ್ರ ಸಾಹಿತ್ಯ ಪರಿಷತ್ತಿ (ಕಾಕಿನಾಡ) ನ ಜಯಂತಿ ರಾಮಯ್ಯ ಪಂತುಲು ಅವರ ಅಭಿಪ್ರಾಯ.

ಇನ್ನೊಂದು ವಿವರಣೆ ಹೀಗಿದೆ :

ತಂಜಾವೂರಿನ ರಾಜಾ ಶರಭೋಜಿ ಗ್ರಂಥಭಂಡಾರದಲ್ಲಿ ಈ ರಾಮಾಯಣದ 13 ತಾಳೆವೋಲೆ ಪ್ರತಿಗಳು ಕೆಲವಲ್ಲಿ ರಂಗನಾಥನ ಹೆಸರಿದೆ. ಉಳಿದವು ಬುದ್ಧ ಭೂಪಾಲನ ಹೆಸರನ್ನು ಹೇಳುತ್ತವೆ. ಈ ಕೃತಿಯ ಆರುಕಾಂಡಗಳಲ್ಲಿ ಒಂದೊಂದರ ಕೊನೆಯಲ್ಲೂ ಇರುವ ಪದ್ಯಗಳಿಂದ ರಾಮಲಿಂಗಾರೆಡ್ಡಿ ಒಂದು ನಿರ್ಣಯಕ್ಕೆ ಬಂದರು. ಈ ಪ್ರತಿಗಳನ್ನು ಕುಪ್ಪಯಮಂತ್ರಿ ಎಂಬ ಬ್ರಾಹ್ಮಣ ಲಿಪಿಕಾರ ಬರೆದಿದ್ದಾನೆ. ಇವನನ್ನು ಪ್ರತಿ ಮಾಡುವಂತೆ ಪ್ರೇರಿಸಿದವನು ರಾಮಭಕ್ತನಾದ ರಂಗಯ್ಯ. ಇವನಿಂದಲೇ ಕೃತಿಗೆ ರಂಗನಾಥ ರಾಮಾಯಣವೆಂಬ ಹೆಸರು ಬಂದಿತೆಂದೂ, ಆದರ ನಿಜವಾದ ಕರ್ತೃ ಗೋನ ಬುದ್ಧಾರೆಡ್ಡಿಯೆಂದು ರೆಡ್ಡಿಯವರು ಹೇಳಿದರು. ಕರ್ತೃತ್ವದ ನಿರ್ಣಯದಲ್ಲಿ ರೆಡ್ಡಿಯವರದು ದೃಢಾಭಿಪ್ರಾಯ.

ಸಂಶೋಧಕ ವಿದ್ವಾಂಸರಲ್ಲಿ ಈ ಸಿದ್ಧಾಂತ ಸಾರ್ವಜನಿಕ ಸಮ್ಮತಿಪಡೆದಿಲ್ಲ. ಇಂದಿಗೂ ಈ ಬಗ್ಗೆ ಕೊನೆಯಮಾತನ್ನು ಹೇಳಿದವರೂ ಯಾರೂ ಇಲ್ಲ. ಕೃತಿ ಸೌಂದರ್ಯದ ಬಗೆಗೆ, ಲೇಖಕನ ಸ್ವೋಪಜ್ಞತೆಯ ಬಗೆಗೆ ಎರಡಭಿಪ್ರಾಯವಿಲ್ಲ. ಪಿ. ಚೆಂಚಯ ಬರೆದ 'ದಿ ಹಿಸ್ಟರಿ ಆಫ್ ತೆಲುಗು ಲಿಟರೇಚರ್' (1928) ಗೆ ರಾಮಲಿಂಗಾರೆಡ್ಡಿಯವರ ಮುನ್ನುಡಿಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಎಲ್ಲರೂ ಒಪ್ಪುತ್ತಾರೆ:

"ಆಂಧ್ರದಲ್ಲಿ ವಾಲ್ಮೀಕಿ ರಾಮಾಯಣಗಳು ಹಲವಿವೆ. ಆದರೆ ತೆಲುಗು ರಾಮಾಯಣ ಒಂದೇ ಒಂದು, ಅದು ಗೋನಬುದ್ಧಾರೆಡ್ಡಿಯದು. ವಾಲ್ಮೀಕಿಯ ಮಹಾ ಕಾವ್ಯದಲ್ಲಿ ಜನಪದ ಐತಿಹ್ಯಗಳನ್ನು ಎಷ್ಟು ಅದ್ಭುತ ಕಲಾತ್ಮಕ ಶಕ್ತಿಯಿಂದ ಅವನು ಸೇರಿಸಿದ್ದಾನೆ ! ತೆಲುಗು ಪ್ರಜ್ಞೆಯ ಮೂಲಕ ಅವನು ಆ ಕಾವ್ಯವನ್ನು ರೂಪಾಂತರಗೊಳಿಸಿದ್ದಾನೆಂದು ಹೇಳಬಹುದು. ತೆಲುಗು ಭಾಷೆಯಲ್ಲಿ ಅವನ ಕಾವ್ಯಕ್ಕಿಂತ ಹೆಚ್ಚು ಜನಪ್ರಿಯವು ಆದ ರಾಮಾಯಣ ಇನ್ನೊಂದಿಲ್ಲ. ಇದು ಅಪೂರ್ವವಾದ, ತಡೆಯಲಾಗದ ರಸಾನಂದವನ್ನುಂಟು ಮಾಡುತ್ತದೆ."

ಇದು ಕೇವಲ ಅನುವಾದವಲ್ಲ ಎಂಬುದು ಅವರ ಅಭಿಪ್ರಾಯ. ಅನೇಕ ಭಾಗಗಳಲ್ಲಿ ಪುನರ್ ಸೃಷ್ಟಿಯಾಗಿದೆಯೆನ್ನಬಹುದು. ಈ ರಾಮಾಯಣದ ಸ್ವೋಪಜ್ಞತೆಯ ಗುಣಗಳನ್ನು ರಾಮಲಿಂಗಾರೆಡ್ಡಿ ಪಟ್ಟಿಮಾಡಿ ತೋರಿಸಿದ್ದಾರೆ :

1. ಬಿದಿರಿನ ಪೊದೆಯಲ್ಲಿದ್ದ ರಾಕ್ಷಸನನ್ನು ಆರಣ್ಯಕಾಂಡದಲ್ಲಿ ಲಕ್ಷ್ಮಣ ಕೊಂದನು;

2. ರಾವಣನ ತಾಯಿಯ ಪಾತ್ರಕಲ್ಪನೆ, ಅವಳ ಋಷಿಮಂತ್ರಿಗಳು ರಾವಣನಿಗೆ ಉಪದೇಶ ಮಾಡಿದ್ದು;

3. ಸುಲೋಚನೆಯ ಕರುಣಾಜನಕ ವೃತ್ತಾಂತ ;

4. ಹನುಮಂತನು ಸಂಜೀವಿನಿಯನ್ನು ತರಲು ಹೋದಾಗ ನಡೆದ ಪ್ರಸಂಗಗಳು;

5. ರಾವಣನ ಪಾತಾಳ ಹೋಮ ; ಮತ್ತು

6. ರಾಮೇಶ್ವರದ ಐತಿಹ್ಯಗಳು

ಪಾತ್ರಗಳು ಉಜ್ಜ್ವಲವಾಗಿ ಮೆರೆಯುವಂತೆ ಪುನರ್ನಿರ್ಮಿಸಿದ ಈ ರಾಮಾಯಣದ ಲೇಖಕನ ಪ್ರಜ್ಞಾವಿಶೇಷವನ್ನು ಹೊಗಳುವಾಗ, ನಮ್ಮನ್ನು ಸೂರೆಗೊಳ್ಳುವ ರಾವಣನ ಪಾತ್ರದ ಬಗ್ಗೆ ರೆಡ್ಡಿಯವರು ನಮ್ಮ ಗಮನ ಸೆಳೆಯುತ್ತಾರೆ :

"ರಾವಣ ಕೇವಲ ರಾಕ್ಷಸನಾಗಿ ಉಳಿಯದೆ ನೀತಿಯ ಒಗಟಾಗಿ ನಿಲ್ಲುತ್ತಾನೆ. ಸೀತೆಯನ್ನು ಅವನು ಅಪಹರಿಸಲು ಕಾರಣವೇನು ? ಸಾಮಾನ್ಯವಾದ ಹೇಳಿಕೆಯ ಪ್ರಕಾರ ಇಂದ್ರಿಯಸುಖ, ಪ್ರತೀಕಾರವಾಂಛೆ ಕಾರಣಗಳು. ಆದರೆ ಗೋನಬುದ್ಧಾರೆಡ್ಡಿ ಕಾಮಾಂಧಕಾರದ ಹಿಂದೆ ಮಸುಕಾಗಿ ಮಿಂಚುತ್ತಿರುವ ಪವಿತ್ರೋದ್ದೇಶವನ್ನು ವ್ಯಕ್ತಮಾಡುತ್ತಾನೆ. ರಾವಣನು ಬೇಕೆಂದೇ ರಾಮನನ್ನು ಯುದ್ಧಕ್ಕೆ ಪ್ರೇರಿಸುತ್ತಾನೆ. ಇದರಿಂದ ದೇವರ ಕೈಯಲ್ಲಿ ಸಾವನ್ನಪ್ಪಿ ಮುಕ್ತಿಪಡೆಯಬಹುದೆಂದೂ ಜಗತ್ತಿನ ವ್ಯಾಪಾರವನ್ನು ಕೊನೆಗಾಣಿಸಿ ದಿವ್ಯ ಸ್ಥಾನವನ್ನು ಪಡೆಯಬಹುದೆಂದೂ ಅವನ ಭಾವನೆ..."

ವಿಭೀಷಣನಿಗೆ ಕುಂಭಕರ್ಣ ಹೇಳಿದ ಕೊನೆಯ ಮಾತುಗಳನ್ನು "ಅದ್ಭುತ ಸೌಂದರ್ಯ ಮತ್ತು ಕರುಣಗಳಭಾಗ" ವೆಂದು ಹೊಗಳಿ, ರೆಡ್ಡಿಯವರು ಹೀಗೆ ಮುಕ್ತಾಯ ಗೊಳಿಸಿದ್ದಾರೆ.

"ಒಟ್ಟಿನಲ್ಲಿ, ಗೋನಬುದ್ಧಾರೆಡ್ಡಿ ಆಂಧ್ರ ಗ್ರಾಮೀಣ ಜನರ ಅದ್ಭುತ ಭಾವನಾ ಶಕ್ತಿಯನ್ನು ಪ್ರಸಾರ ಮಾಡಿದಷ್ಟು ವಾಲ್ಮೀಕಿಯನ್ನು ಅನುವಾದಮಾಡಿಲ್ಲ."

'ರಂಗನಾಥರಾಮಾಯಣ' ರೆಡ್ಡಿಯವರ ಅಭಿಪ್ರಾಯದಲ್ಲಿ ಪಶ್ಚಿಮಾಂಧ್ರ ಸಾಹಿತ್ಯಕ ನಿಧಿಗಳಲ್ಲೊಂದು. ಇತರ ಕೃತಿಗಳಲ್ಲಿ ಲಾವಣಿಗಳಾದ 'ಪಲ್ನಾಟಿವೀರಚರಿತ್ರೆ', 'ಕಾಟಮರಾಜು ಕಥೆ' ಮುಂತಾದುವನ್ನು, ಅನೇಕ ಯಕ್ಷಗಾನಗಳನ್ನು, ದ್ವಿಪದಿಗಳನ್ನು, ವೀರಶೈವಸಾಹಿತ್ಯವನ್ನು ಅವರು ಸೇರಿಸಿದ್ದಾರೆ. ಪ್ರವಾದಿಗಳ ಅಂತರ್ಮುಖತೆ, ಸಾಮಾಜಿಕ ಸುಧಾರಣೆಯ ಶ್ರದ್ಧೆ ಇದ್ದ ಮಹಾನ್-ಸಂತ ಕವಿಗಳಾದ ವೇಮನ ಹಾಗೂ ಪೋತುಲೂರಿ ವೀರ ಬ್ರಹ್ಮಂ-ಈ ಪ್ರಾಂತ್ಯದವರೇ. ರೆಡ್ಡಿಯವರ ಅಭಿಪ್ರಾಯದಲ್ಲಿ ಜನಪ್ರಿಯ ತೆಲುಗು

ದೇಸಿಕಾವ್ಯ ರಾಯಲಸೀಮ ಮತ್ತು ತೆಲಂಗಾಣ ಪ್ರಾಂತ್ಯಗಳು ಸೇರಿದ ಪಶ್ಚಿಮಾಂಧ್ರ ದಲ್ಲಿ ಬೆಳೆಯಿತು. ವಿದ್ಯಾವಂತರ ಶಿಷ್ಟವಾದ ಮಾರ್ಗ ರೀತಿಯ ತೆಲುಗುಕಾವ್ಯ, ಪೂರ್ವಾಂಧ್ರ (ಅಥವಾ ಸರ್ಕಾರ್ ಜಿಲ್ಲೆಗಳು) ದಲ್ಲಿ ಬೆಳೆಯಿತು. ಬೆಳವಣಿಗೆಯಲ್ಲಿ ಈ ಅಂಶಕ್ಕೆ ಕಾರಣವನ್ನು ಹುಡುಕುತ್ತಾ ರೆಡ್ಡಿಯವರು ಈ ಎರಡು ಪ್ರಾಂತ್ಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನಿಸುತ್ತಾರೆ.

''ಈ ಎರಡು ಪ್ರಾಂತ್ಯಗಳಲ್ಲಿ ವ್ಯತ್ಯಾಸವಿದ್ದರೆ, ಅದಕ್ಕೆ ಕಾರಣ ತೀರಪ್ರಾಂತ್ಯಗಳು ಸಹಜವಾಗಿ ಮತ್ತು ಸಮರ್ಪಕವಾಗಿ ಪಾಶ್ಚಾತ್ಯ ಪ್ರಭಾವಕ್ಕಿಂತ ಆರ್ಯ ಪ್ರಭಾವಕ್ಕೆ ಒಳಗಾಗಿವೆ ಎಂದು ಭಾವಿಸುತ್ತೇನೆ. ಈ ಪ್ರಭಾವಕ್ಕೆ ಒಳಗಾಗದ ಭಾಗಗಳು ಬಹುಮಟ್ಟಿಗೆ ದ್ರಾವಿಡ ಗುಣಗಳಿಂದ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡಿವೆ. ಈ ವ್ಯತ್ಯಾಸ ಎರಡು ಭಾಗಗಳ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿದೆಯೆಂಬುದು ನನ್ನ ಅನಿಸಿಕೆ. ಸ್ಥೂಲವಾಗಿ ಹೇಳುವುದಾದರೆ, ಸರ್ಕಾರ್ ಜಿಲ್ಲೆಗಳ ಸಾಹಿತ್ಯ ಇತ್ತೀಚಿನ ವರೆಗೆ– ಎಂದರೆ ಜನರ ಮನಸ್ಸು ಮತ್ತು ದೃಷ್ಟಿಕೋನಗಳ ಮೇಲೆ ಆಧುನಿಕ ನಾಗರಿಕತೆ ಪ್ರಭಾವ ಬೀರುವವರೆಗೆ—ಸಂಸ್ಕೃತದ ಅನುವಾದಗಳಿಂದ ಅನುಕರಣಗಳಿಂದ ಕೂಡಿತ್ತು. ಪಶ್ಚಿಮಾಂಧ್ರದ ಸಾಹಿತ್ಯದಲ್ಲಿ ಹೆಚ್ಚಿನ ಹುರುಪು, ಸ್ವಂತಿಕೆ, ಸ್ವದೇಶೀಯತೆ ಕಂಡು ಬರುತ್ತದೆ.''

ಮಾತೃಭೂಮಿಯ ಪ್ರೇಮ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕ ವಾಗಿಯೋ ರೆಡ್ಡಿಯವರ ಪ್ರಾಚೀನ ಸಾಹಿತ್ಯಿಕ ಬೆಳವಣಿಗೆಯ ವಿಶ್ಲೇಷಣೆಯಲ್ಲಿ ಪ್ರವೇಶಿಸಿತೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಇನ್ನೊಂದು ಕಡೆ ರೆಡ್ಡಿಯವರು, ಇಂತಹ ಭಾವುಕತೆಗಳು ಇಂಗ್ಲೆಂಡಿನಲ್ಲಿ ಸರ್ವೇಸಾಮಾನ್ಯವೆಂದಿದ್ದಾರೆ. ಎಸ್ಸೆಕ್ಸ್, ಸಸ್ಸೆಕ್ಸ್, ಮಿಡಲ್‌ಸೆಕ್ಸ್, ವಾರ್‌ವಿಕ್‌ಷೈರ್, ಗ್ಲೌಸೆಸ್ಟರ್‌ಷೈರ್ ಇತ್ಯಾದಿ ಭಾವುಕತೆ ಗಳಿಗೆ ಆ ದೇಶದ ಮುಖಂಡರೂ ಒಳಗಾಗಿದ್ದಾರೆ. ರಾಷ್ಟ್ರೀಯ ಭಾವನೆಗೆ ಧಕ್ಕೆಯಾಗದ ವರೆಗೂ ಈ ರೀತಿಯ ಭಾವುಕತೆಗಳಿಂದ ಕೆಡಕೇನೂ ಆಗುವುದಿಲ್ಲ. ರೆಡ್ಡಿಯವರು ಆಂಧ್ರದ ಸಮಕಾಲೀನ ಪರಿಸ್ಥಿತಿಯ ಬಗೆಗೆ ಮಾಡಿದ ವ್ಯಾಖ್ಯಾನವನ್ನು ನೋಡಿದಾಗ, ಅವರ ಈ ಅಭಿಪ್ರಾಯ ಸಾಹಿತ್ಯಿಕ ಮತ್ತು ಐತಿಹಾಸಿಕ ವಿಷಯಗಳಲ್ಲಿನ ರೆಡ್ಡಿಯವರ ತೀರ್ಪುಗಳ ಮೇಲೆ ಪ್ರಭಾವ ಬೀರಿಲ್ಲವೆಂಬುದು ಖಚಿತವಾಗುತ್ತದೆ :

''ಇಂದು ವಸ್ತುಸ್ಥಿತಿ ಬದಲಾಗಿದೆ. ಸಾಂಸ್ಕೃತಿಕವಾಗಿ ನೋಡಿದಾಗ, ಹೊಸ ಪ್ರಭಾವಗಳಿಗೆ ಬೇಗನೆ ಒಳಗಾಗುವ ತೀರ ಪ್ರಾಂತಗಳು ಪ್ರಗತಿ ಪಥದಲ್ಲಿವೆ. ಸಾಮಾಜಿಕ ಸುಧಾರಣೆಗಳಿಗೂ, ಇತರ ರಾಷ್ಟ್ರೀಯ ಚಳುವಳಿಗಳಿಗೂ ಇವು ನೆಲೆಯಾಗಿವೆ. ಸಾಹಿತ್ಯ ದಲ್ಲಿ, ಅಸಾಧಾರಣ ಕಲಾಪಂಥಗಳಲ್ಲಿ, ಪದ್ಧತಿಗಳಲ್ಲಿ ಅವರು ಹೊಸ ವೈವಿಧ್ಯವನ್ನೂ ಸೌಂದರ್ಯವನ್ನೂ ತರುತ್ತಿದ್ದಾರೆ. ಐರೋಪ್ಯ ನಾಗರಿಕತೆ ಒಂದುಕಡೆ, ಬಂಗಾಳಿ ಮತ್ತು ಇತರ ನವೋದಯ ಚಳುವಳಿಗಳು ಇನ್ನೊಂದು ಕಡೆ ಅವರ ಮೇಲೆ ಪ್ರಭಾವ ಬೀರಿವೆ.

ಜೀವಂತ ಆಸಕ್ತಿಗಳನ್ನು ಕುರಿತು ಹೇಳಬೇಕಾದರೆ ಐಹಿಕ ಅಥವಾ ಆಮುಷ್ಮಿಕ ವಿಷಯಗಳಲ್ಲಿ, ಸಾಮಾನ್ಯ ಸಾಂಸ್ಕೃತಿಕ ಪ್ರಗತಿಯಲ್ಲಿ ಅವರು ಅತ್ಯುನ್ನತ ಗೌರವಸ್ಥಾನ ಪಡೆದಿದ್ದಾರೆ.''

ಪ್ರಾದೇಶಿಕ ಅಭಿಪ್ರಾಯಗಳನ್ನು ಬಿಟ್ಟು, ಆಧುನಿಕ ತೆಲುಗು ಸಾಹಿತ್ಯದ ಬಗ್ಗೆ ಸಾಮಾನ್ಯವಾಗಿ ಮಾತನಾಡುತ್ತಾ, ಅದು ಮಧ್ಯಕಾಲೀನ, ಪ್ರಬಂಧಗಳ ಕೃತಕತೆ, ನಿಸ್ಸಾರ ಸೀಮೆಗಳಿಂದ ಎದ್ದು ಬಂದುದಕ್ಕೆ ರೆಡ್ಡಿಯವರು ಸಂತೋಷ ವ್ಯಕ್ತಪಡಿಸಿದರು. ಸಾಹಿತ್ಯರೂಪ ಮತ್ತು ಭಾಷೆಯ ವಿಷಯದಲ್ಲಿ ರೆಡ್ಡಿಯವರು ದೃಢವಾಗಿ ಪ್ರಾಚೀನ ಪಂಥಕ್ಕೆ ಸೇರಿದವರಾದರೂ, ಬೆರಗುಗೊಳಿಸುವ ರೀತಿಯಲ್ಲಿ ವೈವಿಧ್ಯಮಯ ಪ್ರಕಾರಗಳು ರೂಪುಗೊಳ್ಳುತ್ತಿದ್ದ ರೀತಿಯಿಂದ ಉತ್ಸಾಹಗೊಂಡರು.

''ನನ್ನದೊಂದು ಪರಿಶೀಲನೆಯನ್ನು ಮುಂದಿಡಬೇಕಾದರೆ, ನನ್ನ ಅಭಿಪ್ರಾಯದಲ್ಲಿ ದೃಢವಾದ ರಾಷ್ಟ್ರೀಯತೆಯು, ಮತ್ತು ಬಂಗಾಳಿ ಸಾಹಿತ್ಯದ ಪ್ರಭಾವದಿಂದ ತೆಲುಗು ಸಾಹಿತ್ಯದಲ್ಲಿ ತೆಲುಗು ಆತ್ಮ ತನ್ನನ್ನು ತಾನು ಕಂಡುಕೊಳ್ಳುತ್ತಿದೆ. ವಿವಿಧ ಭಾವನೆಗಳನ್ನು, ವಿವಿಧ ರೀತಿಯಲ್ಲಿ ವ್ಯಕ್ತಮಾಡುತ್ತಿದೆ. ಸಮಕಾಲೀನ ಪ್ರಜ್ಞಾವಂತ ವ್ಯಕ್ತಿಗಳ ಸಂಖ್ಯೆ ಹೆಚ್ಚಾಗಿದೆ, ಸಾಹಿತ್ಯದಲ್ಲಿ ವೈವಿಧ್ಯವೂ ಹೆಚ್ಚಾಗಿದೆ. ಸರಳಾಭಿವ್ಯಕ್ತಿ, ಪ್ರಾಮಾಣಿಕ ಭಾವತೀವ್ರತೆ, ನೈಸರ್ಗಿಕ ಅಲಂಕಾರಗಳು ಸಾಹಿತ್ಯ ಧೋರಣೆಯಲ್ಲಿ ಹೆಚ್ಚುತ್ತಿವೆ. ನಮ್ಮ ಸಾಹಿತ್ಯ ಅಸಹಜತೆಯಿಂದ 'ಪ್ರಬಂಧ' ಕಾಲದ ಮಾನಸಿಕ ಪ್ರವೃತ್ತಿಗಳಿಂದ ಹೊರ ಬರುತ್ತಿದೆ. 'ಪ್ರಬಂಧ' ಕಾಲವನ್ನು ನಮ್ಮ ಕ್ಷೀಣಯುಗವೆಂದು ಸಾಮಾನ್ಯವಾಗಿ ಹೇಳಬಹುದು.''

ಇದೇ ರೀತಿಯ ಭರವಸೆಯ ಚಿತ್ತದಿಂದ ಅವರು ಪ್ರಯೋಗಾತ್ಮಕ ಸಲಹೆಯೊಂದನ್ನು ನೀಡಿದ್ದಾರೆ :

''ಯಾರಾದರೊಬ್ಬ ಸಮರ್ಥ ವಿದ್ವಾಂಸನು, ಅನುಕಂಪ, ಯೋಚನಾಪರತೆಯುಳ್ಳವನು, ಸಾಮಾಜಿಕ ನಾಟಕ, ಭಾವಗೀತೆ, ಕಥನಗೀತೆ, ವ್ಯಂಗ್ಯರಚನೆಗಳು, ಸಾಮಾಜಿಕ ಮತ್ತು ಮನೋವೈಜ್ಞಾನಿಕ ಕಾದಂಬರಿಗಳು, ಹಾಸ್ಯ ಕತೆಗಳು, ಐತಿಹಾಸಿಕ ರಚನೆಗಳು—ಮುಂತಾದ ಕಳೆದ 25 ವರ್ಷಗಳ ಸಾಹಿತ್ಯವನ್ನು ಕುರಿತು ಸಮಗ್ರ ಸಮಕಾಲೀನ ಸಾಹಿತ್ಯ ಚರಿತ್ರೆಯೊಂದನ್ನು ಬರೆಯಬೇಕೆಂಬುದು ನನ್ನ ಅಭಿಲಾಷೆ ''

ಅವರಿಗೆ ಅನುಕಂಪ ಮತ್ತು ಯೋಚನಾಪರತೆ—ಈ ಎರಡೂ ಇದ್ದವು. ಆದರೆ ವ್ಯವಧಿ ಮತ್ತು ಶಕ್ತಿ ಇಲ್ಲದಿದ್ದುದು ದುರದೃಷ್ಟ. ವಿಮರ್ಶಕರಾಗಿ, ಸಾಹಿತ್ಯದ ಬಗೆಗಿನ ಯೋಚನೆಯನ್ನು ಸಾಂಪ್ರದಾಯಿಕ ಸೂಕ್ಷ್ಮ ಪಾಂಡಿತ್ಯದ ತುಕ್ಕಿನಿಂದ ಬಿಡುಗಡೆ ಮಾಡಿಸಿದ್ದಾರೆ. ಗಂಭೀರ ವಿದ್ಯಾರ್ಥಿಗೆ ಅವರು ಹೊಸ ದೃಷ್ಟಿಕೋನವನ್ನು ನೀಡಿದರು; ಪ್ರಜ್ಞಾವಂತ ವಿಮರ್ಶಕನಿಗೆ ಹೊಸ ಮೌಲ್ಯಮಾಪನದ ಅಳತೆಗೋಲನ್ನು ನೀಡಿದ ಹೊಸ ವಿಮರ್ಶಕರಲ್ಲಿ ಇವರು ಮೊದಲಿಗರೆಂಬುದು ನಿಜ.

# 9 ಪ್ರಬಂಧಕಾರರು

ಸಂವೇದನಾಶೀಲ ಕವಿಯು, ತೀಕ್ಷ್ಣಬುದ್ಧಿಯ ವಿಮರ್ಶಕರು ಆದ ರೆಡ್ಡಿ ಕುಶಲ ಪ್ರಬಂಧಕಾರರೂ ಆಗಿದ್ದಾರೆ. ಅವರು ಸಾಹಿತ್ಯವಿಮರ್ಶಕರು ಮಾತ್ರವಲ್ಲದೆ ಜೀವನದ ವಿಮರ್ಶಕರೂ ಆಗಿದ್ದಾರೆ. ಅವರು ಬರೆದದ್ದು ಕಡಿಮೆಯಾದರೂ ವಿಷಯ ವೈವಿಧ್ಯ ದಿಂದ ಕೂಡಿದೆ. ಪ್ರಬಂಧಕಾರರಾಗಿ ಅವರು ತಮ್ಮ ಕಲಾಕೃತಿಗಳಿಗೆ ಹಿತಮಿತಶೈಲಿ, ಬೇಕನ್ನಿನ ಅಡಕವಾದ ನಾಣ್ಣುಡಿಯ ರೀತಿ, ಸೂತ್ರಪ್ರಾಯ ರಚನೆಗಳನ್ನು ಅಳವಡಿಸಿ ದ್ದಾರೆ. ತೆಳುವಾದ ರೀತಿಯಲ್ಲಿ ವೈಯಕ್ತಿಕ ಪ್ರಬಂಧಗಳನ್ನು ಬರೆಯುವ ಲ್ಯಾಂಬ್, ಹ್ಯಾಜ್ಲಿಟ್, ಲ್ಯೂಕಾಸ್, ಗಾರ್ಡಿನರ್‌ಗಳಂತೆ ರೆಡ್ಡಿಯವರು ರಚಿಸಿಲ್ಲ. ಆದರೂ ಮಾಂಟೆಗ್ನೆಯನ್ನು ನೆನಪಿಗೆ ತರುವಂತೆ ವಿಷಯದ ಚರ್ಚೆಯಲ್ಲಿ ಅನೌಪಚಾರಿಕ ರೀತಿ ಯಿಂದ ಅದರ ಸಹಜವಾದ ಭಾರವನ್ನು ಕಡಮೆ ಮಾಡಿ ಬರೆಯುತ್ತಿದ್ದರು.

ರೆಡ್ಡಿಯವರು ಬರೆದ ಹೆಚ್ಚಿನ ಪ್ರಕಟಿತ ಪ್ರಬಂಧಗಳನ್ನು 'ವ್ಯಾಸಮಂಜರಿ' ಎಂಬ ಸುಮಾರು 200 ಪುಟಗಳ ಸಂಕಲನದಲ್ಲಿ ನೋಡಬಹುದು. ಅವುಗಳಲ್ಲಿ ಬಹು ಪಾಲು ಬೇರೆಯವರ ಪುಸ್ತಕಗಳಿಗೆ ಬರೆದ ಪೀಠಿಕೆಗಳು ಅಥವಾ ಮುನ್ನುಡಿಗಳು ಇಲ್ಲವೆ ಒಬ್ಬ ಕವಿ ಅಥವಾ ಆಶ್ರಿತ ರಾಜನ ನೆನಪಿಗಾಗಿ ಯಾವುದಾದರು ಮುಖ್ಯ ಸಂದರ್ಭ ದಲ್ಲಿ ಮಾಡಿದ ಭಾಷಣಗಳು. ಅವರ ಭಾಷಣಗಳು ಬರೆದು ಓದಿದ ಪ್ರಬಂಧಗಳಂತಿವೆ. ಮೆಕಾಲೆಯವರಂತೆ ಪುಸ್ತಕದಲ್ಲಿರುವಂತೆ ಮಾತನಾಡದಿದ್ದರೂ, ಗ್ರಂಥಸ್ಥಶೈಲಿಯನ್ನು ಮಾತ್ರ ರೆಡ್ಡಿಯವರು ಬಿಡಲಿಲ್ಲ. ಸಡಿಲವಾದ ಯೋಚನೆ, ತಾತ್ಸಾರದ ಬರವಣಿಗೆಗ ಳನ್ನು ರೆಡ್ಡಿಯವರು ಕೈಬಿಟ್ಟರು. ಈ ವಿಷಯದಲ್ಲಿ ಅವರಿಗೆ ತೆಲುಗು ಅಥವಾ ಇಂಗ್ಲಿಷ್ ಎಂಬ ವ್ಯತ್ಯಾಸವೇ ಇರಲಿಲ್ಲ.

ಇಪ್ಪತ್ತಕ್ಕೂ ಕಡಮೆ ಇರುವ ಈ ಪ್ರಬಂಧಗಳು ಪ್ರಾಚೀನ ಸಾಹಿತ್ಯದಿಂದ ಸಮ ಕಾಲೀನ ಕಾವ್ಯದವರೆಗೆ, ಇತಿಹಾಸ ಮತ್ತು ಧರ್ಮದಿಂದ, ಶಿಕ್ಷಣ ಹಾಗೂ ಸಮಾಜ ವಿಜ್ಞಾನದವರೆಗೆ ವಿಸ್ತಾರಗೊಂಡಿವೆ. ವಸ್ತುವಿಗೆ ಮತ್ತು ಸಂದರ್ಭದ ಅಗತ್ಯಕ್ಕೆ ತಕ್ಕಂತೆ ವಾದಮಾಡುವ ರೀತಿಯಲ್ಲೋ, ಸಣ್ಣ ಪುಟ್ಟ ಕಥೆಗಳ ರೂಪದಲ್ಲೊ, ಭಾವನಾತ್ಮಕ ವಾಗಿಯೋ, ತಾತ್ತ್ವಿಕವಾಗಿಯೋ, ಹೇಳುವ ರೀತಿ ಅವರದು. ಆದರೆ ಅವರ ನಿರೂಪಣೆ ಯಾವಾಗಲೂ ಪ್ರಾಥಮಿಕ ಸೂತ್ರಗಳನ್ನು ಅನುಸರಿಸಿ, ಸಮಕಾಲೀನ ಸಮಸ್ಯೆಗಳ ಸೂಕ್ಷ್ಮಪ್ರತಿ ಸ್ಪಂದನೆಯೊಂದಿಗೆ ಇರುತ್ತಿತ್ತು.

ರಾಜರಾಜ ನರೇಂದ್ರ (ತೆಲುಗಿನ ಆದಿಕವಿಯಾದ ನನ್ನಯ ಭಟ್ಟನ ಪೋಷಕನಾದ ಚಾಳುಕ್ಯರಾಜ) ನನ್ನು ಕುರಿತ ಪ್ರಬಂಧ ರಾಜಮಂಡ್ರಿಯಲ್ಲಿ ನಡೆದ ವಾರ್ಷಿಕೋತ್ಸವ ಸಂದರ್ಭದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಮರುಮುದ್ರಣವಾಗಿದೆ. ಈ ಪ್ರಬಂಧದ ಹೆಚ್ಚಿನ ಭಾಗದಲ್ಲಿ ಮಹಾಭಾರತದ ತೆಲುಗು ರೂಪ ರಚಿತವಾಗಲು ನೆರವಾದ ಪರಿಸ್ಥಿತಿ

ಗಳು, ಆದ್ಯ ಪ್ರವರ್ತಕನಾದ ನನ್ನಯ ಅದನ್ನು ರಚಿಸಿದ ರೀತಿಯ ಬಗೆಗೆ ಹೇಳಲಾಗಿದೆ. ತಮ್ಮ ಮುಖ್ಯ ಪರಿಶೀಲನೆಗೆ ಮುನ್ನುಡಿಯಾಗಿ ನಮ್ಮ ಐತಿಹಾಸಿಕ ಪ್ರಜ್ಞೆ ಅಥವಾ ಅಭಾವದ ಬಗೆಗೆ ರೆಡ್ಡಿಯವರು ಹೀಗೆ ಹೇಳಿದರು :

"...ಪುರಾಣದ ನಾಯಕರನ್ನು ಪೂಜಿಸುವುದು ನಮ್ಮ ಸಂಪ್ರದಾಯದ ಭಾಗವಾಗಿದೆ. ಆದರೆ ನಾವು ಐತಿಹಾಸಿಕ ಪಾತ್ರಗಳನ್ನು ನೆನಪಿಟ್ಟುಕೊಳ್ಳುವುದಿಲ್ಲ. ಐತಿಹಾಸಿಕ ಸತ್ಯಗಳನ್ನು ಜ್ಞಾಪಿಸಿಕೊಳ್ಳಲು, ಜನಪ್ರಿಯಗೊಳಿಸಲು ನೆರವಾಗುವ ಹಬ್ಬಗಳನ್ನು ಆಚರಿಸಲು ನೀವು ಮುಂದಿರುತ್ತೀರಿ. ನಿಮ್ಮನ್ನು ಮಿಕ್ಕವರೆಲ್ಲರೂ ಅನುಸರಿಸಲಿ ! ಬೇರೆ ಲೋಕದ ಲಾಭಕ್ಕಾಗಿ ಏನೇನನ್ನೋ ಮಾಡುವ ನಾವು ಈ ಜಗತ್ತಿನ ಒಳಿತಿಗಾಗಿ ಹಬ್ಬಗಳನ್ನೇಕೆ ಆಚರಿಸುವುದಿಲ್ಲವೆಂದು ನನಗೆ ಆಶ್ಚರ್ಯವಾಗುತ್ತದೆ. ಇದು ನಮಗಿರುವ ಐತಿಹಾಸಿಕ ಪ್ರಜ್ಞೆಯ ಅಭಾವವನ್ನು ಸೂಚಿಸುತ್ತದೆಯೋ ? ಇನ್ನು ಮೇಲೆ ನಾವು ಇದನ್ನು ಬಗೆಹರಿಸಿಕೊಳ್ಳೋಣ !"

ನನ್ನಯನ ಕಲೆಗಾರಿಕೆಯ ಬಗೆಗೆ ಅವರು ಹೀಗೆ ಹೇಳುತ್ತಾರೆ:

"ನನ್ನಯ ಪ್ರಾಚೀನ ತೆಲುಗು ಕಾವ್ಯಕ್ಕೆ ಮಾತ್ರವಲ್ಲದೆ, ತೆಲುಗು ಗದ್ಯಕ್ಕೂ ಮಾರ್ಗದರ್ಶಕನೆಂದು ಹೇಳಬೇಕು. ಅವನಷ್ಟು ಒಳ್ಳೆಯ ತೆಲುಗು ಗದ್ಯವನ್ನು ಇನ್ನಾರೂ ಬರೆದಿಲ್ಲ. ಚಿನ್ನಯಸೂರಿ ತಮ್ಮ ಸುಂದರ ಕೃತಿಯಾದ 'ಮಿತ್ರಲಾಭಮು'ವನ್ನು ಇದೇ ರೀತಿಯಲ್ಲಿ ರೂಪಿಸಿದರೆಂದು ಕಾಣುತ್ತದೆ."

ರೆಡ್ಡಿಯವರು 'ಅಪೂರ್ವ ಸಂಘಸಂಸ್ಕರಣ' (ಶ್ರೀ ಗೋಪಾಲರಾವ್ ಅವರದ್ದು) ಎಂಬ ಪದ್ಯಕೃತಿಗೆ ಬರೆದ ಮುನ್ನುಡಿಯಲ್ಲಿ ವಿಡಂಬನ ಸಾಹಿತ್ಯದ ಬಗೆಗೆ ಅವರಿಗಿರುವ ಅಭಿಪ್ರಾಯಗಳನ್ನು ಓದುಗರೊಂದಿಗೆ ಹಂಚಿಕೊಂಡರು. ಅವರ ಹೇಳಿಕೆ ಹೀಗಿದೆ :

"ವಿಡಂಬನ ಕೃತಿಗಳು ಭಾರತದಲ್ಲಿ ಹೆಚ್ಚಾಗಿ ಕಾಣುವುದಿಲ್ಲ. ಮೃದು ಹಾಸ್ಯ ನಮಗೆ ಸಹಜವಲ್ಲವೋ ಏನೋ ! ನಮ್ಮಲ್ಲಿ ವಿಸ್ತೃತ ಹಾಸ್ಯವೇನೋ ಇದೆ ; ಆದರೆ ಅದನ್ನು ಅಪಹಾಸ್ಯದಿಂದ ಬೇರೆ ಮಾಡುವುದು ಕಷ್ಟವಾಗುತ್ತದೆ. ವಿಡಂಬನದ ಗುರಿ ಧರ್ಮ, ಸಮಾಜ, ಅನೇಕರಿಗೆ ಸಾಮಾನ್ಯವಾದ ಭಾವಗಳು, ಕೊನೆಗೆ ಪ್ರತ್ಯೇಕ ಪುರುಷರು ಅಥವಾ ಸ್ತ್ರೀಯರು–ಏನಾದರೂ, ಯಾರಾದರೂ ಆಗಬಹುದು. ಇಂಗ್ಲಿಷ್ ಲೇಖಕರಾದ ಸ್ವಿಫ್ಟ್ ತನ್ನ ಪ್ರಭಾವಶಾಲಿ ಪುಸ್ತಕಗಳಲ್ಲಿ ಮಾನವ ಸ್ವಭಾವವನ್ನು ಒಟ್ಟಿನಲ್ಲಿ ತೀವ್ರವಾಗಿ ಟೀಕಿಸಿದ್ದಾರೆ...ಶ್ರೀ ವೀರೇಶಲಿಂಗಂ ತಮ್ಮ 'ಸತ್ಯರಾಜಾ ಪೂರ್ವದೇಶ ಯಾತ್ರಲು' ವನ್ನು ಸ್ವಿಫ್ಟನ ಕೃತಿಯ ಆಧಾರದಿಂದಲೇ ರೂಪಿಸಿದ್ದಾರೆ. ಆದರೆ ಅವರು ಅಷ್ಟು ಕ್ರೂರತೆಯನ್ನು ತೋರದಿರುವುದು ನಮ್ಮ ಸುದೈವವೆನ್ನಬೇಕು (ಹೆಚ್ಚಿನ ವಿವರಗಳಿಗೆ ಅನುಬಂಧವನ್ನು ನೋಡಿ).

ಪ್ರಸಿದ್ಧ ಇತಿಹಾಸಜ್ಞರು, ಶಾಸನತಜ್ಞರೂ ಆದ ಎಂ. ಸೋಮಶೇಖರಶರ್ಮರ 'ಆಂಧ್ರ ವೀರುಲು' ಎಂಬ ಪುಸ್ತಕಕ್ಕೆ ಪೀಠಿಕೆ ಬರೆಯುತ್ತಾ ದೇಶಭಕ್ತಿ ಮತ್ತು ಇತಿಹಾಸ

ಜ್ಞಾನಗಳ ಸಂಬಂಧವನ್ನು ಕುರಿತು ಚರ್ಚಿಸುತ್ತಾ ತಮ್ಮ ಚಿಂತನೆಯನ್ನು ಹೀಗೆ ಮುಂದಿಟ್ಟರು :

"ಕೆಲವರು ದೇಶಕ್ಕೂ ಇತಿಹಾಸಜ್ಞಾನಕ್ಕೂ ಅವಿಭಾಜ್ಯವೂ ನಿಕಟವೂ ಆದ ಸಂಬಂಧವಿದೆ ಎಂದು ಹೇಳುತ್ತಾರೆ. ಆದರೆ ನನಗೆ ಇದರ ಬಗ್ಗೆ ಸಂದೇಹಗಳಿವೆ. ಭಕ್ತಿ ಮತ್ತು ಜ್ಞಾನ ಪರಸ್ಪರ ಆಧಾರಗೊಂಡ ವಿಷಯಗಳೇ ? ಜ್ಞಾನದೊಂದಿಗೆ ಭಕ್ತಿ (ಅಥವಾ ಪ್ರೇಮ) ಹೆಚ್ಚುತ್ತದೆಯೇ ? ಅತೀವ ಭಕ್ತಿಗೂ ಮೂಢನಂಬಿಕೆಗೂ ನಂಟಿಲ್ಲವೇ ? ಈ ವಿಷಯದ ಬಗೆಗೆ ಏಕಾಭಿಪ್ರಾಯವಿಲ್ಲ. ಹಿಂದೆ ಎಂದಾದರೂ ಇತ್ತೇ ಎಂಬುದೂ ಸಂದೇಹಾಸ್ಪದ...".

ಶಿಕ್ಷಣದ ಪಾತ್ರವನ್ನು ಕುರಿತ ಒಂದು ಪ್ರಬಂಧದಲ್ಲೂ ಅವರು ಜ್ಞಾನ ಮತ್ತು ಕರ್ಮಗಳ ಸಂಬಂಧವನ್ನು ಕುರಿತು ಚರ್ಚಿಸಿದ್ದಾರೆ. ಅನೇಕ ಮೂಲಭೂತ ಪ್ರಶ್ನೆಗಳನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆ.

"ಯಾವುದು ಹೆಚ್ಚು ಮುಖ್ಯವಾದುದು–ಜ್ಞಾನವೇ, ಕರ್ಮವೇ ? ಸಮಾನಾರ್ಥಕ ಪದಗಳಿಂದ ಇದನ್ನು ವಿವರಿಸಿದರೆ ಸ್ವಲ್ಪಮಟ್ಟಿಗೆ ತಿಳುವಳಿಕೆಯಾಗಬಹುದು. ಜೀವನದಲ್ಲಿ ಯಾವುದು ಮೊದಲು ಬರುತ್ತದೆ ?–ಜ್ಞಾನವೇ ; ಶೀಲವೇ ; ಚಿಂತನೆಯೇ ; ಗುಣವೇ ; ಮಾತೇ ; ಕೆಲಸಗಳೇ ?"

ಇದನ್ನು ಮುಂದುವರಿಸುತ್ತಾ ಅವರು ಹೀಗೆ ಹೇಳುತ್ತಾರೆ :

"......ಜೀವನದ ಪರಿಪೂರ್ಣತೆಗೆ ಜ್ಞಾನವೊಂದೇ ಸಾಲದು. ಪ್ರಕೃತಿಸೂತ್ರದಂತೆ ಜ್ಞಾನ ಇನ್ನೊಂದರ ಸಾಧನೆಗೆ ಸಾಧನವಷ್ಟೆ..."

ಜ್ಞಾನವನ್ನು ಸಂಪಾದಿಸಲು ಯೋಚನಾಶಕ್ತಿ ಇದ್ದರೆ ಸಾಕು. ಆದರೆ ಜೀವನಕಲೆಯನ್ನು ಸಿದ್ಧಿಸಿಕೊಳ್ಳಲು ಬೇರೆ ಕೆಲವುಗಳ ಜೊತೆಗೆ ಕೆಳಗಿನವೂ ಬೇಕು : 1. ಪ್ರಕೃತಿ ಸೂತ್ರಗಳ ಜ್ಞಾನ ; 2. ಅವುಗಳನ್ನು ಅನ್ವಯಿಸುವ ಜ್ಞಾನ ; 3. ವಿವೇಚನಾಶಕ್ತಿ ; 4. ನ್ಯಾಯಸಮ್ಮತ ದೃಷ್ಟಿ ; ಮತ್ತು 5. ದೈಹಿಕ ಶ್ರಮ. ಇವುಗಳ ಹಿನ್ನೆಲೆಯಲ್ಲಿ ತಮ್ಮ ದೃಷ್ಟಿಯನ್ನು ಬೀರುತ್ತಾ ಭಾರತದ ವಿಶ್ವವಿದ್ಯಾನಿಲಯಗಳನ್ನು ಅವರು ತಪ್ಪುಹಿಡಿದಿದ್ದಾರೆ. ಇವು ಸಮತೂಕವನ್ನೇ ಕಳೆದುಕೊಂಡು ಕಳೆದ ಕಾಲದಲ್ಲೇ ಬದುಕುತ್ತಿವೆ. ಪಾಶ್ಚಾತ್ಯರಂತಲ್ಲದೆ, ಜ್ಞಾನಕ್ಕೆ ಮಾತ್ರ ಪ್ರಾಧಾನ್ಯ ನೀಡಿ ಇತರ ಮಗ್ಗಲುಗಳನ್ನು ಕೈಬಿಟ್ಟಿವೆ. ಗತಕಾಲವೂ ಮುಖ್ಯವೇ. ಆದರೆ ಅದರ ಬಗ್ಗೆ ಗೌರವವನ್ನು ಸೂಚಿಸಿದ ಮಾತ್ರಕ್ಕೆ ಪ್ರಗತಿ ಲಭಿಸುವುದಿಲ್ಲ. ಶಿಕ್ಷಣದಲ್ಲಿ ಸುಧಾರಣೆಯ ಬಗೆಗೆ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಕ್ರೋಡೀಕರಿಸಿದ್ದಾರೆ :

"......ವರ್ತಮಾನದ ಕರ್ತವ್ಯ ಭೂತದಲ್ಲಿ ಬಾಳುವುದಲ್ಲ. ಭೂತವರ್ತಮಾನಗಳಿಗಿಂತ ಜಾಜ್ವಲ್ಯಮಾನವಾದ ಭವಿಷ್ಯತ್ತಿಗಾಗಿ ಕಷ್ಟಪಟ್ಟು ಕೆಲಸ ಮಾಡಬೇಕು. ......ಅಗೌರವ ತೋರಿಸಿದರೆಂಬ ಅಪಾದನೆಗೂ ಭಯಪಡದೆ ನಾವು ವಿಶ್ವವಿದ್ಯಾನಿಲಯ ಶಿಕ್ಷಣದ ಸುಧಾರಣೆಯನ್ನು ಮುಂದುವರಿಸಬೇಕು."

ತಾವು ದೃಢಬ್ರಹ್ಮಚಾರಿಯಾದರೂ ರೆಡ್ಡಿಯವರಿಗೆ ವಿವಾಹ ವ್ಯವಸ್ಥೆಯ ಬಗ್ಗೆ ಜೀವಂತ ಆಸಕ್ತಿ ಇತ್ತು. ಪ್ರಾಚೀನ ಕಾವ್ಯಾಭ್ಯಾಸಿಯಾದ ರೆಡ್ಡಿಯವರು ಪ್ರಾಚೀನ ಹಿಂದೂ ವಿವಾಹದ ವರ್ಣವ್ಯವಸ್ಥೆಯ ಕಡೆಗೆ ಗಮನ ಹರಿಸಿದರು. ಈ ವಿಷಯವನ್ನು ಕುರಿತ ಒಂದು ಪ್ರಬಂಧದಲ್ಲಿ 'ಸ್ವಯಂವರ' ರಾಕ್ಷಸ ಪದ್ಧತಿಯ ವಿವಾಹವೇ ಎಂಬ ಪ್ರಶ್ನೆಯನ್ನೆತ್ತಿ, ಅದರ ಪರವಾಗಿಯೇ ಉತ್ತರ ನೀಡಿದ್ದಾರೆ. ಅವರ ವ್ಯಾಖ್ಯಾನ ಸ್ವೋಪಜ್ಞೆಯಿಂದ ಕೂಡಿದ್ದು ನಮ್ಮನ್ನು ಆಲೋಚನಾ ಪರರನ್ನಾಗಿ ಮಾಡುತ್ತದೆ.

''ಮದುವೆಯ ಪರಿಸ್ಥಿತಿಗಳನ್ನು ಪರಿಶೀಲಿಸಿದಾಗ ಅದು ಇಷ್ಟದಂತೆ ನಡೆಯುವುದಲ್ಲ ಎಂದು ಖಚಿತವಾಗುವುದು. ಈ ಹಬ್ಬವನ್ನು ಪ್ರಕಟಿಸುವ ಮುನ್ನ ದಿನ ಮತ್ತು ಲಗ್ನಗಳನ್ನು ಗೊತ್ತುಮಾಡಲಾಗುತ್ತದೆ. ಆ ದಿನಕ್ಕೆ ಗೊತ್ತುಮಾಡಿದ ವರರಲ್ಲಿ ವಧುವಿಗೆ ಒಪ್ಪಿಗೆಯಾಗುವವನಿರುತ್ತಾನೆಂಬ ಭರವಸೆ ಎಲ್ಲಿದೆ ? ಅವಳ ನಿರೀಕ್ಷೆಯಂತೆ ನಡೆಯುದಿದ್ದರೆ ಎಲ್ಲವನ್ನೂ ತಿರಸ್ಕರಿಸುವ ಸ್ವಾತಂತ್ರ್ಯ ಅವಳಿಗಿದೆಯೇ ?......ನನಗನಿಸುವುದೇನೆಂದರೆ, ಲಗ್ನ (ಮದುವೆಯ) ಮುಖ್ಯವೆಂದು ತಿಳಿಯುತ್ತಾರೆಯೇ ಹೊರತು ವಧುವಿನ ಇಷ್ಟವಲ್ಲ. ಯಾರೋ ಒಬ್ಬರನ್ನು ಮದುವೆಮಾಡಿಕೊಳ್ಳುವಂತೆ ಅವಳನ್ನು ಒಪ್ಪಿಸಲಾಗುತ್ತದೆ...ಇದೇನಿದ್ದರೂ, ಒಬ್ಬನನ್ನು ಬಿಟ್ಟು ಅಂದಿನ ಉಳಿದ ವರರು ವಧುವಿನ ತಂದೆಯನ್ನು ಮುತ್ತಿಗೆ ಹಾಕುತ್ತಾರೆಂಬುದೇನೋ ನಿಜ. ಆದುದರಿಂದ ನನ್ನ ಅನುಮಾನವೆಂದರೆ ಸ್ವಯಂವರ ವಧುವಿನ ಇಷ್ಟದಂತೆ ನಡೆಯುವ ಮದುವೆಯಲ್ಲ; ರಾಕ್ಷಸವಿವಾಹದ ಇನ್ನೊಂದು ಪ್ರಕಾರವಷ್ಟೆ.''

ಈ ಪ್ರಕಾರದ ಉಳಿಕೆಗಳು ಬಾಳೆಯ ಕಾಂಡವನ್ನು ವರನು ಕತ್ತರಿಸುವ ಆಚರಣೆಯಲ್ಲಿ ಕಂಡುಬರುವುದನ್ನು ಕುರಿತು ಹೇಳುತ್ತಾ ರೆಡ್ಡಿಯವರು ಅದನ್ನು ಹೀಗೆ ಸಂಗ್ರಹಿಸಿದ್ದಾರೆ :

''ಎಲ್ಲ ಕಾಲಗಳಲ್ಲೂ - ಎಲ್ಲ ಪಂತಗಳಲ್ಲೂ ರಾಕ್ಷಸವಿವಾಹ ಅಸಮಂಜಸವಾದುದೆಂದು ಹೇಳುವುದೂ ತುಂಬ ತಪ್ಪಾಗುತ್ತದೆ. ಇದರಲ್ಲೂ ಒಳ್ಳೆಯ, ಮೆಚ್ಚತಕ್ಕ ಅಂಶ ಇಲ್ಲದಿಲ್ಲ. ಆದುದರಿಂದಲೇ ಹಿಂದಿನ ಕಾಲದ ರಾಜರು ಇದನ್ನು ಪ್ರೋತ್ಸಾಹಿಸಿದರು. ರಾಕ್ಷಸವಿವಾಹದ ಅಂಶ ಇದರಲ್ಲಿ ಇರುವುದರಿಂದಲೋ ಏನೋ, ಸ್ವಲ್ಪಕಾಲದಲ್ಲೇ ಇದು ಮರೆಯಾಯಿತು,

ಗಾಂಧರ್ವವಿಧಿಯನ್ನು ಪ್ರಶಂಸಿಸುತ್ತಾ ಅವರು ಹೀಗೆನ್ನುತ್ತಾರೆ :

''ಗಾಂಧರ್ವವಿಧಿ ಸ್ತ್ರೀಪುರುಷರ ಸಹಜ ಪ್ರವೃತ್ತಿಗಳಿಗೆ ಹೊಂದಿಕೆಯಾಗುವ ವಿವಾಹ. ನಮ್ಮ ಜನ ಇದು ಧರ್ಮವಿರುದ್ಧವೆನ್ನುತ್ತಾರೆ. ಗಾಂಧರ್ವ ಮೂಲಭೂತವಾಗಿ ಮಾನವ ಸೃಷ್ಟಿಯಷ್ಟು ಹಳೆಯದು. ಎಲ್ಲ ಮಂತ್ರ, ವೇದಗಳಿಗಿಂತ ಹಳೆಯದು. ಮಾನವಪ್ರೇಮದ ಔನ್ನತ್ಯಕ್ಕೂ ಶ್ರೇಷ್ಠತೆಗೂ ಇದು ಶಾಶ್ವತ ಉದಾಹರಣೆ. ಸ್ತ್ರೀಪುರುಷರು ಬದುಕಿರುವವರೆಗೂ ಇದು ನಾಶವಾಗುವುದಿಲ್ಲ.''

ಧರ್ಮದ ಡಾಂಭಿಕ ಪ್ರದರ್ಶನಗಳನ್ನು ರೆಡ್ಡಿಯವರು ವಿರೋಧಿಸಿದರು. ಸಾಂಪ್ರದಾಯಿಕ ಹಿಂದೂಗಳ 'ಕರ್ಮಕಾಂಡ' ವನ್ನು ಪ್ರತಿನಿಧಿಸುವ ವಿಸ್ತೃತ ಧರ್ಮಾಚರಣೆಗಳೆಂದು ಅವರಿಗೆ ಅಸಹನೆ ಇತ್ತು. ಹಿಂದೂ ದೇವಸ್ಥಾನಗಳ ಪವಿತ್ರ ಪೂಜಾ ವಿಧಾನಗಳ ಬಗೆಗೆ ಉದಾಸೀನರಾಗಿದ್ದರು. "ದೇವಸ್ಥಾನದ ಪೂಜಾರಿ ಮಧ್ಯವರ್ತಿಯಾಗಿದ್ದು ಸೃಷ್ಟಿಕರ್ತನೊಂದಿಗೆ ಮಾಡುವ ವೈಯಕ್ತಿಕವಾದ ಚೌಕಾಸಿ ವ್ಯವಹಾರ" ವೆಂದು ಇದನ್ನು ರೆಡ್ಡಿಯವರು ವರ್ಣಿಸಿದರು.

ಇದು ಮತ್ತು ಇತರ ಕಟುವಾದ ಹೇಳಿಕೆಗಳು ರೆಡ್ಡಿಯವರು ಹಿಂದೂ ಭಜನೆ ಕೂಟಗಳ ಪಾತ್ರದ ಬಗೆಗೆ ಬರೆಯುವಾಗ ಕಂಡುಬರುತ್ತವೆ. ಹಿಂದೂಗಳಲ್ಲಿ ಸಾಮಾನ್ಯವಾಗಿ ಹೆಚ್ಚಾಗಿರುವ ವೈಯಕ್ತಿಕ ಮೋಕ್ಷದ ಕಲ್ಪನೆ ಅವರಿಗೆ ಹಿತವೆನಿಸಲಿಲ್ಲ. ಈ ಕಲ್ಪನೆ ಕ್ರಿಶ್ಚಿಯನ್ ಮತ್ತು ಮುಸ್ಲಿಮರ ಸಾಮೂಹಿಕ ಪ್ರಾರ್ಥನೆಯ ಭಾವನೆಗೆ ವಿರುದ್ಧವಾದುದು. ಗುರುನಾನಕ್ ಪಂಥದ ಸಿಖ್ಖರೂ ಸಾಮೂಹಿಕ ಪ್ರಾರ್ಥನೆಯನ್ನೇ ಆರಿಸಿಕೊಂಡಿದ್ದಾರೆ. ಇದಕ್ಕೆ ತುಂಬ ಸಮೀಪದ್ದು ಹಿಂದೂ ಸಮಾಜದ ಭಜನೆಕೂಟ. ಇದು ಮುಖ್ಯವಾಗಿ ಹಳ್ಳಿಯ ಕಡೆ ಇನ್ನೂ ಹೆಚ್ಚಿಗೆ ಕಂಡು ಬರುವುದು.

ಇಂತಹ ಕೂಟಗಳು ಅವನತಿಹೊಂದಿ, ಅದರ ಸ್ಥಾನದಲ್ಲಿ ಬ್ರಾಹ್ಮಣ ಪುರೋಹಿತರು ಪೂಜೆ ಮಾಡುವುದು ಮತ್ತೆ ಹೆಚ್ಚುತ್ತಿರುವುದರ ಬಗೆಗೆ ರೆಡ್ಡಿಯವರು ವಿಷಾದ ವ್ಯಕ್ತಪಡಿಸುತ್ತಾ ತಮ್ಮ ಪ್ರಬಂಧದಲ್ಲಿ ಹೀಗೆನ್ನುತ್ತಾರೆ :

"ಭಜನೆಕೂಟವನ್ನು ದೇವಸ್ಥಾನವನ್ನಾಗಿ ಮಾರ್ಪಡಿಸುವುದು ದೇವರಿಗಾಗಲಿ ದೇಶಕ್ಕಾಗಲಿ ಒಳ್ಳೆಯದಲ್ಲ. ದೇವಸ್ಥಾನವನ್ನು ಭಜನೆಕೂಟವಾಗಿ ಮಾರ್ಪಡಿಸಿದರೆ ದೇವರ ಮಹಿಮೆಗೂ, ಜನರ ಹಿರಿಮೆಗೂ ಅದು ಪೂರಕವಾಗುತ್ತದೆ."

# 10 ಸಾಮಾಜಿಕ ವಿಜ್ಞಾನಿ

ರಾಮಲಿಂಗಾರೆಡ್ಡಿಯವರ ಕೃತಿಗಳಲ್ಲಿ ಗಾತ್ರ ಮತ್ತು ಧ್ಯೇಯದ ದೃಷ್ಟಿಯಿಂದಾದರೂ ‘ಭಾರತ ಅರ್ಥ ಶಾಸ್ತ್ರಮು’ ಮಹತ್ವಾಕಾಂಕ್ಷೆಯ ಗ್ರಂಥ ಎನ್ನಬಹುದು. ಇದರಲ್ಲಿ 450ಕ್ಕಿಂತ ಹೆಚ್ಚು ಪುಟಗಳಿವೆ. ಮೇಲ್ನೋಟಕ್ಕೆ ಭಾರತದ ಅರ್ಥಶಾಸ್ತ್ರವನ್ನು ಕುರಿತ ಗ್ರಂಥವಾದರೂ, ಇದು ಭಾರತೀಯ ಸಾಮಾಜಿಕ ಸಂಪ್ರದಾಯವನ್ನು ಕುರಿತ ವ್ಯಾಖ್ಯಾನವಾಗಿ ಮೂಡಿಬಂದಿದೆ, ಕೌಟಿಲ್ಯನ ‘ಅರ್ಥಶಾಸ್ತ್ರ’ ಮೌರ್ಯರ ಕಾಲಕ್ಕೇ ಹೇಗೆ ಕಟ್ಟುಬಿದ್ದಿಲ್ಲವೋ ಹಾಗೆಯೇ ರೆಡ್ಡಿಯವರ ಅರ್ಥಶಾಸ್ತ್ರವೂ ಅವರ ಕಾಲದ ಭಾರತದ ಅರ್ಥಶಾಸ್ತ್ರಕ್ಕೆ ಕಟ್ಟುಬಿದ್ದಿಲ್ಲ. ಈ ಕೃತಿಗೆ ರೆಡ್ಡಿಯವರು 1909–12ರ ಅವಧಿಯಲ್ಲಿ ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೊಟ್ಟ ಅರ್ಥ ಶಾಸ್ತ್ರದ ಉಪನ್ಯಾಸಗಳೇ ಮೂಲವೆಂದು ಹೇಳಬಹುದು. ಆದರೂ ಪಶ್ಚಿಮಕ್ಕೆ ಸಂವಾದಿಯಾಗಿ ಭಾರತ ತನ್ನ ಭೌತಸಂಪತ್ತನ್ನು ಹೇಗೆ ಬಳಸಿಕೊಳ್ಳುತ್ತಿದೆ ಎಂಬುದರ ಬಗೆಗೆ ರೆಡ್ಡಿಯವರ ಅಭಿಪ್ರಾಯದ ಸಾರಾಂಶ ಇದರಲ್ಲಿ ಕಾಣುತ್ತದೆ. ಭಾರತವನ್ನು ಅರಿಯುವ ನಿಟ್ಟಿನಲ್ಲಿ ಇದೊಂದು ಸುದೀರ್ಘವೂ, ಸಮರ್ಪಕವೂ ಆದ ಪ್ರಬಂಧ.

ವೈಜ್ಞಾನಿಕ ಸಾಹಿತ್ಯದ ಅಭಿವ್ಯಕ್ತಿಯ ಮಾಧ್ಯಮವಾಗಿ ತೆಲುಗನ್ನು ಬಳಸುವ ನಿಟ್ಟಿನಲ್ಲೂ ಬಹುಶಃ ಇದು ಮೊದಲನೆಯ ಗಂಭೀರ ಪ್ರಯೋಗವೆನ್ನಬಹುದು. ಇದರಲ್ಲಿ ಪ್ರಶಂಸಾರ್ಹಶೈಲಿಯೂ, ಪುಷ್ಟಿಕರವಾದ ಸ್ವೋಪಜ್ಞತೆಯೂ ಇದೆ. ಕಾದಂಬರಿಯಂತೆ ಓದಿಸಿಕೊಂಡು ಹೋಗುವ ಈ ಕೃತಿ ಲೇಖಕನ ನಿರೂಪಣಾ ಕಲೆಯನ್ನು ಚೆನ್ನಾಗಿ ತೋರಿಸುತ್ತದೆ.

ಭಾರತೀಯ ಸಂಪ್ರದಾಯದ ‘ಪುರುಷಾರ್ಥ’ ಗಳೆಂಬ ಹೆಸರಿನ (ಧರ್ಮ, ಅರ್ಥ, ಕಾಮ, ಮೋಕ್ಷ) ಜೀವನದ ನಾಲ್ಕು ಪ್ರಧಾನ ಮೌಲ್ಯಗಳನ್ನು ಉಲ್ಲೇಖಿಸುವಾಗ ‘ಅರ್ಥ’ ಕೀಳುಮಟ್ಟದ್ದೆಂದು ಕಡೆಗಣಿಸುವುದನ್ನು ರೆಡ್ಡಿಯವರು ಒಪ್ಪಿಕೊಳ್ಳುವುದಿಲ್ಲ. ಒಂದು ವೇಳೆ ಈ ತಿರಸ್ಕಾರ ಮಿಥ್ಯಾವಾದವಲ್ಲ, ಸರಿಯಾದುದೆಂದು ಭಾವಿಸುವುದಾದರೂ ಅದನ್ನು ಒಪ್ಪುವಂತಿಲ್ಲ. ಏಕೆಂದರೆ, ಐಹಿಕ ಮೂಲಗಳ ಸಹಾಯವಿಲ್ಲದೆ ಈ ಪ್ರಪಂಚದಲ್ಲಿ ಏನನ್ನೂ ಸಾಧಿಸುವಂತಿಲ್ಲ. ಕೆಲವು ವ್ಯಾಪಾರಿಗಳು ಅಪ್ರಾಮಾಣಿಕ ರೀತಿಯಲ್ಲಿ ಐಶ್ವರ್ಯವಂತರಾಗಿರುವುದು ನಿಜವಾದರೂ, ಐಶ್ವರ್ಯವೆಲ್ಲಾ ಅಪ್ರಾಮಾಣಿಕ ರೀತಿಯಲ್ಲೇ ಬರುತ್ತದೆಂಬ ಸಾಮಾನ್ಯವಾದ ಹೇಳಿಕೆಯನ್ನು ರೆಡ್ಡಿ ಗೇಲಿ ಮಾಡಿದ್ದಾರೆ. ಐಶ್ವರ್ಯ ಪಾಪವೆಂಬ ಹಿಂದೂ ವಿಶ್ವಾಸವನ್ನಾಗಲಿ, ಆಸ್ತಿಯೆಲ್ಲಾ ಕಳ್ಳ ಮಾಲೆಂಬ ಮಾರ್ಕ್ಸ್‌ವಾದವನ್ನಾಗಲಿ ಅವರು ಒಪ್ಪುವುದಿಲ್ಲ. ‘ಪ್ರಾಮಾಣಿಕತೆ ಅತ್ಯುತ್ತಮ ನೀತಿ’–ಎಂಬ ಇಂಗ್ಲಿಷ್ ಗಾದೆ ಅವರ ಒಪ್ಪಿಗೆಯನ್ನು ಪಡೆದಿದೆ.

ಈ ಪುಸ್ತಕದಲ್ಲಿ ರೆಡ್ಡಿಯವರು ಮತ್ತೆ ಮತ್ತೆ ಮಾಡಿದ ಪ್ರಯತ್ನವೆಂದರೆ, ಆಮು

ತ್ಮಿಕ ಔನ್ನತ್ಯಕ್ಕಾಗಿ ಐಹಿಕ ಐಶ್ವರ್ಯವನ್ನು ಬಿಡಬೇಕೆಂಬ ಜನಪ್ರಿಯ ಹಿಂದೂ ಭಾವನೆಯನ್ನು ಟೀಕಿಸುವುದು. ಅವರ ಅಭಿಪ್ರಾಯದಲ್ಲಿ ಈ ಊಹೆಯಿಂದ ಜನರಲ್ಲಿ ಕಾರ್ಯಾರಂಭ ಪ್ರವೃತ್ತಿ ಇಂಗಿ ಹೋಯಿತು. ಕಷ್ಟಪಟ್ಟು ಕೆಲಸಮಾಡುವುದು, ಜೀವನದ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳಲು ಪ್ರಯತ್ನ ಮಾಡುವುದು ನಿಂತು ಹೋಯಿತು. ಆರ್ಥಿಕ ಪ್ರಗತಿಗೆ ಅಡ್ಡಿಯಾಗುವ ವಿಷಯಗಳಲ್ಲಿ ಇದನ್ನು ಮುಖ್ಯವಾಗಿ ಗಮನಿಸಬೇಕು. 'ಅರ್ಥ'ವನ್ನು ಸಾಧಿಸದೆ 'ಧರ್ಮ'ಪಾಲನೆ ಸಾಧ್ಯವಿಲ್ಲವೆಂಬುವವರ ಅಭಿಪ್ರಾಯವನ್ನು ರೆಡ್ಡಿಯವರು ಒಪ್ಪುತ್ತಾರೆ.

'ಧರ್ಮ' ಪಾಲನೆ ಮತ್ತು ರಾಷ್ಟ್ರದ ಪ್ರಗತಿಗೆ ಬೇಕಾದ ಗುಣಗಳನ್ನು ರೆಡ್ಡಿಯವರು ಒತ್ತಿ ಹೇಳಿದ್ದಾರೆ. ಅವು : 1. ಕಷ್ಟಪಟ್ಟು ಕೆಲಸ ಮಾಡುವುದು (ದೈಹಿಕ ಶ್ರಮವೂ ಸೇರಿದಂತೆ) 2. ಸಾಮರ್ಥ್ಯ (ಅಥವಾ ಯೋಗ್ಯತೆ) ಮತ್ತು ಆತ್ಮವಿಶ್ವಾಸ–ಈ ಎರಡೂ ಪರಸ್ಪರ ಸಂಬಂಧವಿರುವಂಥವು ; 3. ಪ್ರಕೃತಿ ಸೂತ್ರಗಳ ಜ್ಞಾನ (ಇದು ಯೂರೋಪಿಯನ್ನರು ಜಲಶಕ್ತಿ ಮತ್ತು ವಿದ್ಯುಚ್ಛಕ್ತಿಗಳನ್ನು ವಶಪಡಿಸಿಕೊಳ್ಳಲು ನೆರವಾಗಿದೆ. ಖನಿಜ ಸಂಪತ್ತನ್ನು ಹೊರತೆಗೆಯಲು, ಕೈಗಾರಿಕೆಗಳ ಮತ್ತು ವ್ಯಾಪಾರ ಸಂಬಂಧವಾದ ಸಾಮರ್ಥ್ಯಕ್ಕೆ ಸಹಾಯಕವಾಗಿದೆ); 4. ದೂರದೃಷ್ಟಿ—ಇದು ಇಂಗ್ಲಿಷ್‌ಜನ ಮತ್ತು ಅಮೆರಿಕನರು ದೀರ್ಘಾವಧಿ ಯೋಜನೆಗಳನ್ನು ರೂಪಿಸಿಕೊಂಡು, ತಕ್ಷಣ ಫಲವನ್ನು ಪಡೆಯದಿದ್ದರೂ ಭವಿಷ್ಯತ್ತಿನ ತಲೆಮಾರುಗಳಿಗೆ ನೆರವಾಗುವಂತೆ ಮಾಡಿತು. 5. ಧೈರ್ಯ ಸಾಹಸಗಳು ಸೇರಿದಂತೆ ಬಂಡವಾಳ ಹಾಕುವ ಮಹೋದ್ಯಮ ಪ್ರವೃತ್ತಿ (ಸ್ವಯಂ ಉಪಾಧಿಗೆ ಯೂರೋಪಿಯನ್ನರು ಕೊಡುವ ಆದ್ಯತೆಯನ್ನು ಭಾರತೀಯರು ಸರ್ಕಾರಿ ಕೆಲಸಕ್ಕೆ ಬೆಲೆ ಕೊಡುವುದನ್ನು ರೆಡ್ಡಿಯವರು ಹೋಲಿಸಿದ್ದಾರೆ).

ಇದೇ ರೀತಿಯ ವಾದವನ್ನು ಮುಂದುವರಿಸುತ್ತಾ, ತೃಪ್ತಿ, ವ್ಯಕ್ತಿಯ ಅಗತ್ಯಗಳನ್ನು ಸೀಮಿತಗೊಳಿಸಿಕೊಳ್ಳುವುದು ಮುಂತಾದ ಸರಳ ಜೀವನ ಹಾಗೂ ಮಹಾ ಚಿಂತನೆಯ 'ಸದ್ಗುಣ'ಗಳ ಹಿಂದೂ ಆದರ್ಶೀಕರಣವನ್ನು ರೆಡ್ಡಿಯವರು ತಪ್ಪೆಂದು ಹೇಳುತ್ತಾರೆ. ಇದಕ್ಕೆ ಪ್ರತಿಯಾಗಿ ಪಾಶ್ಚಾತ್ಯ ದೇಶಗಳಂತೆ 'ದಿವ್ಯಅತೃಪ್ತಿ' ಹಾಗೂ ಸ್ಪರ್ಧೆಯ ಮನೋಭಾವದಿಂದ ಪ್ರತಿಯೊಬ್ಬರೂ ಅಚ್ಚುಕಟ್ಟಾಗಿದ್ದು, ತನ್ನಲ್ಲಿರುವ ಅತ್ಯುತ್ತಮ ಶಕ್ತಿಯನ್ನು ಹೊರಗೆಳೆಯುವ ಪ್ರಯತ್ನವನ್ನು ರೆಡ್ಡಿಯವರು ಮೆಚ್ಚಿಕೊಂಡಿದ್ದಾರೆ.

ಇತ್ತೀಚಿನ ಶತಮಾನಗಳಲ್ಲಿ, ಯೂರೋಪಿಗೆ ಹೋಲಿಸಿದಾಗ ಭಾರತೀಯ ಸಮಾಜ ಅವನತಿ ಹೊಂದುತ್ತಿರುವುದನ್ನು ಕುರಿತು ಹೇಳುತ್ತಾ, ಅದಕ್ಕೆ ಈ ಕೆಳಗಿನವು ಕಾರಣವೆಂದು ಅವರು ಗುರುತಿಸಿದ್ದಾರೆ :

1. ತಮ್ಮ ತಮ್ಮ ಜಾತಿಗಳಲ್ಲೇ ಮದುವೆ ಮಾಡಿಕೊಳ್ಳುವ ಸಂಕುಚಿತ ಭಾವನೆಗಳಿಂದ ನಿರ್ವೀರ್ಯ ಜನಾಂಗಗಳ ಉಗಮ (ಅಂತರ್ಜಾತಿ ವಿವಾಹದ ಉಪಯೋಗ

ಗಳನ್ನು ಕಡೆಗಣಿಸಲಾಗಿದೆ) ; 2. ಬಾಲ್ಯ ವಿವಾಹಗಳು-ವರನು ತುಂಬ ಮುದುಕನಾಗಿರು ವುದು, ಇದರಿಂದ ಬೇಗ ವಿಧವೆಯಾಗುವ ಸಂಭವ ಮತ್ತು ಇತರ ಸಾಮಾಜಿಕ ಹಾನಿ ಗಳು; 3. ಪೌಷ್ಟಿಕ ಆಹಾರದ ಅಭಾವ, ಆಹಾರ ಅಸಂಪೂರ್ಣವಾಗಿರುವುದು, ಜೀವ ಸತ್ತ್ವರಹಿತವಾಗಿರುವುದು, ಆಹಾರಾಭ್ಯಾಸಗಳು ಸರಿಯಿಲ್ಲದಿರುವುದು ಜನರು ದುರ್ಬಲ ರಾಗಲು ಕಾರಣ ; 4. ಮನೆಯ ಕೆಟ್ಟ ಪರಿಸರ, ಕೈಗಾರಿಕೆಗಳಲ್ಲಿ, ಮನೆಗಳಲ್ಲಿ ಸರಿಯಾಗಿ ಗಾಳಿ ಬೆಳಕುಗಳಿಲ್ಲದಿರುವುದು ; ಆರೋಗ್ಯ ರಕ್ಷಣೆಯ ಸೌಕರ್ಯಗಳಿಲ್ಲದಿರುವುದು : (ಹೆಚ್ಚಿನ ಉತ್ಪಾದನೆಗೆ ನೆರವಾಗುವಂತೆ ಕ್ಯಾಡ್ಬರಿಯ 'ಬೋರ್ನ್‌ವಿಲ್ಲೆ' ಕೆಲಸಗಾರರ ಕಾಲೊನಿ, ಲೀವರ್ಸ್‌ನ 'ಸನ್‌ಲೈಟ್' ವಿಶ್ರಾಂತಿಸ್ಥಾನ, ಕಾರ್ನೆಜಿಯ 'ಪಿಟ್ಸ್‌ಬರ್ಗ್' ಕಾಲೋನಿಗಳಲ್ಲಿ ಒದಗಿಸಲಾದ ಗೃಹ ಸೌಕರ್ಯಗಳನ್ನು ಹೆಸರಿಸಲಾಗಿದೆ) ; 5. ಆಧುನಿಕ ಕೈಗಾರಿಕಾ ಸಮಾ ಜದ ಅಗತ್ಯಗಳಿಗೆ ತಕ್ಕಂತೆ ಹೊಸ ಕುಶಲ ಕೆಲಸಗಳನ್ನು ಕಲಿಯುವುದರಲ್ಲಿ ಅನಾಸಕ್ತಿ ; 6. ಜಾತಿಪದ್ಧತಿ-ಸಾಮಾಜಿಕ ಭಿನ್ನತೆಯನ್ನು ಸೃಷ್ಟಿಸಿದ್ದು, ಚಲನೆಯನ್ನು ನಿಲ್ಲಿಸಿದ್ದು. ಒಂದು ಜಾತಿಯಲ್ಲಿ ಹುಟ್ಟಿದವನು ಅವನ ಆಸಕ್ತಿ ಏನೇ ಇದ್ದರೂ, ತನ್ನ ಜಾತಿ ಸಂಬಂಧ ವಾದ ವೃತ್ತಿಯಲ್ಲೇ ತೊಡಗಬೇಕೆನ್ನುವುದು. ಅವನ ಇಷ್ಟದಂತೆ ವೃತ್ತಿಯನ್ನು ಬದಲಾಯಿಸಿಕೊಳ್ಳಲಾಗದು. ಹಾಗೆ ಮಾಡಿದರೆ ಜಾತಿಯನ್ನೋ, ಮಾನವನ್ನೋ ಕಳೆದು ಕೊಳ್ಳುತ್ತಾನೆ. ಇದು ಹಿಂದೂ ಸಮಾಜದಲ್ಲಿ ಬೇರೂರಿದ ವಿಧಿವಿಲಾಸದ ತತ್ತ್ವವನ್ನು ಪೋಷಿಸಿದೆ. ಕೆಲಸದಲ್ಲಿ ಮನುಷ್ಯನ ಸಹಜ ಉತ್ಸಾಹವನ್ನು ನಾಶಮಾಡಿದೆ ; 7. ಸಾಮಾ ಜಿಕ ಅನ್ಯಾಯಗಳು-ಅವಿಭಕ್ತ ಕುಟುಂಬ ಇದರಲ್ಲಿ ಒಂದು ಎಂದು ಅವರು ಹೇಳು ತ್ತಾರೆ. ಸಂಪಾದಿಸುವವನು ಒಬ್ಬನಾದರೆ ಆಧಾರಗೊಂಡವರು ಹಲವರಿರುತ್ತಾರೆ. ದೊಡ್ಡಪ್ಪ, ಚಿಕ್ಕಪ್ಪ, ಅವರ ಮಕ್ಕಳು-ಇವರೆಲ್ಲರೂ ತಾವು ಏನೂ ಮಾಡದೆ ಒಬ್ಬನ ದುಡಿಮೆಯನ್ನೇ ನಂಬಿರುತ್ತಾರೆ. ಅನಾರೋಗ್ಯ ಮತ್ತು ವೈಯಕ್ತಿಕ ವಿಪತ್ತುಗಳಿಂದ ಇದು ರಕ್ಷಣೆಯನ್ನು ಒದಗಿಸುತ್ತದೆಂಬುದು ನಿಜವಾದರೂ, ಅವಿಭಕ್ತ ಕುಟುಂಬ ಹಲವ ರಲ್ಲಿ ಸೋಮಾರಿತನವನ್ನು, ಪಟ್ಟಭದ್ರ ಹಿತಾಸಕ್ತಿಯನ್ನು ಸೃಷ್ಟಿಸುತ್ತದೆ.

ಸಾಂಪ್ರದಾಯಿಕ ಭಿಕ್ಷುಕ ಪ್ರವೃತ್ತಿಯನ್ನು, ಸಾಮಾನ್ಯವಾದ ಎಲ್ಲಾ ತರಹದ ತಿರುಕತನವನ್ನೂ ರೆಡ್ಡಿಯವರು ಹೆಸರಿಸಿದ್ದಾರೆ. ಇತರ ಜಾತಿಯವರ ಉದಾರ ಗುಣ ದಿಂದ ಅನೇಕ ರೂಪಗಳಲ್ಲಿ 'ದಾನ' ಪಡೆಯುವವರು ಬೇರೆಯವರ ಖರ್ಚಿನಿಂದ ಬದು ಕುವ ಜಾತಿಯವರಾಗಿದ್ದಾರೆ. ಒಂದು ರೀತಿಯ ಸಾಮಾಜಿಕ ಪರಾವಲಂಬನೆಯನ್ನು ಬೆಳೆಸುವುದರ ಜೊತೆಗೆ ಆರ್ಥಿಕ ವಿಷಯಗಳಲ್ಲಿ ಅನೇಕ ಜನರ ಆತ್ಮವಿಶ್ವಾಸವನ್ನು ಇದು ನಾಶ ಮಾಡುತ್ತದೆ. ಸಮಾಜದ ಮೇಲೆ ಇದರ ಪ್ರಭಾವ ಆರೋಗ್ಯಕರವಾದುದಲ್ಲ.

ಭಾರತದ ಅಸ್ವಸ್ಥತೆಯನ್ನು ಕುರಿತ ಸವಿವರ ರೋಗ ನಿದಾನದ ಅನಂತರ, ಅದಕ್ಕೆ ಕೊಡುವ ಪರಿಹಾರದ ಬಗೆಗೆ ರೆಡ್ಡಿಯವರನ್ನು ಯಾರಾದರೂ ಪ್ರಶ್ನಿಸಬಹುದು. ಅದಕ್ಕೆ ಅವರು ಮುಖ್ಯವಾಗಿ ಮೂರು ವಿಷಯಗಳನ್ನು ಸೂಚಿಸುತ್ತಾರೆ. 1. ಅನೇಕ ಕ್ಷೇತ್ರಗಳಲ್ಲಿ ವೈಯಕ್ತಿಕವಾದ ಹೆಚ್ಚಿನ ಆಸಕ್ತಿ; 2. ಭಾರಿ ಪ್ರಮಾಣದ ಕೈಗಾರಿಕೀ

ಕರಣ ; ಮತ್ತು 3. ಪಡಿತರ ವಸ್ತುಗಳ ಉತ್ಪತ್ತಿ ಮತ್ತು ಹಂಚಿಕೆಗಾಗಿ ಸಹಕಾರ ಸಂಘಗಳು.

ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಪಾಶ್ಚಾತ್ಯ ರೀತಿಯ ಜೀವನದ ಕಡೆಗೆ ಅವರು ತೋರಿದ ಅಮಿತೋತ್ಸಾಹದಲ್ಲಿ ರೆಡ್ಡಿಯವರು ವಿಕ್ಟೋರಿಯ ಕಾಲದ ಕಡೆಯ ಕಾಲದ ಎಡ್ವರ್ಡಿಯನ್ ಪ್ರಜ್ಞಾವಂತರನ್ನು ಹೋಲುತ್ತಾರೆ. ಆಗ ಬ್ರಿಟಿಷ್ ಸಾಮ್ರಾಜ್ಯ ಅತ್ಯುನ್ನತ ಸ್ಥಿತಿಯಲ್ಲಿತ್ತು. ಆರ್ಥಿಕ ಉದಾರ ವಾದವೂ ಸೇರಿದಂತೆ ಪಾಶ್ಚಾತ್ಯ ಭೌತ ವಾದಕ್ಕೆ ಅವನತಿಯ ಕಾಲ ಬಂದಿರಲಿಲ್ಲ. ಪ್ರಥಮ ಪ್ರಪಂಚ ಸಂಗ್ರಾಮ ಮತ್ತು ಬೋಲ್ಷೆವಿಕ್ ಕ್ರಾಂತಿ ಕೆಲವು ವರ್ಷಗಳಲ್ಲೇ ನಡೆಯಲಿದ್ದವು. ಯೂರೋಪಿನ ಸ್ಥಿರವಾದ ಅಭಿಪ್ರಾಯಗಳಿಗೆ ಇನ್ನೂ ಧಕ್ಕೆ ಬಂದಿರಲಿಲ್ಲ. ಇವು ರೆಡ್ಡಿಯವರ ಆತ್ಮತೃಪ್ತಿ ಹಾಗೂ ಆತ್ಮಸ್ಥೈರ್ಯವನ್ನು ಸ್ವಲ್ಪಮಟ್ಟಿಗೆ ವಿವರಿಸುತ್ತವೆ. ಹಿಂದೂ ಪದ್ಧತಿಯ ಯೋಚನಾ ಸರಣಿಯ ಮೇಲೆ ರೂಪುಗೊಂಡಿರುವ ಸಾಂಪ್ರದಾಯಿಕವಾದ ಭಾರತ ಸಮಾಜವನ್ನು ಕುರಿತ ಅವರ ವಿಮರ್ಶೆ ತುಂಬ ತೀಕ್ಷ್ಣವಾಗಿದೆ. ಅಂದಿಗೂ ಇಂದಿಗೂ ಎಷ್ಟೋ ವರ್ಷಗಳು ಕಳೆದರೂ ಅದು ಹಾಗೆಯೇ ಇದೆ.

# 11 ಯುಗಪ್ರವರ್ತಕ

"..........ಭರವಸೆ ಮೂಡಿಸುವ ಶ್ರೀಮಂತಿಕೆ, ನಿರ್ವಹಣೆಯಲ್ಲಿ ಬಲಹೀನತೆ, ಮಹದಾಶಯ, ಆದರೆ ಅತ್ಯಲ್ಪ ಸಾಧನೆಯಿರುವ ಅಂತಹ ಜೀವನವನ್ನು ಕಾಣುವುದು ಕಷ್ಟ."

ಈ ಮಾತುಗಳನ್ನು ರಾಮಲಿಂಗಾರೆಡ್ಡಿಯವರ ಬಗೆಗೆ ಬರೆದವರು, ಅವರ ಅತ್ಯಂತ ಸನ್ನಿಹಿತ ಅಭಿಮಾನಿಯಾದ ಪ್ರಸಿದ್ಧ ಪತ್ರಿಕೋದ್ಯಮಿ ಡಿ॥ ಶ್ರೀ ಕೆ. ಈಶ್ವರ ದತ್ತ. ಇದನ್ನು 1929ರಲ್ಲಿ ರೆಡ್ಡಿಯವರು ಐವತ್ತರ ಗಡಿಯಲ್ಲಿದ್ದಾಗ ಬರೆಯಲಾಯಿತು. ಆದರೆ ಈ ಮೌಲ್ಯಮಾಪನ ರೆಡ್ಡಿಯವರ ರಾಜಕೀಯ ಜೀವನಕ್ಕೆ ಸಂಬಂಧಿಸಿದ್ದು.

ವಿದ್ವನ್ಮಣಿಯಾಗಿ ಅವರ ವಿಕ್ರಮದ ಬಗೆಗೂ ಬಹುಮಟ್ಟಿಗೆ ಹೀಗೇ ಹೇಳಬಹುದು. ಆದರೆ ಒಂದು ವ್ಯತ್ಯಾಸವಿದೆ. ರಾಜಕೀಯರಂಗಕ್ಕಿಂತ ಸಾಹಿತ್ಯಿಕ ರಂಗದಲ್ಲಿ ಅವರ ಸಾಧನೆ ಗಮನಾರ್ಹವಾದುದು. ಇಲ್ಲೂ ಅವರು ರಣಭೇರಿ ಹೊಡೆದೇ ಪ್ರವೇಶಿಸಿದರು. ಅವರು ಶೋಕದಿಂದ ನಿರ್ಗಮಿಸಲಿಲ್ಲವೆಂಬುದೇನೋ ನಿಜ. ಆದರೆ ಅವರು ಮೊದಲು ಹೊಡೆದ ರಣಭೇರಿ ಇನ್ನೂ ಹೆಚ್ಚಿಗೆ ಪ್ರತಿಧ್ವನಿಸಬೇಕಾಗಿತ್ತು. ಅವರಂತಹ ವಿವೇಕಿಯಿಂದ ನಾವು ಇಂಥದನ್ನು ನಿರೀಕ್ಷಿಸುವುದು ಸಹಜ. ಪ್ರಾಚೀನ ಸಾಹಿತ್ಯಾಭ್ಯಾಸದ ಆಶ್ರಿತರು ಮತ್ತು ಸಹಕಾರಿಯಾಗಿದ್ದ ಶ್ರೀ ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ ಅವರನ್ನು ಕುರಿತು ಹೀಗೆಂದಿದ್ದಾರೆ:

"ನಮ್ಮಿಬ್ಬರ ಆತ್ಮೀಯ ಸಂಬಂಧವನ್ನು ದೂರವಿಟ್ಟು, ವಸ್ತುನಿಷ್ಠವಾಗಿ ಅವರನ್ನು ಕುರಿತು ಹೇಳಬೇಕಾದರೆ ಅವರಂತಹ ಅಸಾಧಾರಣ ಸಾಮರ್ಥ್ಯವುಳ್ಳವರು ಮಾಡಬಹುದಾದುದನ್ನು ಮಾಡಲಿಲ್ಲವೆಂಬ ವ್ಯಥೆಯಾಗುತ್ತದೆ. ನಮ್ಮಂಥವರಿಗೆ ಅವರು ಮಾಡಿದ್ದು ಎಷ್ಟು ಹೃದಯ ಸ್ಪರ್ಶಿಯಾಗಿ ಕಂಡರೂ ಅವರ ಸಾಧನೆ ಅವರ ಸಾಮರ್ಥ್ಯ ಅನೇಕ ವಿದ್ಯಾರ್ಥಿಗಳ ಅಭಿಪ್ರಾಯವೂ ಹೌದು........"

19 ವರ್ಷದ ತರುಣ ವಿದ್ಯಾರ್ಥಿಯಾಗಿ ರೆಡ್ಡಿ ಆಧುನಿಕ ತೆಲುಗು ಕಾವ್ಯ ಮೈಲಿಗಲ್ಲಾದ ದೀರ್ಘಕಾವ್ಯವನ್ನು ಬರೆದರು. ಅನಂತರ ಕಾಲದಲ್ಲಿ ಪರಿಪೂರ್ಣಕವಿಯಾಗಿ ಅವರು ಬರೆದದ್ದು ಅಲ್ಲೊಂದು ಇಲ್ಲೊಂದು ಪದ್ಯಗಳು ಮಾತ್ರ. ಪ್ರಪಂಚದ ಒಬ್ಬ ದೃಢ ಚಿತ್ತದ ಮನುಷ್ಯನಲ್ಲಿ ಸೃಜನಶೀಲ ಕಾವ್ಯದ ಚಿಲುಮೆ ಒಣಗಿ ಹೋಯಿತೇ ?

20 ರ ಹರೆಯದ ಯುವಕನಾಗಿ ರೆಡ್ಡಿ ಕಳಾಪೂರ್ಣೋದಯದ ವಿಮರ್ಶಾತ್ಮಕ ಅಧ್ಯಯನ ನಡೆಸಿದುದು ಆಶ್ಚರ್ಯಕರವಾದುದು. ಅನಂತರದ ಅರ್ಧ ಶತಮಾನದ ಅವರ ಜೀವನದುದ್ದಕ್ಕೂ ಬರೆದು ಪ್ರಕಟಿಸಿದ್ದು ಪ್ರಬಂಧಗಳ, ಪೀಠಿಕೆಗಳ ಮತ್ತು ಮುನ್ನುಡಿಗಳ ಒಂದು ಸಣ್ಣ ಸಂಕಲನ. ಒಬ್ಬ ದೊಡ್ಡ ವಿಮರ್ಶಕನಿಂದ ನಾವು ನಿರೀಕ್ಷಿಸುವುದು

ಅಷ್ಟು ಮಾತ್ರವೇ ? ಕವಿಯಾಗಿ ಮತ್ತು ವಿಮರ್ಶಕರಾಗಿಯೂ ಅವರು ಕ್ರಿಶ್ಚಿಯನ್ ಕಾಲೇಜಿನ ದಿನಗಳಿಗಿಂತ ಹೆಚ್ಚು ಬೆಳೆದಿಲ್ಲವೆಂದು ವಾದಿಸಬಹುದು. ಅವರು ಬೆಳೆದಿದ್ದರೂ, ಬರವಣಿಗೆಯ ದೃಷ್ಟಿಯಿಂದ ಅವರ ಖಚಿತವಾದ ಬೆಳವಣಿಗೆಯ ಸಾಕ್ಷ್ಯಾಧಾರಗಳು ಸಿಕ್ಕುವುದಿಲ್ಲ.

ತೆಲುಗು ಮಹಾಭಾರತ ರೆಡ್ಡಿಯವರಿಗೆ ಜೀವನದುದ್ದಕ್ಕೂ ಇಷ್ಟವಾದ ಶಿಷ್ಟ ಕಾವ್ಯವಾಗಿತ್ತು. ಅದನ್ನು ಅವರು ಮತ್ತೆ ಮತ್ತೆ ಓದಿದರು, ಸ್ಫೂರ್ತಿ ಬಂದಾಗಲೆಲ್ಲಾ ಅವರು ಅದನ್ನೇ ಓದಿದರು. ಆದರೆ ವ್ಯಾಖ್ಯಾನ ರೂಪದಲ್ಲಿ ಏನೂ ಬರೆಯಲಾಗಲಿಲ್ಲ. ದ್ರೌಪದಿಯ ಪಾತ್ರದ ಬಗ್ಗೆ ಅಥವಾ ಇನ್ನಾವುದಾದರೂ ಸಣ್ಣ ಪುಟ್ಟ ರಚನೆಗಳನ್ನು ಮಾತ್ರ ಮಾಡಿದರು. ಅವರಷ್ಟು ಪ್ರಖ್ಯಾತರಾದ ಶಿಷ್ಟ ಪಂಡಿತರಿಂದ ನಾವು ನಿರೀಕ್ಷಿಸುವುದು ಅಷ್ಟು ಮಾತ್ರವೇ ? ಅವರ ಪುಸ್ತಕಗಳ ಓದುಗರಲ್ಲಿ ಹೆಚ್ಚು ಅನುಮಾನವುಳ್ಳವರ ಮನಸ್ಸಿನಲ್ಲಿ ಒಂದು ಪ್ರಶ್ನೆ ಮೂಡುತ್ತದೆ-ನಾವು ಬಹಳ ಕುತೂಹಲದಿಂದ ನಿರೀಕ್ಷಿಸಿದ ಮಹಾಭಾರತದ ಉತ್ತಮ ವ್ಯಾಖ್ಯಾನವನ್ನು ಬರೆಯುವಷ್ಟು ಶಕ್ತಿ ಅವರಿಗಿದೆಯೋ ಇಲ್ಲವೋ ಎಂಬುದೇ ಆ ಪ್ರಶ್ನೆ. ಅವರಿಗೆ ಬೇಕಾಗಿದ್ದಷ್ಟು ಕಾಲಾವಕಾಶ ಸಿಕ್ಕಿದ್ದರೆ ಬರೆಯುತ್ತಿದ್ದರೆ ?

ಈ ರೀತಿಯ ಪ್ರಶ್ನೆಗಳು ನಮ್ಮನ್ನು ಊಹಾಲೋಕಕ್ಕೊಯ್ದು 'ಹಾಗಾದರೆ' 'ಆದರೂ,' 'ಹೀಗಾಗಿದ್ದರೆ' ಎಂದೆಲ್ಲಾ ಮಾತನಾಡಲು ಅವಕಾಶವೀಯುತ್ತವೆ. ಪಕ್ಷದ ರಾಜಕೀಯ ಮತ್ತು ಶೈಕ್ಷಣಿಕ ಆಡಳಿತಗಳ ಕೆಳವಳಗಳು ಇಲ್ಲದಿದ್ದರೆ ರೆಡ್ಡಿಯವರು ಇನ್ನೂ ಹೆಚ್ಚಿಗೆ ಬರೆಯುತ್ತಿದ್ದರೇನೊ ಎಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಕೀಟ್ಸ್ ಮತ್ತು ಷೆಲ್ಲಿ ಚಿಕ್ಕವಯಸ್ಸಿನಲ್ಲಿಯೇ ನಿಧನರಾದರು. ಆದರೆ ಅವರ ಪ್ರಕಟಿತ ಕೃತಿಗಳು ನಮ್ಮ ಮುಂದಿವೆ. ಅವರು ಇನ್ನೂ ಜೀವಿಸಿದ್ದರೆ ಏನು ಮಾಡುತ್ತಿದ್ದರು ಎಂದು ಊಹಿಸುವ ಅವಶ್ಯಕತೆಯಿಲ್ಲ. ಏಕೆಂದರೆ ಅವರು ಬರೆದದ್ದೇ ನಮ್ಮ ಗಮನ ಸೆಳೆಯುವಷ್ಟು ಮೌಲ್ಯವುಳ್ಳದ್ದಾಗಿದೆ. ಇದೇ ರೀತಿಯಲ್ಲಿ ರೆಡ್ಡಿಯವರು ಬರೆದಿರುವುದನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಮಾಪನ ಮಾಡಬೇಕಾಗಿದೆ.

ಹಿಂದಿನ ಅಧ್ಯಾಯಗಳಲ್ಲಿ ಅವರ ಪ್ರಕಟಿತ ಕೃತಿಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ತೆಲುಗಿನ ಸಾಹಿತ್ಯ ವಿಮರ್ಶೆಯ ಇತಿಹಾಸದಲ್ಲಿ 'ಕವಿತ್ವತತ್ತ್ವ ವಿಚಾರಮು' ಮೈಲಿಗಲ್ಲೆಂದು ಸೂಕ್ತ ಪ್ರಶಂಸೆ ಗಳಿಸಿದೆ. 'ಪ್ರಬಂಧ'ಗಳನ್ನು ಕುರಿತ ಅವರ ಮೌಲ್ಯಮಾಪನವನ್ನು, ಆ ವಿಷಯದಲ್ಲಿ ವಿಶೇಷ ಅಧ್ಯಯನ ನಡೆಸಿದ ವಿದ್ವಾಂಸರೆಲ್ಲರೂ ಒಪ್ಪಿದ್ದಾರೆಂದಲ್ಲ. ಅವರ ಅಭಿಪ್ರಾಯದ ಸಾರಾಂಶದಲ್ಲಿ ತಪ್ಪು ಹಿಡಿಯುತ್ತಾ ಪ್ರತ್ಯುತ್ತರ ರೂಪದ ರಚನೆಗಳು ಕೆಲವು ಹೊರಬಂದವು. ರೆಡ್ಡಿಯವರ ಹೆಚ್ಚಿನ ವಾದಗಳನ್ನು ಕಲ್ಲೂರಿ ವ್ಯಾಸಮೂರ್ತಿ ತಮ್ಮ ಗ್ರಂಥದಲ್ಲಿ ಖಂಡಿಸಲು ಪ್ರಯತ್ನಿಸಿದ್ದಾರೆ. ಭಾರತೀಯ ಸೌಂದರ್ಯ ಮೀಮಾಂಸೆಯಲ್ಲಿ ನುರಿತವರಾದ ಡಾ. ಜಿ. ವಿ. ಕೃಷ್ಣಾರಾವ್ 'ಸ್ಟಡೀಸ್ ಇನ್ 'ಕಳಾಪೂರ್ಣೋದಯಂ' ಎಂಬ ಸಂಶೋಧಕ ನಿಬಂಧದಲ್ಲಿ(ಮದ್ರಾಸು

ವಿಶ್ವವಿದ್ಯಾನಿಲಯಕ್ಕೆ ಸಮರ್ಪಿಸಿದ್ದು) ರೆಡ್ಡಿಯವರ ಕೃತಿಯಲ್ಲಿ ತಿಳುವಳಿಕೆ ಮತ್ತು ವ್ಯಾಖ್ಯಾನಗಳಲ್ಲಿ ಕೆಲವು ತಪ್ಪುಗಳನ್ನು ತೋರಿಸಿದ್ದಾರೆ. ರೆಡ್ಡಿಯವರ ವ್ಯಾಖ್ಯಾನ ಪದ್ಧತಿಯನ್ನು ಮೆಚ್ಚಿಕೊಂಡರೂ, ಭಾರತೀಯ ಸಂಪ್ರದಾಯದಲ್ಲಿ ತನ್ನದೇ ಆದ ಚೌಕಟ್ಟಿನಲ್ಲಿ ರಚಿತವಾದ 'ಪ್ರಬಂಧ' ಗಳಿಗೆ ಸಂಬಂಧವಿಲ್ಲದ ಮೌಲ್ಯಮಾಪನ ಪದ್ಧತಿಯನ್ನು ಬಳಸುವುದು ಸೂಕ್ತವಲ್ಲವೆಂದು ರಾವ್ ಅವರ ಅಭಿಪ್ರಾಯ. ಆದರೆ ರೆಡ್ಡಿಯವರು ಸಾಹಿತ್ಯ ವಿಮರ್ಶೆಯ ಪ್ರಾಥಮಿಕ ಸೂತ್ರಗಳನ್ನು ವಿಶ್ವಜನೀನ ಮಾಡುವುದರಲ್ಲಿ ಯಶಸ್ವಿಯಾದರು.

ಇದು ಹೀಗೆಯೇ ಮುಂದುವರಿಯಿತೆಂಬುದು ಅನಂತರದ ಘಟನೆಗಳಿಂದ ಸ್ಪಷ್ಟವಾಯಿತು. ಇತ್ತೀಚಿನ ಅನೇಕ ವಿಮರ್ಶಕರು ಇನ್ನೂ ಮುಂದಕ್ಕೆ ಹೋದರೂ ಅದೇ ಮಾರ್ಗವನ್ನೇ ಹಿಡಿದರು.

ಹೊಸಯುಗಾರಂಭದ ನಿಟ್ಟಿನಲ್ಲಿ ರೆಡ್ಡಿಯವರ ಕೊಡುಗೆ ತೆಲುಗು ಸಾಹಿತ್ಯಾಭ್ಯಾಸದಲ್ಲಿ ಇನ್ನೊಂದು ಮಾರ್ಗದಲ್ಲೂ ಕಂಡುಬರುತ್ತದೆ. ಡಾ. ಕಾಲ್ಡ್‌ವೆಲರನ್ನು ಭಾಷಾಶಾಸ್ತ್ರದ ದ್ರಾವಿಡ ಪಂಥದ ಪುರೋಹಿತರೆಂದು ವರ್ಣಿಸುವುದಾದರೆ ಡಾ. ರೆಡ್ಡಿಯವರನ್ನು ಸಾಹಿತ್ಯದ ದ್ರಾವಿಡ ಪಂಥದ ಹೊಸ ಉಪದೇಶಕರೆಂದು ಹೇಳುವುದು ಸೂಕ್ತ. ಅತಿಯಾಗಿ ಒತ್ತಿಹೇಳುವುದರಿಂದ ಕೆಲವು ತಪ್ಪುಗಳುಂಟಾದರೂ, ಮೊದಲನೆಯವರು ಅಂಗೀಕರಿಸಬಹುದಾದ ಸಾಕ್ಷ್ಯಾಧಾರಗಳಿಂದ ದ್ರಾವಿಡ ಭಾಷಾ ಕುಟುಂಬದಲ್ಲಿ ತೆಲುಗಿನ ಸ್ಥಾನವನ್ನು ಸ್ಥಿರಪಡಿಸಿದರು ರೆಡ್ಡಿಯವರು. ತೆಲುಗು ಸಾಹಿತ್ಯದಲ್ಲಿರುವ ದ್ರಾವಿಡ ಅಂಶಗಳನ್ನು ಬೆಳಕಿಗೆ ತಂದು ತಮಿಳಿನೊಂದಿಗೆ ಇರುವ ಸಂಬಂಧವನ್ನು ದೃಢೀಕರಿಸಿದರು.

ಪಿ. ಶ್ರೀರಾಮುಲು ರೆಡ್ಡಿಯವರ 'ಕಂಬರಾಮಾಯಣಂ'ನ ತೆಲುಗು ಅನುವಾದಕ್ಕೆ ಮುನ್ನುಡಿ ಬರೆಯುತ್ತಾ ಹೀಗೆಂದಿದ್ದಾರೆ:

''ಜನಾಂಗಿಕವಾಗಿ ನಾವು (ಆಂಧ್ರರು) ದ್ರಾವಿಡರಾದರೂ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಾವು ಆಂಧ್ರರಿಗೆ ಸಮೀಪವರ್ತಿಗಳಾದೆವು. ಛಂದೋರೂಪಗಳು ಸಂಸ್ಕೃತದಿಂದ ಬಂದವು. ಭಾಷೆ ಸಂಸ್ಕೃತದ ಪ್ರತಿಕೃತಿ......ಹಿಂದೆ, ತೆಲುಗು ಮತ್ತು ತಮಿಳುಗಳ ನಡುವೆ ನಿಕಟ ಸಂಬಂಧಗಳಿದ್ದಿರಬೇಕು. ಕಾಲ ಕಳೆದಂತೆ ತೆಲುಗು ಸಾಹಿತ್ಯ ಅವರ ಜೀವನದಂತೆಯೇ ಉತ್ತರದ ಕಡೆಗೆ ತಿರುಗಿತು. ಅದು ದಕ್ಷಿಣದ ಕಡೆಗೂ ತಿರುಗಿದ್ದರೆ ನಾವು ಎರಡೂ ಕಡೆಯಿಂದ ಲಾಭ ಪಡೆಯುತ್ತಿದ್ದೆವು.

ಅನುವಾದಗಳ ಕಡೆ ಗಮನ ಹರಿಸಿ ಅವರು ಆಚ್ಚರಿಗೊಂಡು ಹೀಗೆಂದಿದ್ದಾರೆ:

''ಆರ್ಯರ ಧಾರ್ಮಿಕ ಗ್ರಂಥಗಳು, ಕಾವ್ಯಗಳು ಹಾಗೂ ನಾಟಕಗಳೂ ಸೇರಿದಂತೆ ಸಂಸ್ಕೃತದಿಂದ ಅನೇಕ ಗ್ರಂಥಗಳು ತೆಲುಗಿಗೆ ಅನುವಾದಗೊಂಡಿರುವಾಗ ತಮಿಳು ಸಾಹಿತ್ಯದಿಂದ ಏನೂ ಅನುವಾದವಾಗದೆ ಇರುವುದಕ್ಕೆ ಕಾರಣವಿಲ್ಲ. ಸಂಸ್ಕೃತದಿಂದ ಅನುವಾದಗಳು, ಪುನರನುವಾದಗಳೂ ಬಂದಿವೆ ! ರಾಮಾಯಣದ ಹಾಗೂ

ಶಾಕುಂತಲದ ತೆಲುಗು ರೂಪಾಂತರಗಳ ಕಡೆಗೆ ದೃಷ್ಟಿಹರಿಸಿ, ಇನ್ನೂ ಎಷ್ಟು ಬರಲಿವೆಯೋ ! ಎಂದು ಉದ್ಗಾರ ಮಾಡಿದ್ದಾರೆ. 'ಮಣಿ ಮೇಖಲೈ' ಯಂತಹ ಅಪೂರ್ವ ಕಲಾಕೃತಿಯನ್ನು ತೆಲುಗಿಗೆ ತರುವ ಪ್ರಯತ್ನವನ್ನು ಏಕೆ ಮಾಡಲಿಲ್ಲವೋ ! ಅಭಿರುಚಿಯ ಅಭಾವವೆ ? ಸಂಪರ್ಕದ ಅಭಾವವೆ ?

ಪಾಲಿಯ ಬೌದ್ಧ ಸಾಹಿತ್ಯಕ್ಕೂ ಇದೇ ಗತಿ ಬಂದಿತು. ಅಶ್ವಘೋಷನ 'ಬುದ್ಧ ಚರಿತ'ದ ಅನುವಾದದ ಗೋಜಿಗೂ ಯಾರೂ ಹೋಗಲಿಲ್ಲ. ಈ ರೀತಿಯ ಸ್ಥಿರವಾದ ಅಸ್ಪೃಶ್ಯತೆಗೆ ಧಾರ್ಮಿಕ ಈರ್ಷ್ಯೆಯೋ ಕಾರಣ ಎಂಬುದು ಅವರ ಅಭಿಪ್ರಾಯ. "ಮಂತ್ರಗಳಂತೆ ತೆಲುಗು ಸಾಹಿತ್ಯವೂ ಬಹಳವಾಗಿ ಬ್ರಾಹ್ಮಣಾಧಿಕ್ಯವುಳ್ಳದ್ದು ನನ್ನೆಚೋಡ ಮತ್ತು ಪಾಲ್ಕುರಿಕೆ ಸೋಮನಾಥನಂಥವರು ಅಜ್ಞಾತರಾಗಿ ಉಳಿದುದಕ್ಕೆ ಇದೇ ಕಾರಣ" ಎನ್ನುತ್ತಾರೆ ರೆಡ್ಡಿ.

ಇದನ್ನು ಮುಂದುವರಿಸುತ್ತಾ ಅವರು "ತಮಿಳು ಸಾಹಿತ್ಯವನ್ನು ಅಸ್ಪೃಶ್ಯವೆಂದು ಪರಿಗಣಿಸದಿದ್ದರೂ ಇಂತಹದೇ ಒಂದು ಕಾರಣ ಇರಬಹುದು. ಕಾರಣವೇನೇ ಇರಲಿ, ನಮಗಾದ ನಷ್ಟಮಾತ್ರ ಗಂಭೀರವಾದುದು. 'ಪೆರಿಯಪುರಾಣ' ದಂತಹ ಭಕ್ತಿ ಮತ್ತು ಜ್ಞಾನದ ಖಣಿಗಳು, ಆಳ್ವಾರರ ಇತಿಹಾಸ, ಶೈವಸಿದ್ಧಾಂತತತ್ತ್ವ ಮುಂತಾದುವನ್ನು ನಾವು ತೆಲುಗಿಗೆ ತಂದುಕೊಂಡಿಲ್ಲ. ಇದಕ್ಕಿಂತ ಹೆಚ್ಚು ಗಂಭೀರವಾದುದು ಆನಂದ ಅಥವಾ ಸಾಹಿತ್ಯಾನಂದದ ನಷ್ಟ. ಮಣಿ ಮೇಖಲೈಯಂತಹ ಅತ್ಯುತ್ತಮ ಕೃತಿಗಳ ಅಧ್ಯಯನದ ಸಂತೋಷವನ್ನು ಪಡೆಯುವುದು ತಪ್ಪಿಹೋಯಿತು. ಇದು ನಮ್ಮ ದುರದೃಷ್ಟ. ತಮಿಳರು ನಮಗೆ ಕೊಟ್ಟಿಲ್ಲವೆಂದಲ್ಲ, ನಾವು (ತೆಲುಗರು) ತೆಗೆದುಕೊಂಡಿಲ್ಲ" ಹೀಗೆ ಹೇಳಿದ್ದಾರೆ.

ಈ ಹಿನ್ನಲೆಯಲ್ಲಿ 'ಕಂಬರಾಮಾಯಣ'ದ ತೆಲುಗು ಅನುವಾದವನ್ನು ಕುರಿತು ಹೇಳುತ್ತಾ, ಭಾರತ ಮತ್ತು ಶ್ರೀಲಂಕಗಳ ನಡುವಿನ ಸೇತುವೆಯಂತೆ ಇದೂ ಒಂದು ಸೇತುವೆಯೆಂದಿದ್ದಾರೆ. ತಮಿಳಿನೊಂದಿಗೆ ತೆಲುಗಿಗಿರುವ ಸಂಬಂಧವನ್ನು ಪುನರುದ್ಧರಿಸಲು ಅವರ ಕೈಲಾದ ಮಟ್ಟಿಗೆ ಪ್ರಯತ್ನ ನಡೆಸಿ ಆರ್ಯರ 'ಮಾರ್ಗ' ವನ್ನು, 'ದ್ರಾವಿಡರ' ದೇಸಿಯನ್ನು ತೆಲುಗು ಸಾಹಿತ್ಯದಲ್ಲಿ ಗುರುತಿಸುವ ಮೂಲಕ ರೆಡ್ಡಿಯವರೇ ಈ ಎರಡು ಮೂಲಗಳ ಕೊಂಡಿಯಾಗಿ ನಿಂತಿದ್ದಾರೆ. ಅಕ್ಷರ ಪ್ರಪಂಚದಲ್ಲಿ ಅವರೇ ಒಂದು ಸೇತುವೆ.

ಅವರು ಕೈಗೊಂಡ ಪುನರುದ್ಧರಣ ಕಾರ್ಯಗಳಲ್ಲಿ ಮುಖ್ಯವಾದ ಇನ್ನೊಂದು ಕೃತಿ ರಂಗನಾಥರಾಮಾಯಣ. ಕೃತಿಯಕರ್ತೃ ಯಾರಾದರಾಗಲಿ (ರಂಗನಾಥ, ಗೋನ ಬುದ್ಧಾರೆಡ್ಡಿ ಅಥವಾ ಇನ್ನಾರಾದರೂ), ತೆಲುಗು ಓದುಗರ ಮನಸ್ಸಿನಲ್ಲಿ ಅದರ ಪ್ರತ್ಯೇಕ ಸೌಂದರ್ಯ ಸ್ಥಿರವಾಗಿದೆ ಎಂದರೆ ಅದು ರೆಡ್ಡಿಯವರ ಮಹಾದೃಷ್ಟಿಯ ವಿಶ್ಲೇಷಣೆ ಮತ್ತು ಬಲವಾದ ಬೆಂಬಲದ ಫಲ. ವಾಲ್ಮೀಕಿಗೆ ಭಿನ್ನವಾದ ಪ್ರಸಂಗಗಳು ಅಪಂಡಿತನ ಪ್ರಕ್ಷಿಪ್ತಗಳೆಂದು ಅಸಮ್ಮತಿಯನ್ನು ತಿಳಿಸುವವರು ಈಗ ಯಾರೂ ಇಲ್ಲ. ಇಂತಹವು ಕಂಬರಾಮಾಯಣ ಮತ್ತು ತುಲಸಿ ರಾಮಾಯಣದಲ್ಲೂ ಇವೆ.

ಇದಕ್ಕಿಂತ ಹೆಚ್ಚಾಗಿ ಬಲವಾದ ಮತ್ತು ಸ್ಥಿರವಾದ ಬೆಂಬಲವನ್ನು ರೆಡ್ಡಿಯವರು ವೇಮನನ ಕಾವ್ಯಗುಣಗಳಿಗೆ ಸೂಚಿಸಿದ್ದಾರೆ. ಬಹುಶಃ ಸಿ. ಪಿ. ಬ್ರೌನ್ ನಂತರ ರೆಡ್ಡಿಯವರೇ ಈ ಸಂತ ಕವಿಯನ್ನು ಶತಮಾನಗಳ ಅಲಕ್ಷ್ಯದಿಂದ, ವ್ಯವಸ್ಥಿತ ವಿರೋಧದಿಂದ ಪಾರುಮಾಡಲು ಶ್ರಮಿಸಿದ್ದಾರೆ. ಪ್ರಸಿದ್ಧ ವಿದ್ವಾಂಸರು, ಮೂರ್ಖ ಪಂಡಿತರು, ವಿದ್ಯಾಗರ್ವಿಗಳು ವೇಮನನನ್ನು ಕೋಪಗೊಂಡ ಕವಿಯೆಂದು, ಅಶ್ಲೀಲವಾಗಿ, ಅವಮಾನಕರವಾಗಿ ಬರೆಯುತ್ತಾನೆಂದು ಇತ್ತೀಚಿನವರೆಗೂ ಹೇಳುತ್ತಿದ್ದರು. ವೇಮನ ಉಗ್ರನೂ, ಕಟುವಾದ ವನೆಂಬುದೇನೋ ನಿಜ. ಅದಕ್ಕೆ ಕಾರಣವುಂಟು. ಆದರೆ ಅವನೊಬ್ಬ ಕವಿ, ನಿಜವಾದ ಮಹಾಕವಿ ಎಂಬುದು ರೆಡ್ಡಿಯವರ ಅಭಿಪ್ರಾಯ. "ಸಂಕ್ಷಿಪ್ತತೆ, ಬುದ್ಧಿವಂತಿಕೆಯು ಆತ್ಮವೆನ್ನುವುದಾದರೆ, ಇವನಿಗಿಂತ ಬುದ್ಧಿವಂತ ಜಗತ್ತಿನಲ್ಲಿಲ್ಲ...ಅವನು ಪ್ರಕೃತಿಕವಿ, ಪ್ರಕೃತಿಸಿದ್ಧಕವಿ."

ಅವರು ಇನ್ನೂ ಹೀಗೆನ್ನುತ್ತಾರೆ :

"ಭಗವಾನ್ ರಾಮಕೃಷ್ಣರು ತುಂಬ ಕೀಳುಜಾತಿಯವರಿಗಿಂತ ತಾವು ಕೀಳು ಜಾತಿಯವರೆಂದು ಹೇಳಿ ಜಾತಿ ಪದ್ಧತಿಯನ್ನು ಜಾತಿ ಭಾವನೆಯನ್ನು ತಿರಸ್ಕರಿಸಿದ್ದಾರೆ. ರಾಮಕೃಷ್ಣರ ಕಾವ್ಯಾತ್ಮಕ ನಿರೀಕ್ಷೆಯಂತೆ ವೇಮನ ರೂಪುಗೊಂಡನೆನ್ನಬಹುದು. ದೇವರೊಂದಿಗೆ ನೀನು ಒಂದಾಗಬೇಕಾದರೆ, ಮಾನವನೊಂದಿಗೆ ನೀನು ಒಂದಾಗಬೇಕು. ಜಾತಿ ಸಾಮಾಜಿಕ ಶಾಪ ಮಾತ್ರವಲ್ಲ, ರಾಜಕೀಯ ದೋಷ...."

ಈ ವಿಷಯವನ್ನು ಒತ್ತಿ ಹೇಳುವಾಗ, ರೆಡ್ಡಿಯವರು ಅತಿಶಯವಾಗಿ ಬರೆದಿದ್ದಾರೆ ನಿಸುತ್ತದೆ. ಏಕೆಂದರೆ, ಸಾಮಾಜಿಕ ವಿಮರ್ಶೆಯೊಂದೇ ಮಹಾಕವಿಯಾಗಲು ಕಾರಣವಲ್ಲ, ಇತರ ವಿಷಯಗಳಾದ ಶೈಲಿ, ಕಲಾತ್ಮಕತೆ ಮತ್ತು ಸ್ಪಷ್ಟವಾದ ಸಂಯಮಗುಣವೂ ಕಾರಣ. ಆದರೂ ಹೀಗೆ ಒತ್ತಿ ಹೇಳುವುದರಿಂದ ದೀರ್ಘಕಾಲದ ನಿರ್ಲಕ್ಷ್ಯ ಮತ್ತು ವಿರೋಧ ಭಾವಗಳ ಪ್ರಭಾವದಿಂದ ಮುಕ್ತಗೊಳಿಸಲು ಸಹಾಯಕವಾಗಿದೆ.

ಒಟ್ಟಿನಲ್ಲಿ ಗಾತ್ರದಲ್ಲಿ ಚಿಕ್ಕದಾದರೂ ಕವಿಯಾಗಿ, ವಿಮರ್ಶಕರಾಗಿ ರೆಡ್ಡಿಯವರ ಕೊಡುಗೆಯ ಪಾತ್ರ ಮುಖ್ಯವಾದುದು, ವಿಶಿಷ್ಟವಾದುದು. ಇದು ತೆಲುಗು ಸಾಹಿತ್ಯಾಭ್ಯಾಸಿಯ ಸ್ಥಿರವಾದ ಸ್ಥಾನವನ್ನು ಪಡೆಯಿತು. ಶತಾಧಿಕಗ್ರಂಥಗಳನ್ನು ಬರೆದವರನ್ನೂ ಅದೃಷ್ಟವಶಾತ್ ಒಮ್ಮೊಮ್ಮೆ ಮರೆಯಲಾಗುವುದು.

## ರೆಡ್ಡಿಯವರ ಜೀವನದ ಮೈಲಿಗಲ್ಲುಗಳು

1880 – ಡಿಸೆಂಬರ್ 10 – ಕಟ್ಟಮಂಚಿಯಲ್ಲಿ ಜನನ.

1896 – ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ.

1897 – ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ಎಫ್. ಎ. ತರಗತಿಗೆ ಪ್ರವೇಶ

1899 – 'ಮುಸಲಮ್ಮ ಮರಣಮು' ರಚನೆ

1901 – ತತ್ತ್ವಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಬಿ. ಎ. ತೇರ್ಗಡೆ

1902 – ಭಾರತ ಸರ್ಕಾರದ ವಿದ್ವಾಂಸನಾಗಿ ಕೇಂಬ್ರಿಡ್ಜ್ ಪ್ರವೇಶ.

1903 – ರೈಟ್ ಬಹುಮಾನದ ಗಳಿಕೆ.

1905 – ಕೇಂಬ್ರಿಡ್ಜಿನ ಲಿಬರಲ್‌ಕ್ಲಬ್‌ಗೆ ಕಾರ್ಯದರ್ಶಿಯಾಗಿ, ಕೇಂಬ್ರಿಡ್ಜ್ ಯೂನಿಯನ್ನಿನ ಉಪಾಧ್ಯಕ್ಷನಾಗಿ ಆಯ್ಕೆ.

1906 – ಇತಿಹಾಸದ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ.

1907 – ಬರೋಡ ಗಾಯಕ್ವಾಡರ ಸಹಾಯದಿಂದ ಅಮೆರಿಕ ಸಂದರ್ಶನ.

1908 – ಭಾರತಕ್ಕೆ ವಾಪಸಾದುದು; ಬರೋಡಾದ ಮಹಾರಾಜ ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿ ನೇಮಕ.

1909 – ಮೈಸೂರಿನ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದುದು.

1912 – 'ಭಾರತ ಅರ್ಥಶಾಸ್ತ್ರಮು' ಪ್ರಕಟಣೆ.

1913 – ಮೈಸೂರಿನ ಯುವರಾಜರೊಂದಿಗೆ ಯೂರೋಪಿಗೆ ಪ್ರಯಾಣ.

1914 – 'ಕವಿತ್ವ ತತ್ತ್ವ ವಿಚಾರಮು' ಪ್ರಕಟಣೆ.

1914 – ಕೆನಡ, ಜಪಾನ್ ಮತ್ತು ಇತರ ದೇಶಗಳಿಗೆ ಶೈಕ್ಷಣಿಕ ಪ್ರವಾಸ.

1916 – 17– ಮೈಸೂರಿನ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರು.

1921 – ಮದರಾಸು ರಾಜಕೀಯದಲ್ಲಿ ಪ್ರವೇಶ.

1922 – 26– ಮದರಾಸಿನ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಆಯ್ಕೆ.

1924 – ಆಂಧ್ರಮಹಾಸಭೆಯ ಅಧ್ಯಕ್ಷ.

1926 – ಆಂಧ್ರ ವಿಶ್ವವಿದ್ಯಾನಿಲಯದ ಕುಲಪತಿ.

1930 – ಸರ್ಕಾರದ ರಾಜಕೀಯವಾದ ತುಳಿತದ ರಾಜನೀತಿಯ ವಿರುದ್ಧ ಕುಲಪತಿಯ ಹುದ್ದೆಗೆ ರಾಜಿನಾಮೆ.

1935 – ಮದ್ರಾಸಿನ ವಿಧಾನ ಪರಿಷತ್ತಿಗೆ ಆಯ್ಕೆ.

1935 – 36– ಚಿತ್ತೂರು ಜಿಲ್ಲಾ ಮಂಡಲಿಯ ಅಧ್ಯಕ್ಷರು.

1936 – ಆಂಧ್ರ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಆಯ್ಕೆ.

1937 – ಅಂತರ ವಿಶ್ವವಿದ್ಯಾಲಯದ ಮಂಡಲಿಯ ಅಧ್ಯಕ್ಷರು.

1942 – ಬ್ರಿಟಿಷ್ ಸರ್ಕಾರದಿಂದ 'ಸರ್' ಬಿರುದು ಪ್ರದಾನ.

1949 – ಜನವರಿ–ಮೈಸೂರಿಗೆ ಆಹ್ವಾನ–ರಾಜ್ಯದ ಶೈಕ್ಷಣಿಕ ಪರಿಸ್ಥಿತಿಯ ಬಗೆಗೆ ವರದಿ ಸಲ್ಲಿಸಲು.

1949 – ಸೆಪ್ಟೆಂಬರ್–ಮೈಸೂರು ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿ ನೇಮಕ.

1951 – ಫೆಬ್ರುವರಿ 24–ಮದರಾಸಿನಲ್ಲಿ ನಿಧನ.

ಅನುಬಂಧ

# ಕಾರ್ಯಾಚರಣೆಯ ಸಾಧನವಾಗಿ ಸಾಹಿತ್ಯ

(ವೀರೇಶಲಿಂಗಂ ಅವರ ಕಾರ್ಯಕ್ಕೆ ಡಾ. ಸಿ. ಆರ್. ರೆಡ್ಡಿಯವರ ಅಭಿನಂದನೆ)

''ಸಾರ್ವಜನಿಕರ ಮನಸ್ಸಿನಲ್ಲಿ ವಿಧವಾ ವಿವಾಹದ ಸಂಬಂಧವಾಗಿ ನೆನಪಿನಲ್ಲಿದ್ದರೂ, ವೀರೇಶಲಿಂಗಂ ಉನ್ನತ ಶಿಕ್ಷಕರು, ಮಹಾ ವಿದ್ವಾಂಸರು ಆಗಿದ್ದರು. ಅವರು ಭಾಷೆಯ ತಜ್ಞರು, ಮಹಾ ಲೇಖಕರು.''

ಆಂಧ್ರ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಡಾ. ಸಿ. ಆರ್. ರೆಡ್ಡಿಯವರು ವೀರೇಶಲಿಂಗಂ ಪಂತುಲು ಅವರನ್ನು ಕುರಿತ ಇಂತಹ ಅಭಿನಂದನೆಯಿಂದ ಆ ನೇತಾರರ ಶತಮಾನೋತ್ಸವವನ್ನು ಮದರಾಸಿನಲ್ಲಿ ಪ್ರಾರಂಭಿಸಿದರು (1948 ರ ಏಪ್ರಿಲ್ 16). ತಮ್ಮ ಆರಂಭ ಭಾಷಣದಲ್ಲಿ ರೆಡ್ಡಿಯವರು ಹೀಗೆಂದರು :

ಝಾನ್ಸಿ ಲಕ್ಷ್ಮೀಬಾಯಿಯಂತಹ ವ್ಯಕ್ತಿಗಳು ತಮ್ಮ ಹಿರಿಮೆ, ಸಾಹಸಗಳನ್ನು ಮೆರೆದಿದ್ದರೂ ಸರಿಯಾದ ಹೊಂದಾಣಿಕೆಯಿಲ್ಲದೆ ಅಪಜಯಕ್ಕೀಡಾದ ಸಿಪಾಯಿ ದಂಗೆಗೆ ಸ್ವಲ್ಪ ವರ್ಷಗಳ ಹಿಂದೆ ವೀರೇಶಲಿಂಗಂ ಜನಿಸಿದರು. ಆಗ ಭಾರತ ದಟ್ಟವಾದ ಕತ್ತಲೆ, ನಿರಾಶೆಯಲ್ಲಿ ಮುಳುಗಿತ್ತು. ಹಿಂದೂಗಳ ಅಂತರಂಗ ಬಲಹೀನತೆ ಯೋಚನಾಪರರನ್ನು ಆಕರ್ಷಿಸಿತು. ತಮ್ಮ ತಮ್ಮಲ್ಲೇ ಒಗ್ಗಟ್ಟಿಲ್ಲದೆ, ಪ್ರಗತಿಶೀಲ ಆಧುನಿಕತೆಯ ನಿಟ್ಟಿನಲ್ಲಿ ಯಾವುದೇ ಮಾರ್ಪಾಡಿಲ್ಲದೆ ಸರಿಯಾದ ಶಕ್ತಿಯುತ ಭವಿಷ್ಯತ್ತಿಲ್ಲವೆಂಬುದು ಅವರಿಗೆ ಗೊತ್ತಿತ್ತು. ಇಂತಹ ಕಾಲದಲ್ಲಿ ಮೂರು ಮೂಲಗಳಿಂದ ಬೆಳಕು ಬಂದಿತು.

ರಾಜಾರಾಮ ಮೋಹನರಾಯ್ ಸ್ವಲ್ಪಮಟ್ಟಿಗೆ ಐರೋಪ್ಯ ಮಾದರಿಗಳನ್ನಾಧರಿಸಿ ನಮ್ಮ ಪುನರ್ನಿರ್ಮಾಣಕಾರ್ಯದಲ್ಲಿ ತೊಡಗಿದರು. ವೇದ ಮತ್ತು ಉಪನಿಷತ್ತುಗಳ ಆಧಾರವನ್ನು ಅವರು ಪಡೆದರೆಂಬುದೇನೋ ನಿಜ. ಆದರೆ, ಅವರ ಬೋಧನೆಗಳು, ಅವರ ಮನಸ್ಸತ್ತ್ವ ಪಾಶ್ಚಾತ್ಯ ಮೂಲದವು. ನಮ್ಮ ಗರ್ವಕ್ಕಿಂತ ಹೆಚ್ಚಾಗಿ ಜಂಭ ನಮ್ಮೆಲ್ಲರ ಅಪಹಾಸ್ಯಕ್ಕೀಡಾದ ಪಶ್ಚಿಮದ ವಿರುದ್ಧ ದಂಗೆ ಎದ್ದಿತು. ಇತರರ ಭಾವಗಳನ್ನು ಅಳವಡಿಸಿಕೊಂಡರೆ ಅದು ಅವಮಾನಕರವೆಂದು ನಾವು ಭಾವಿಸುತ್ತೇವೆ. ರಫ್ತಾದದ್ದೆಲ್ಲ 'ಜಮಾ', ಆಮದಾದದ್ದೆಲ್ಲ 'ಖರ್ಚೆ'ಂದು ನಮ್ಮ ಭಾವನೆ.

ರಾಜಾರಾಮಮೋಹನರಾಯ್ ಇಂಗ್ಲಿಷನ್ನು ಬಳಸಿದರು. ಇಂಗ್ಲಿಷಿನ ಸ್ಥಾನದಿಂದಾಗಿ ಅವರ ಸಂದೇಶ ಬಂಗಾಳಕ್ಕೆ ಮಾತ್ರ ಸೀಮಿತವಾಗದೆ ಇಡೀ ದೇಶಕ್ಕೆ ತಲುಪಿತು. ಆದರೆ ಅವರ ಪ್ರಭಾವ ಮಾತ್ರ ಪ್ರಧಾನವಾಗಿ ಸ್ಥಳೀಯವಾದುದು.

ಪಶ್ಚಿಮ ಭಾರತದಲ್ಲಿ ವೈದಿಕ ಶಿಖರದ ಭಾಗವಾಗಿ ರೂಪುಗೊಂಡ ಘನ ಹಾಗೂ ಧೀರವ್ಯಕ್ತಿತ್ವದ ದಯಾನಂದ ಸರಸ್ವತಿಯ ರೂಪ ಉನ್ನತವಾಗಿ ಮೆರೆಯಿತು. ಹಿಂದೂ ಸಮಾಜವನ್ನು ಸಮಾನತೆ ಮತ್ತು ಆಧುನಿಕ ಪ್ರಗತಿಯ ಮೇಲೆ ಅವರು ಬದಲಾಯಿಸು

ತ್ತಿದ್ದರು. ಆದರೆ ಈ ಬದಲಾವಣೆ ವೇದಗಳ ಉಪದೇಶದಿಂದ ರೂಪುಗೊಂಡು, ನಮ್ಮ ಪ್ರಾಚೀನ ಕಾಲದ ಸರಳವೂ, ಮಹೋನ್ನತವೂ, ಶಕ್ತಿಯುತವೂ ಆದ ಸಮಾಜದ ಕಡೆಗೆ ಒಯ್ಯುತ್ತಿತ್ತು.

ಆರ್ಯ ಸಮಾಜ ಹೆಚ್ಚು ಹುರುಪಿನ, ದೃಢವಾದ ಸಂಸ್ಥೆ. ಇದು ಅಲಂಕಾರ ಪ್ರಾಯವಾದ ಧರ್ಮವಲ್ಲ. ಆರ್ಯ ಸಮಾಜದವರು ಪ್ರಾಚೀನ ವೈದಿಕಾಗ್ನಿಯನ್ನು ಪೂಜಿಸುತ್ತಾರೆ. ಇದೊಂದು ಕೆಂಡದಂತಹ ಸಂಸ್ಥೆಯೇ ಸರಿ.

ಇದೇ ಸಮಯದಲ್ಲಿ ಮೂರನೆಯ ಬೆಳಕೊಂದು ಮಿಂಚಿತು. ಆದರೆ ಇದು ಬೇರೆ ರೀತಿಯದು, ತನ್ನದೇ ಆದ ರೀತಿಯಲ್ಲಿ ಈ ಭೂಮಿಯ ಭವ್ಯಕಾಂತಿ ಅದು. ಆ ಕಾಂತಿಯೇ ರಾಮಕೃಷ್ಣ ಪರಮಹಂಸ.

## ಮಹಾನ್ ಸುಧಾರಕರು

ಆತ್ಮವನ್ನು, ಮನಸ್ಸನ್ನು ಕಲಕುವ ಇಂತಹ ಹಿನ್ನಲೆಯಲ್ಲಿ, ಇತರ ಸುಧಾರಕರು ಬೆಳೆದರು. ಇಂತಹವರಲ್ಲಿ, ಅನೇಕ ವಿಧವಾಗಿ ಬೆಳೆದ ಮಹೋನ್ನತ ಅದ್ಭುತ ವ್ಯಕ್ತಿ ವೀರೇಶಲಿಂಗಂ.

ಯೋಚನೆ ಮಾಡಿ ನೋಡಿ. ಸಾಮಾನ್ಯ ತೆಲುಗು ಬಡ ಪಂಡಿತನೊಬ್ಬ ಜನನಾಯಕ ನಾಗುವುದು, ಹೋರಾಟದ ಮುಖಂಡನಾಗುವುದು, ಅತಿ ಕಷ್ಟ ಕ್ಷೇತ್ರವಾದ ಸಮಾಜ ಸುಧಾರಣೆಯ ಆದ್ಯ ಪ್ರವರ್ತಕನಾಗುವುದನ್ನು ಊಹಿಸಬಲ್ಲಿರಾ? ಒಬ್ಬ ಸಂಸ್ಕೃತ ಪಂಡಿತ, ತಮಿಳು ಪಂಡಿತ, ಕನ್ನಡ ಪಂಡಿತ, ಮಲೆಯಾಳಂ ಪಂಡಿತ, ಅಥವಾ ಯಾವ ಪಂಡಿತನೇ ಆಗಲಿ ಸ್ವಲ್ಪಮಟ್ಟಿನ ಸಾಂಸ್ಕೃತಿಕ ಪ್ರಭಾವವನ್ನು ಬಿಟ್ಟು, ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಬೇಸರ ತರುವುದನ್ನು ಬಿಟ್ಟು ಹೆಚ್ಚಿಗೆ ಇನ್ನೇನಾದರು ಮಾಡಿದ್ದನ್ನು ಕೇಳಿದ್ದೀರಾ? ಭಾರತ ಇಂದಿಗಿಂತ ಆಧುನಿಕತೆಯಲ್ಲಿ ತುಂಬ ಹಿಂದಿದ್ದಾಗ, ಬೇರೆ ದೇಶ ಗಳಿಂದ ಬೇರ್ಪಟ್ಟಿದ್ದಾಗ, ಅಂಧ ಶ್ರದ್ಧೆಯೊಂದಿಗೆ ಹೋರಾಡುವ ಇಂತಹ ಪಂಡಿತ ನನ್ನು ನೋಡಿದ್ದೀರಾ? ಕಾಲ ಅವರಿಗೆ ವಿರೋಧವಾಗಿತ್ತು, ಆದರೆ ಅವರು ಕಾಲ ಪುರುಷನೊಂದಿಗೆ ಹೋರಾಡಿ ಗೆದ್ದರು.

ರಾಜಾ ರಾಮ ಮೋಹನರಾಯರಂತೆ ವೀರೇಶಲಿಂಗಂ ವೈಭವೋಪೇತ ವ್ಯಕ್ತಿ ಯಲ್ಲ. ದಯಾನಂದರಂತೆ ವಿನಯವೂ ಸೇರಿದ ಶಿಸ್ತಿತ್ವದಿಂದ ಎಲ್ಲರ ಗೌರವಾಭಿಮಾನ ಗಳನ್ನು ಗಳಿಸುವ ಮಹೋನ್ನತ ವ್ಯಕ್ತಿತ್ವವೂ ಅಲ್ಲ. ಆದರೂ ವೀರೇಶಲಿಂಗಂ ರಾಮ ಮೋಹನ್ ಅಥವಾ ದಯಾನಂದರಷ್ಟೇ ದೃಢವಾಗಿ ಹೋರಾಡಿದರು. ನಾವು ತುಂಬ ಭಾವುಕರಾಗುವ ವಿಷಯಗಳಾದ ಲೈಂಗಿಕತೆ ಮತ್ತು ವಿಧವಾ ವಿವಾಹಗಳಲ್ಲಿ ಬ್ರಾಹ್ಮಣರ ಅಂಧ ಶ್ರದ್ಧೆಯನ್ನು ಅವರು ಪ್ರತಿಭಟಿಸಬೇಕಾಯಿತು. ತಮ್ಮ ವಾದಕ್ಕೆ ಅನುಕೂಲ ವಾಗುವಂತೆ ಅವರು ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಆದರೆ ಅವರದು ರಾಜಾ ರಾಮ ಮೋಹನರಾಯರಂತೆ ವಾದ ಪ್ರತಿವಾದ ಪದ್ಧತಿಯೇ ಹೊರತು ದಯಾನಂದ

ಸರಸ್ವತಿಯವರಂತೆ ಕಠಿಣ ಮತ್ತು ದರ್ಪದ ಮಾರ್ಗವಲ್ಲ. ಅವರು ಮೂಢನಂಬಿಕೆಗಳನ್ನಾಗಲಿ, ರಾಷ್ಟ್ರೀಯತೆಯನ್ನಾಗಲಿ ಅನುಸರಿಸಲಿಲ್ಲ. ಅವರ ಹೋರಾಟದಲ್ಲಿ ದೇವರಾಗಲಿ, ಸ್ವರಾಜ್ಯವಾಗಲಿ ಸೇರಿರಲಿಲ್ಲ.

ಮೂಲಭೂತವಾಗಿ ವೀರೇಶಲಿಂಗಂ ವಿಚಾರವಾದಿ ಮತ್ತು ಮಾನವತಾವಾದಿ. ಆದುದರಿಂದ ಕಾರ್ಯಕಾರಣ ಸಂಬಂಧ ಮತ್ತು ವಿವೇಕ, ನ್ಯಾಯಬದ್ಧತೆ ಹಾಗೂ ಎಲ್ಲರಲ್ಲೂ ಇರುವ ದಯಾಗುಣಗಳ ಕಡೆಗೆ ಅವರ ಒಲವಿತ್ತು. ಅವರ ಈ ಕೆಲಸಗಳಿಗೆ ತೀವ್ರ ಪ್ರತಿಭಟನೆಯೂ ಇತ್ತು. ಅವರ ಮನೆಯನ್ನು ಸುಟ್ಟು ಹಾಕಲು ನಡೆದ ಪ್ರಯತ್ನಗಳ ಬಗೆಗೂ, ರಾಜಮಂಡ್ರಿಯ ವಿದ್ಯಾರ್ಥಿಗಳು ಶ್ರದ್ಧಾ ಭಕ್ತಿಗಳಿಂದ ಅವರ ಮನೆಯನ್ನು ಕಾಪಾಡಿದ ಬಗೆಗೂ ಅವರು ನನಗೆ ಹೇಳಿದರು. ಅವರ ಎದೆಬಿರಿಯುವ ಅನುಭವಗಳಲ್ಲಿ, ಕೆಲವು ಸ್ನೇಹಿತರು ಸುಧಾರಣೆ ಕುರಿತು ಹೇಳುತ್ತಾ ತಮ್ಮ ತಮ್ಮ ಮನೆಗಳಲ್ಲಿ ಮಾತ್ರ ಅದಕ್ಕೆ ಅವಕಾಶವಿದ್ದರೂ ಅನುಸರಿಸದೆ ಇದ್ದುದನ್ನೂ ನನಗೆ ಹೇಳಿದರು. ಅಂತಹವರ ಹೆಸರುಗಳನ್ನು ನಾನು ಹೇಳುವುದಿಲ್ಲವೆಂದು ಹೇಳುತ್ತಾ ಅವರು "ಸತ್ತ ಗತ ಕಾಲ ಸತ್ತವರನ್ನು ಹೂಳಲಿ" ಎಂದರು. ಏಕೆಂದರೆ ಅವರೆಲ್ಲ ಸತ್ತುಹೋದವರು; ವೀರೇಶಲಿಂಗಂ ಮಾತ್ರ ಇನ್ನೂ ಬದುಕಿದ್ದಾರೆ ಅವರು ಜೀವಂತ ವ್ಯಕ್ತಿ, ಅಮರವ್ಯಕ್ತಿ,

**ಶಕ್ತ ವಿಡಂಬನಕಾರ**

ಅವರು ತಮ್ಮ ಕಾರ್ಯಾಚರಣೆಗೆ ಸಾಹಿತ್ಯವನ್ನು ಸಾಧನವಾಗಿ ಬಳಸಿದರು. ಬುದ್ಧಿ ಚಾತುರ್ಯದಿಂದ ಕೂಡಿದ ಅವರ ವಿಡಂಬನೆಗಳಲ್ಲಿ ಕೆಲವು ಮೋಲಿಯವರಿಂದ ಸ್ಫೂರ್ತಿ ಪಡೆದಂಥವು (ತೆಲುಗಿನಲ್ಲಿ 'ಪ್ರಹಸನ' ಎನ್ನುತ್ತಾರೆ). ಅವರು ಹಿಂದೂ ಸಮಾಜವನ್ನು ಟೀಕಿಸಿದರು. ಬಹುಶಃ ಹಿಂದೂ ಮುಖಂಡರನ್ನೂ ಕಟುವಾಗಿ ಟೀಕಿಸಿದರು. ವ್ಯಂಗ್ಯ ಮತ್ತು ಪರಿಹಾಸಗಳಲ್ಲಿ ಅವರು ನುರಿತವರಾಗಿದ್ದರು. ಅಂಧಶ್ರದ್ಧೆಯುಳ್ಳವರನ್ನೂ, ಸುಧಾರಣಾವಿರೋಧಿಗಳನ್ನು ಆಜನ್ಮ ಕಪಟಿಗಳೆಂದು ಅವರು ಭಾವಿಸಿದರು. ಶಾಸ್ತ್ರ ವಿಷಯದಲ್ಲಿ ಅವರನ್ನು ವಿರೋಧಿಸಿದವರೊಂದಿಗೆ ವೀರೇಶಲಿಂಗಂ ಕಟುವಾಗಿದ್ದರೆಂದು ಕಾಣುತ್ತದೆ. ಅವರ ಪದ್ಧತಿ ಏನೇ ಇರಲಿ ಅವರಲ್ಲಿ ಅನೇಕರು ವಿಧೇಯರು. ಪ್ರಜ್ಞಾವಂತರೆಂಬುದರಲ್ಲಿ ಸಂದೇಹವಿಲ್ಲ.

ಸ್ವಿಫ್ಟ್‌ನ 'ಗಲಿವರ್ಸ್ ಟ್ರಾವಲ್ಸ್' ನ ರೂಪಾಂತರ (ಸತ್ಯರಾಜಾ ಪೂರ್ವದೇಶ ಯಾತ್ರಲು) ದಲ್ಲಿ ಹೆಂಗಸರ ಕ್ರೂರ ಆಡಳಿತಕ್ಕೆ ಗಂಡಸರು ಒಳಪಟ್ಟಹಾಗೆ ಚಿತ್ರಿಸಿ, ಸಾಮಾನ್ಯವಾಗಿ ಗಂಡಸರಿಂದ ಹೆಂಗಸರಿಗಾಗುವ ಕೆಡಕು ಮತ್ತು ಅನ್ಯಾಯಗಳನ್ನು ಅವರು ಸೂಚಿಸಿದರು.

ಹೈನ್ ಎಂಬ ಜರ್ಮನ್ ಮಹಾ ಲೇಖಕರು ತಮ್ಮ ಸಮಾಧಿಕಲ್ಲಿನ ಮೇಲೆ ಲೇಖನಿಯನ್ನಲ್ಲದೆ ಕತ್ತಿಯನ್ನು ಕೆತ್ತಬೇಕೆನ್ನುತ್ತಾರೆ. ಅದೇ ರೀತಿ ವೀರೇಶಲಿಂಗಂ ಅವರ ಸಮಾಧಿಕಲ್ಲಿನ ಮೇಲೆ ಅಥವಾ ಸ್ಮಾರಕದ ಮೇಲೆ ಲೇಖನಿಯನ್ನಲ್ಲದೆ, ಕತ್ತಿಯನ್ನೇ ಕೆತ್ತ

ಬೇಕು–ಇನ್ನೂ ನಿಮಗೆ ಇಷ್ಟವಾದರೆ ಆಂಧ್ರದೇಶದ ಸಮಾಜದ ಮೇಲೆ ಬೀರಿದ ಅಖಂಡ ಪ್ರಭಾವವನ್ನು ಸೂಚಿಸುವಂತೆ ಅಣ್ವಸ್ತ್ರವನ್ನು ಕೆತ್ತಬೇಕು.

ವೀರೇಶಲಿಂಗಂ ಅವರಿಗೂ ವಿಧವಾ ವಿವಾಹಕ್ಕು ಜನ ಹೆಚ್ಚಿನ ಸಂಬಂಧವನ್ನು ಕಲ್ಪಿಸುತ್ತಾರೆ. ಅವರ ಕಾರ್ಯಕ್ರಮಗಳಲ್ಲಿ ಇದೊಂದು ಸೂಕ್ಷ್ಮವಾದ ಭಾಗ. ಇದು ಸಾಮಾನ್ಯವಾಗಿ ಹಿಂದೂಗಳನ್ನು, ಅದರಲ್ಲೂ ಪ್ರತ್ಯೇಕವಾಗಿ ಬ್ರಾಹ್ಮಣರನ್ನು ಕಲಕಿದೆ. ಅವರ ಕಾರ್ಯಕ್ರಮ ಹೆಚ್ಚು ಸಮರ್ಪಕವೂ, ತರ್ಕಬದ್ಧವೂ ಆಗಿದೆ. ಸ್ತ್ರೀ ವಿದ್ಯೆ ಅವರ ಹಕ್ಕುಗಳು, ಪುರುಷರೊಂದಿಗೆ ಸಮಾನತೆ, ಗಂಡನೊಂದಿಗೂ ಆಕೆಯ ಸಮಾನತೆಯನ್ನು ಅವರು ಬಯಸಿದರು. ಈ ಧೀರ ಗಂಭೀರ ಹೃದಯ, ವಿರೋಧಿಗಳನ್ನು, ಜನರ ಅಪ್ರಿಯತೆಯನ್ನು ಲೆಕ್ಕಿಸಲಿಲ್ಲ. ಶ್ರದ್ಧಾಳುಗಳಾದ ಅಭಿಮಾನಿಗಳ ಮತ್ತು ಕೆಲಸಗಾರರ ತಂಡವೊಂದು ಅವರಿಗೆ ಬೆಂಬಲವಾಗಿತ್ತು. ಅವರ ಪುಸ್ತಕಗಳು ತೆಲುಗು ದೇಶದುದ್ದಕ್ಕೂ ಮಾರಾಟವಾದವು. ಆ ಕಾಲದಲ್ಲಿ ಅಂಚೆ ವೆಚ್ಚ ಇಂದಿಗಿಂತಲೂ ಕಡಮೆಯಿದ್ದಾಗಲೂ ಅವರು ಸುಮಾರು 30 ರೂಪಾಯಿಗಳನ್ನು ಪ್ರತಿತಿಂಗಳು ಅಂಚೆಚೀಟಿಗಳಿಗೆ ಖರ್ಚು ಮಾಡುತ್ತಿದ್ದರೆಂದು ಅವರಿಂದಲೇ ಕೇಳಿದೆ. ಇದು ಸುಮಾರಾಗಿ ಒಬ್ಬ ತೆಲುಗು ಪಂಡಿತನ ಸಂಬಳಕ್ಕೆ ಸಮ.

ಪುಸ್ತಕಗಳಿಂದ ಅವರು ಹಣಗಳಿಸಿದ್ದರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಹಣಗಳಿಸುವುದೇ ಅವರ ಉದ್ದೇಶವಾಗಿರಲಿಲ್ಲ. ಅಂಧ ಶ್ರದ್ಧೆಯನ್ನು ಮಣ್ಣು ಮುಕ್ಕಿಸುವುದೇ ಅವರ ಉದ್ದೇಶ. ದೃಢಚಿತ್ತದಿಂದ ವಿಚಾರವಾದ ಮತ್ತು ಮಾನವತಾ ವಾದಗಳ ಕಡೆಗೆ ಒಂದೊಂದು ಹೆಜ್ಜೆ ಮುಂದುವರಿದರು. ಕೊನೆಗೆ ಅವರು ತಮ್ಮ ಯಜ್ಞೋಪವೀತವನ್ನೂ ಬಿಟ್ಟರು, ಅದರೊಂದಿಗೆ ತಾವು ಹುಟ್ಟಿದ ಜಾತಿಯನ್ನೂ ಹಿಂದೂ ಅಂಧ ಶ್ರದ್ಧೆಯನ್ನೂ ಬಿಟ್ಟರು. ಬಹುಶಃ ಅವರು ತಾವು ಬ್ರಹ್ಮ ಸಮಾಜದವರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಅವರ ಬ್ರಹ್ಮಸಮಾಜತ್ವ ಹೊರಗಿನಿಂದ ಬಂದದ್ದಲ್ಲ ಅವರಲ್ಲೇ ನೇರವಾಗಿ, ಸರಳವಾಗಿ, ಹುಟ್ಟಿದ್ದು.

### ಮಹಾ ವಿದ್ವಾಂಸರು

ವೀರೇಶಲಿಂಗಂ ತೆಲುಗು ಭಾಷೆಯ ವಿದ್ವನ್ಮಣಿ, ಸಮಕಾಲೀನ ಲೇಖಕರಲ್ಲಿ ಮಹೋನ್ನತರು. ಕಾಳಿದಾಸ ಮುಂತಾದವರ ಪ್ರಾಚೀನ ಗ್ರಂಥಗಳನ್ನು ಅವರು ಅನುವಾದಿಸಿದರು. ಶುದ್ಧಾಂಧ್ರ ನಿರೋಷ್ಠ್ಯ ನಿರ್ವಚನ ನೈಷಧದಂತಹ ಅತ್ಯಂತ ಕೃತಕ ಶೈಲಿಯ ರಚನೆಯನ್ನೂ ಮಾಡಿದರು. ಮಧುರವಾಗಿ, ಉತ್ತಮ ಅಭಿರುಚಿಯಿಂದಲೂ ಸಾಹಿತ್ಯರಚನೆ ಮಾಡಬಲ್ಲವರಾಗಿದ್ದರು. ಸಾಹಿತ್ಯ ಚಮತ್ಕಾರಗಳನ್ನು ನಡೆಸುವ ಶಕ್ತಿಯೂ ಅವರಿಗಿತ್ತು.

ಜಗತ್ತಿನ ಇಂದಿನ ಸಾಹಿತ್ಯ ಪ್ರಕಾರಗಳಾದ ಕಾದಂಬರಿ ಮತ್ತು ವಿಡಂಬನಗಳಿಗೆ ತೆಲುಗಿನಲ್ಲಿ ಅವರು ಆದ್ಯಪ್ರವರ್ತಕರು. ಕಾರ್ಯಾಚರಣೆಯ ವ್ಯಕ್ತಿಯಾಗಿ

ಅವರು ಅಮರತ್ವವನ್ನು ಪಡೆದರು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹಿಂದೂ ಸಮಾಜದ ಶಾಶ್ವತ ಕೃತಜ್ಞತೆಗಳಿಗೆ ಅವರು ಪಾತ್ರರು. ಇಂದು ಹೆಂಗಸರಿಗೆ ಆಸ್ತಿಯ ಹಕ್ಕು ಇದೆ ಎಂದರೆ, ಮಾನವೀಯತೆಯ ದೃಷ್ಟಿಯಿಂದ ಮಾತ್ರವಲ್ಲದೆ ಕಾನೂನಿನ ಪ್ರಕಾರವೂ ಬಾಲ್ಯವಿವಾಹಗಳು ಶಿಕ್ಷಾರ್ಹವಾದುವೆಂದರೆ, ಟೀಕೆಗೂ ಮೀರಿ ವಿಧವಾ ವಿವಾಹಗಳು ಸರ್ವೇಸಾಮಾನ್ಯವಾದುವೆಂದರೆ ಹಿಂದೂ ಸಮಾಜದಲ್ಲಿ ಕಾನೂನುಬದ್ಧ ವಿವಾಹದ ಸಂಪೂರ್ಣ ಸ್ವಾತಂತ್ರ್ಯ ಲಭಿಸಿತೆಂದರೆ, ಈ ಕ್ಷೇತ್ರದಲ್ಲಿ ಜಾತಿಗೆ ಪ್ರಾಧಾನ್ಯ ಕಡಮೆಯಾಯಿತೆಂದರೆ–ಇದಕ್ಕೆಲ್ಲಾ ವೀರೇಶಲಿಂಗಂ ಅವರ ಅಮರ ಜ್ಞಾಪಕ ಚಿತ್ರದ ಮುಂದೆ ಹಿರಿಮೆಯ ಹಾಗೂ ಕೃತಜ್ಞತೆಯ ದೀಪವನ್ನು ಹಚ್ಚಬೇಕು. ನಮ್ಮ ಜನ, ಅದರಲ್ಲೂ ಹೆಂಗಸರು ಭಕ್ತಿಗೌರವಗಳಿಂದ ಅವರ ಮುಂದೆ ಕೈ ಮುಗಿಯಬೇಕು.

ಭಾರತದಲ್ಲಿ ಇಂದು ಸಾಮಾಜಿಕ ವಿವಾಹಗಳು, ಅಂತರ್ಜಾತೀಯ ವಿವಾಹಗಳು, ಹರಿಜನರಿಗೆ ದೇವಸ್ಥಾನಪ್ರವೇಶ, ಹೋಟೆಲ್‌ಗಳಲ್ಲಿ ಸಾಮಾಜಿಕ ವ್ಯತ್ಯಾಸ ತೋರಿಸುವುದಕ್ಕೆ ನಿಷೇಧ ಮುಂತಾದುವುಗಳಿಗೆ ಸಂಬಂಧಿಸಿದಂತೆ ಕಾಯಿದೆಗಳನ್ನು ಮಾಡಲಾಗಿದೆ, ಇತ್ತೀಚಿನ ಕಾನೂನುಗಳಿಗೆ ಹೆಚ್ಚು ಬೆಲೆಯನ್ನು ಕೊಡುವುದರ ಮೂಲಕ, ಹೆಚ್ಚಿನ ಪ್ರಮಾಣವಲ್ಲಿ ಅಭಿಪ್ರಾಯ, ಗುಣಶೀಲಾಭಿವೃದ್ಧಿಯಿಂದ ಮಹಾನ್ ಸುಧಾರಕರ ಕಾರ್ಯಾಚರಣೆಗಳನ್ನು ಸಫಲಗೊಳಿಸಬೇಕು.

ವೀರೇಶಲಿಂಗಂ ಅವರ ಅಭಿಪ್ರಾಯಗಳನ್ನು ವ್ಯಾಪ್ತಿಗೆ ತರುವ ಮೂಲಕ, ಸೌಶೀಲ್ಯ ಅಭಿವೃದ್ಧಿಯ ಮೂಲಕ ಅವರ ಬಗೆಗೆ ನಮಗಿರುವ ಪ್ರೀತಿ ವಿಶ್ವಾಸಗಳನ್ನು ಖಚಿತಪಡಿಸೋಣ.

# ಗ್ರಂಥಸೂಚಿ

## ಡಾ. ಸಿ. ಆರ್. ರೆಡ್ಡಿಯವರ ಕೃತಿಗಳು


**ತೆಲುಗು :**

1. ಕವಿತ್ವ ತತ್ತ್ವವಿಚಾರಮು – ವಿಮರ್ಶೆ (1899), ಆಂಧ್ರ ವಿಶ್ವವಿದ್ಯಾಲಯ 1941
2. ಮುಸಲಮ್ಮ ಮರಣಮು – ಕಾವ್ಯ (1899). ಆಂಧ್ರ ಗ್ರಂಥಾಲಯ ಟ್ರಸ್ಟ್, ಪಟಮಟ (ಕೃಷ್ಣಾಜಿಲ್ಲೆ)–(ಮೊದಲ ಆವೃತ್ತಿ 1940, ಎರಡನೆಯ ಆವೃತ್ತಿ 1960)
3. ವ್ಯಾಸಮಂಜರಿ–ವಿಮರ್ಶಾ ಪ್ರಬಂಧಗಳು – ಆಂಧ್ರ ವಿಶ್ವವಿದ್ಯಾಲಯ, ವಾಲ್ಟೇರು –1947
4. ಭಾರತ ಅರ್ಥಶಾಸ್ತ್ರಮು, ಕಾಳಹಸ್ತಿ ತಮ್ಮಾರಾವ್ ಮತ್ತು ಮಕ್ಕಳು, ರಾಜಮಂಡ್ರಿ, 1958
5. ಪಂಚಮಿ (ಐದು ಪ್ರಬಂಧಗಳ ಸಂಕಲನ)–ಆಂಧ್ರ ವಿಶ್ವವಿದ್ಯಾಲಯ, ವಾಲ್ಟೇರು–1954

**ಇಂಗ್ಲಿಷ್ :**

1. ಕಾಂಗ್ರೆಸ್ ಇನ್ ಆಫೀಸ್ (ಸ್ಪೀಚೆಸ್ ಅಂಡ್ ಅದರ್ ಕಾಂಟ್ರಿಬ್ಯೂಷನ್ಸ್ ಆನ್ ಕಾನ್ಸ್ಟಿಟ್ಯೂಷನಲ್ ಪ್ರಾಬ್ಲಮ್ಸ್)–ಮುಸ್ಲಿಂ ಪಬ್ಲಿಷಿಂಗ್ ಹೌಸ್, ಮೌಂಟ್ ರೋಡ್, ಮದ್ರಾಸು–2 (1940)
2. ಡಾ. ಸಿ. ಆರ್. ರೆಡ್ಡಿ–ಎಸ್ಸೇಸ್ ಅಂಡ್ ಅಡ್ರೆಸೆಸ್ : ಸಂ. ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಆಂಧ್ರ ವಿಶ್ವವಿದ್ಯಾಲಯ, ವಾಲ್ಟೇರು (1960)
3. ಸ್ಪೀಚಸ್ ಅಂಡ್ ಎಸ್ಸೇಸ್ : (ವೇಮನನನ್ನು ಕುರಿತವು ಮತ್ತು ಇತರ ವಿಷಯಗಳು) ನೆಲ್ಲೂರಿನ ವರ್ಧಮಾನ ಸಮಾಜ, ಎಲ್. ಪಿ. ಹಾಲ್ (ಪುರಭವನ), ನೆಲ್ಲೂರು–1 (ಆಂಧ್ರ ಪ್ರದೇಶ)
4. ಕೈಲಾಸಂ ಅವರ 'ಏಕಲವ್ಯ'ವನ್ನು ಕುರಿತ ಪ್ರಬಂಧ – ಟಿ. ಪಿ. ಕೈಲಾಸಂ ಅವರ 'ದಿ ಪರ್ಪಸ್' ನಲ್ಲಿ ಪ್ರಕಟಿತ (ಬಿ. ಎಸ್. ರಾಮರಾವ್, ಜಯನಗರ, ಬೆಂಗಳೂರು–11, ಮೊದಲ ಆವೃತ್ತಿ 1945, ಎರಡನೆ ಆವೃತ್ತಿ, 1966.)
5. ಕೆ. ಸುಂದರ ರಾಘವನ್ ಅವರು ಬರೆದ ಪಿ. ಆನಂದಾಚಾರ್ಲು ಜೀವನ ಚರಿತೆ (ತಮಿಳು) ಗೆ ಮುನ್ನುಡಿ.
6. ಎಂ. ಎನ್. ರಾಯ್ ಅವರ 'ಫ್ರಾಗ್‌ಮೆಂಟ್ಸ್ ಆಫ್ ಎ ಪ್ರಿಸನರ್ಸ್ ಡೈರಿ' ಗೆ ಮುನ್ನುಡಿ
7. ಡೆಮೋಕ್ರಸಿ (ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿ ದತ್ತಿ ಉಪನ್ಯಾಸಗಳು), ಮದ್ರಾಸು, 1949
8. ವಿಶ್ವವಿದ್ಯಾನಿಲಯದ ಸುಧಾರಣೆಯನ್ನು ಕುರಿತ ಉಪನ್ಯಾಸಗಳು (ಮೈಸೂರು)
9 ಆರ್ಟಿಕಲ್ಸ್ ಆನ್ ಆರ್. ಟಿ. ಸಿ. ಅಂಡ್ ಅಡ್ರಸಸ್ ಆನ್ ಅದರ್ ಸಬ್ಜೆಕ್ಟ್ಸ್ (1930—31)

**ಇತರ ಕೃತಿಗಳು**

**ತೆಲುಗು**

1 ಕವಿತ್ವತತ್ತ್ವ ವಿಚಾರ ವಿಮರ್ಶನಮು (ಡಾ. ಸಿ. ಆರ್. ರೆಡ್ಡಿಯವರ ಪುಸ್ತಕವನ್ನು

ಕುರಿತ ಕಲ್ಲೂರಿ ವ್ಯಾಸಮೂರ್ತಿಯವರ ಗ್ರಂಥ (ವಾವಿಳ್ಳ ಮುದ್ರಣಾಲಯ ಮದ್ರಾಸು 1940)

2. ಉಷಾಃ ಕಿರಣಾಲು (19 ನೆಯ ಶತಮಾನದ ಸಾಹಿತ್ಯದ ಅಧ್ಯಯನ) ; ವೈ. ಸತ್ಯನಾರಾಯಣರಾವ್ (ಉತ್ತಮ ಸಾಹಿತಿ, ಮಾಣಿಕ್ಯ ಭವನ್, ರಾಮಚಂದ್ರಪುರಂ, 1960)

3. ಆಧುನಿಕ ಆಂಧ್ರ ಕವಿತ್ವಮು (ಆಧುನಿಕ ತೆಲುಗು ಕಾವ್ಯದಲ್ಲಿ ಸಂಪ್ರದಾಯಗಳು ಮತ್ತು ಪ್ರಯೋಗಗಳು)-ಡಾ. ಸಿ. ನಾರಾಯಣರೆಡ್ಡಿ (1962)

4. ಡಾ. ಸಿ. ಆರ್. ರೆಡ್ಡಿ : ಜಿ. ವೆಂಕಟಸುಬ್ಬಯ್ಯ (ದೇಸಿ ಕವಿತಾ ಮಂಡಲಿ, ವಿಜಯವಾಡ-2, 1963)

5. ತೆಲುಗು – ವಿಶ್ವಕೋಶ, ಸಂ. III, ತೆಲುಗು ಭಾಷಾಸಮಿತಿ, ಮದ್ರಾಸು.

6. ತೆಲುಗು ಸಾಹಿತ್ಯದ ಮೇಲೆ ಇಂಗ್ಲಿಷಿನ ಪ್ರಭಾವ : ಡಾ. ಕೆ. ವೀರಭದ್ರರಾವ್ (ಲೇಖಕರಿಂದ ಪ್ರಕಟಿತ, 1960)

7. ಚಿತ್ತೂರು ಜಿಲ್ಲಾ ಲೇಖಕರ ಸಮ್ಮೇಳನದ ನೆನಪಿನ ಸಂಚಿಕೆ, 1968.

8. ನೇನು-ನಮ್ಮಾಂಧ್ರಮು (ಆತ್ಮಕಥನ) : ಎ. ಕಾಳೇಶ್ವರರಾವ್, ವಿಜಯವಾಡ.

9. ಆಂಧ್ರ ರಚಯಿತಲು (ತೆಲುಗು ಲೇಖಕರು); ಮಧುನಾ ಪಂತುಲ ಸತ್ಯನಾರಾಯಣಶಾಸ್ತ್ರಿ (1950)

ಇಂಗ್ಲಿಷ್ :

1. ಸ್ಟಡೀಸ್ ಇನ್ ಕಳಾಪೂರ್ಣೋದಯಂ : ಡಾ. ಜಿ. ವಿ. ಕೃಷ್ಣಾರಾವ್ (ಸಾಹಿತೀ ಕೇಂದ್ರಂ, ತೆನಾಲಿ, 1956)

2. ಹಿಸ್ಟರಿ ಆಫ್ ತೆಲುಗು ಲಿಟರೇಚರ್ : ಡಾ. ಜಿ. ವಿ. ಸೀತಾಪತಿ (ಸಾಹಿತ್ಯ ಅಕಾದೆಮಿ, ನವದೆಹಲಿ, 1968)

3. ಕಂಟೆಂಪೊರರಿ ಇಂಡಿಯನ್ ಲಿಟರೇಚರ್-ಎ ಸಿಂಪೋಸಿಯಂ (ಸಾಹಿತ್ಯ ಅಕಾಡೆಮಿ ನವದೆಹಲಿ, 1957).

4. ಲಿಟರೇಚರ್ಸ್ ಇನ್ ದಿ ಮಾಡರನ್ ಇಂಡಿಯನ್ ಲ್ಯಾಂಗ್ವೇಜಸ್ : (ಪಬ್ಲಿಕೇಷನ್ ಡಿವಿಜನ್, 1957).

5. ಮಾಡರನ್ ಇಂಡಿಯನ್ ಲಿಟರೇಚರ್ಸ್ : ಸಂ. ಡಾ. ನಾಗೇಂದ್ರ

6. ಮೆನ್ ಇನ್ ದಿ ಲೈಮ್‌ಲೈಟ್ : ಖಾಸಾ ಸುಬ್ಬಾರಾವ್ (ಮದ್ರಾಸು, 1941)

7. ಸೈಡ್ ಲೈಟ್ಸ್ 'ಶಕ' (ಖಾಸಾ ಸುಬ್ಬಾರಾವ್) (ಲ್ಯಾಂಗ್ವೇಜ್ ಪಬ್ಲಿಕೇಷನ್ಸ್, ಮದ್ರಾಸು, 1944).

8. ಮೈ ಪೇಟ್ರಿಯಟ್ ಗ್ಯಾಲರಿ : ಕೆ. ಈಶ್ವರದತ್ (ತ್ರಿವೇಣಿ ಪಬ್ಲಿಷರ್ಸ್, ಮಚಿಲಿಪಟ್ನಂ 1957)

9. ಸ್ಟ್ರೀಟ್ ಆಫ್ ಇಂಕ್ (ಆತ್ಮಕಥನ)-ಕೆ. ಈಶ್ವರದತ್ (ತ್ರಿವೇಣಿ ಪಬ್ಲಿಷರ್ಸ್ ಮಚಿಲಿಪಟ್ನಂ ; 1956).

10. ಸ್ಪಾರ್ಕ್ಸ್ ಅಂಡ್ ಫ್ಯೂಮ್ಸ್ : ಕೆ. ಈಶ್ವರದತ್ (ಆಂಧ್ರ ನಾಯಕರನ್ನು ಕುರಿತ ರೇಖಾ ಚಿತ್ರಗಳು) (ಮದ್ರಾಸು, 1929)

117200
10.12.04
SHIMLA

ಡಾ. ಕಟ್ಟಮಂಚಿ ರಾಮಲಿಂಗಾರೆಡ್ಡಿ (1880-1951) ಶಿಕ್ಷಣತಜ್ಞರು ಹಾಗೂ ರಾಜಕೀಯ ವಿಚಾರಪರರು, ಪ್ರಬಂಧಕಾರರು ಹಾಗೂ ಆರ್ಥಿಕತಜ್ಞರು, ಕವಿ ಹಾಗೂ ಸಾಹಿತ್ಯ ವಿಮರ್ಶಕರು ಆಗಿದ್ದರು. ಅವರು ತೆಲುಗು ಮತ್ತು ಇಂಗ್ಲಿಷ್‌ಗಳಲ್ಲಿ ತಮ್ಮ ಕೃತಿಗಳನ್ನು ಬರೆದಿದ್ದಾರೆ. ಇವು ಪ್ರಾಚೀನ ಗ್ರಂಥಗಳಲ್ಲಿ ಅವರಿಗಿದ್ದ ಪಾಂಡಿತ್ಯವನ್ನು, ಪ್ರೇಮವನ್ನು ಮಾತ್ರವಲ್ಲದೆ, ಅವರ ಆಧುನಿಕ ದೃಷ್ಟಿಕೋನವನ್ನು ತಿಳಿಸುತ್ತವೆ. ಡಾ. ರೆಡ್ಡಿಯವರನ್ನು ದ್ರಾವಿಡ ಪಂಥದ ಸಾಹಿತ್ಯದ ಆಧುನಿಕ ಪ್ರವರ್ತಕರೆಂದು ಹೇಳುವುದು ಸೂಕ್ತ. ತೆಲುಗರ ಸಾಹಿತ್ಯದಲ್ಲಿ ದ್ರಾವಿಡ ಅಂಶವನ್ನು, ತಮಿಳರೊಂದಿಗಿರುವ ಸಂಬಂಧವನ್ನು ಅವರು ಬೆಳಕಿಗೆ ತಂದಿದ್ದಾರೆ. ತೆಲುಗು ಸಾಹಿತ್ಯಕ್ಕೆ ಕವಿಯಾಗಿ ಅಥವಾ ವಿಮರ್ಶಕರಾಗಿ ಅವರ ಕೊಡುಗೆ ಗಾತ್ರದಲ್ಲಿ ಕಡಿಮೆಯಿದ್ದರೂ, ಶಕ್ತಿಯುತವೂ, ಪ್ರಭಾವಶೀಲವೂ. ವಿಶಿಷ್ಟವೂ ಆಗಿದೆ.

ಈ ಕಿರು ಹೊತ್ತಿಗೆಯ ಲೇಖಕರಾದ ಶ್ರೀ ಡಿ. ಆಂಜನೇಯಲು ತೆಲುಗು ಸಾಹಿತ್ಯದ ಬಗೆಗೆ ಇಂಗ್ಲಿಷಿನಲ್ಲಿ ಹೇರಳವಾಗಿ ಬರೆದಿದ್ದಾರೆ. 'ವಿಂಡೊ ಆನ್ ದಿ ವೆಸ್ಟ್' ಎಂಬ ಅವರ ಪ್ರವಾಸ ಕಥನ ಪ್ರಶಂಸೆ ಗಳಿಸಿದೆ. ಅನುಭವಶೀಲ ಪತ್ರಿಕೋದ್ಯಮಿಯಾದ ಇವರು ಈಗ ಭಾರತ ಸರ್ಕಾರದ ಪ್ರಕಟಣಾ ವಿಭಾಗದಲ್ಲಿ ಒಬ್ಬ ಸಂಪಾದಕರಾಗಿದ್ದಾರೆ.

[ತುದಿ ಹಾಳೆಗಳಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ಮೂವರು ಭವಿಷ್ಯವಾದಿಗಳು ಭಗವಾನ್ ಬುದ್ಧನ ತಾಯಿ ರಾಣಿ ಮಾಯಾಳ ಕನಸನ್ನು ರಾಜ ಶುದ್ಧೋದನನಿಗೆ ವಿವರಿಸುವ ದೃಶ್ಯವಿದೆ. ಅವುಗಳ ಕೆಳಗೆ ಆ ವಿವರಣೆಯನ್ನು ಬರೆದುಕೊಳ್ಳುತ್ತಿರುವ ಬರಹಗಾರ ಕುಳಿತಿದ್ದಾನೆ. ಬಹುಶಃ ಇದುವೇ ಭಾರತದ ಬರವಣಿಗೆಯ ಕಲೆಯನ್ನು ಕುರಿತ ಪ್ರಥಮ ಸಚಿತ್ರ ದಾಖಲೆಯಾಗಿದೆ.

ಸ್ಥಳ : ನಾಗಾರ್ಜುನ ಕೊಂಡದಿಂದ - ಕ್ರಿ. ಶ. ಎರಡನೆಯ ಶತಮಾನ

ಕೃಪೆ : ನ್ಯಾಷನಲ್ ಮ್ಯೂಸಿಯಂ, ನವದೆಹಲಿ]

ಮುಖಪುಟ ವಿನ್ಯಾಸ : ಸತ್ಯಜಿತ್‌ರಾಯ್

ರೇಖಾಚಿತ್ರ : ಬಿ. ಡಿ. ಶರ್ಮ

SAHITYA AKADEMI
REVISED PRICE Rs. 15.00

Library IIAS, Shimla
K 891.482 092 R 246 R
00117200